ಡಿಸೆಂಬರ್ 2023
ಬೆಲೆ ರೂ.1

ದೆಹಲಿ ಕರ್ನಾಟಕ ಸಂಘದ

# ಅಭಿಮತ




**ಪದ್ಮಭೂಷಣ ಶ್ರೀಮತಿ ಡಾ. ಸುಧಾಮೂರ್ತಿ ಅವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಗೌರವಿಸಿ ಅಭಿನಂದಿಸಿದ ಕ್ಷಣ**




**ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಡಿಸಿಪಿ ಶ್ರೀ ಬಿ.ಎಲ್. ಸುರೇಶ್ ಮತ್ತು ಡಾ. ನೀಲಿಮಾ ಉದಯ ಭಟ್ ಅವರಿಗೆ 2023 ರ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಮಾಡಿದ ದೃಶ್ಯ**




ಶ್ರೀಮತಿ (ಡಾ.) ಸುಧಾ ಮೂರ್ತಿ ಅವರನ್ನು ಅಭಿನಂದಿಸಿದ ಸಂದರ್ಭ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಮತ್ತು ಸದಸ್ಯರೊಂದಿಗೆ ಅವಿಸ್ಮರಣೀಯ ದೃಶ್ಯ



ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ವತಿಯಿಂದ ಶ್ರೀಮತಿ (ಡಾ.) ಸುಧಾ ಮೂರ್ತಿ ಅವರಿಗೆ ಗೌರವ ಸಮರ್ಪಣೆ ಮಾಡಿದ ಕ್ಷಣ



ಶ್ರೀಮತಿ ಸರೋಜ ಮಾಧವ, ಶ್ರೀಮತಿ ಸುಮಿತಾ ಮುರಗೋಡ ಮತ್ತು ಶ್ರೀಮತಿ ಸವಿತಾ ನೆಲ್ಲಿ ಅವರ ಜೊತೆ ಅಭಿನಂದನಾ ಕಾರ್ಯಕ್ರಮ ನಿರ್ವಹಿಸಿದ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್



ಶ್ರೀಮತಿ (ಡಾ.) ಸುಧಾ ಮೂರ್ತಿ ಅವರೊಂದಿಗೆ ದೆಹಲಿ ಕನ್ನಡಿಗರ ಸೆಲ್ಫಿ ಟೈಮ್

# ಅಭಿಮತ

ದೆಹಲಿ ಕರ್ನಾಟಕ ಸಂಘದ

ಸಂಪುಟ 34 । ಸಂಚಿಕೆ 3

ಡಿಸೆಂಬರ್ 2023



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ

ಕೆ.ಎಸ್. ಮೂರ್ತಿ

ಸದಸ್ಯರು

ಎಸ್. ಕೃಷ್ಣ ಭಟ್

ಯಲ್ಲಾಲಿಂಗ ಕೊಪ್ಪದ

ತಿಮ್ಮಪ್ಪ ಜಿ.ಆರ್.

ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು

ಸಿ.ಎಂ. ನಾಗರಾಜ

ಉಪಾಧ್ಯಕ್ಷರು

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ

ಆರ್. ರೇಣುಕುಮಾರ್

ಕೋಶಾಧಿಕಾರಿ

ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು

ಬಿ. ನಾರಾಯಣ

ಸುಮಿತಾ ಮುರಗೋಡ

ಸಮಿತಿ ಸದಸ್ಯರು

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಎಸ್. ಕೃಷ್ಣ ಭಟ್

ವಸಂತ ಕುಮಾರ್ ಎಂ.ಬಿ.

**ಕಾವಲು ಸಮಿತಿ**

ಅನಂತರಾಮ ಅರಳ

ಸಂಜೀವ ದೇಶಪಾಂಡೆ

ಐ. ಶಂಭುಲಿಂಗಪ್ಪ


## ಸಂಪಾದಕೀಯ ಮನದಾಳದಿಂದ...

# ಕನ್ನಡಿಗರ ಉಸಿರಾಗಿ ಪ್ರತಿಧ್ವನಿಸಿತು ಕನ್ನಡ ಹಬ್ಬದ ಕಲರವ, ಕಂಗೊಳಿಸಿತು ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮ

ಆತ್ಮೀಯ ಅಭಿಮತ ಓದುಗ ಬಂಧುಗಳಿಗೆ ನಮಸ್ಕಾರ.

ಎಲ್ಲ ಕನ್ನಡ ಮನಸುಗಳಿಗೆ, ಕಳೆದ ತಿಂಗಳು ನವೆಂಬರ್ ಒಂದರಿಂದ ಆಚರಿಸುತ್ತಿರುವ ಕರ್ನಾಟಕ ಸುವರ್ಣ ಸಂಭ್ರಮ ಮತ್ತು 68ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಹಾರ್ದಿಕ ಅಭಿನಂದನೆಗಳು. ಈ ಕನ್ನಡ ಹಬ್ಬವನ್ನು ಕರುನಾಡಿನಾದ್ಯಂತ, ದೇಶದ ಎಲ್ಲೆಡೆ ಮತ್ತು ದೆಹಲಿ ಎನ್‌ಸಿಆರ್ ನಲ್ಲಿಯೂ ಎಲ್ಲ ಕನ್ನಡಿಗರು ಒಟ್ಟಾಗಿ ಸೇರಿ ಬಹಳ ಉತ್ಸಾಹದೊಂದಿಗೆ ಸಡಗರ ಸಂಭ್ರಮದಿಂದ ಆಚರಿಸಿದ್ದೇವೆ. ನವಂಬರ್ ಒಂದರಿಂದ ಪ್ರಾರಂಭವಾಗಿ ಪೂರ್ತಿ ತಿಂಗಳು ಆಯೋಜನೆಗೊಂಡ ರಾಜ್ಯೋತ್ಸವದ ನಾನಾ ಕಾರ್ಯಕ್ರಮಗಳು ಹೊರನಾಡ ಕನ್ನಡಿಗರಲ್ಲಿ ಕನ್ನಡ ನಾಡು, ಭಾಷೆ, ಕಲೆ, ಸಂಗೀತ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಹೆಮ್ಮೆ, ಅಭಿರುಚಿ, ಅಭಿಮಾನ ಮತ್ತು ಗೌರವವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿವೆ. ನವೆಂಬರ್ 1 ಮತ್ತು 26 ರಂದು ಸಂಘದಲ್ಲಿ ಆಯೋಜನೆಗೊಂಡ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮಗಳು ಮತ್ತು ನ.19 ರಂದು ಸಂಘದ ಸಂಪೂರ್ಣ ಸಹಕಾರದಲ್ಲಿ ಗುರುಗಾಂವ್ ಕನ್ನಡ ಸಂಘ ಆಯೋಜಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವು ಭಾಗವಹಿಸಿದ ಕನ್ನಡಿಗರಿಗೆ ಹಬ್ಬದ ವಾತಾವರಣವನ್ನೇ ಸೃಷ್ಟಿ ಮಾಡಿದವು. ಕರ್ನಾಟಕ ಸಂಘದ ಈ ವರ್ಷದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತ ನಾಲ್ವರೂ ಸಾಧಕರು,ಹಿರಿಯ ದೆಹಲಿ ಕನ್ನಡಿಗರಿಗೆ ಹಾಗು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬಾಲ ಸಾಹಿತ್ಯ ಪುರಸ್ಕಾರ ಪಡೆದ ಪದ್ಮಭೂಷಣ ಶ್ರೀಮತಿ (ಡಾ.) ಸುಧಾ ಮೂರ್ತಿ ಮತ್ತು ಶ್ರೀಮತಿ ವಿಜಯಶ್ರೀ ಹಾಲಾಡಿ ಅವರಿಗೆ ಅಭಿಮತ ಓದುಗರ ಪರವಾಗಿ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕಳೆದ ನವೆಂಬರ್ ತಿಂಗಳಲ್ಲಿ ನಾವೆಲ್ಲರೂ ಬಹಳ ಸಂಭ್ರಮದಿಂದ ಆಚರಿಸಿದ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳನ್ನು ತಿಳಿಸುತ್ತಾ ನರಕ ಚತುರ್ದಶಿ, ಲಕ್ಷ್ಮೀ ಪೂಜೆ, ಬಲಿಪಾಡ್ಯಮಿ ಮತ್ತು ಗೋವರ್ಧನ ಪೂಜೆಯ ಸಾಂಪ್ರದಾಯಿಕವಾದ ಆಚರಣೆಯ ಬೆಳಕಿನ ಹಬ್ಬವು ನಿಮ್ಮೆಲ್ಲರ ಜೀವನದಲ್ಲಿ ಹೆಚ್ಚಿನ ಆರೋಗ್ಯ, ಸುಖ, ಶಾಂತಿ, ಸಂತೋಷ, ನೆಮ್ಮದಿ ಮತ್ತು ಸಮೃದ್ಧಿಯನ್ನು ಕರುಣಿಸುತ್ತಿರಲೆಂದು ನಾನು ಆಶಿಸುತ್ತೇನೆ. ಹಾಗೇನೆ ನ.14ರಂದು ಆಚರಿಸಿದ ಚಾಚಾ ನೆಹರು ಜನ್ಮ ಜಯಂತಿ ಸ್ಮರಣಾರ್ಥ ಮಕ್ಕಳ ದಿನಾಚರಣೆ, ನ. 26ರ ಸಂವಿಧಾನ ದಿನಾಚರಣೆ, ನ.27ರ ಗುರುನಾನಕ್ ಜಯಂತಿ ಮತ್ತು ನ. 30ರ ಕನಕದಾಸ ಜಯಂತಿಯ ಹಾರ್ದಿಕ ಶುಭಾಶಯಗಳು ಮತ್ತು ಅಭಿನಂದನೆಗಳು.

ನವಂಬರ್ 15ರಂದು ನವದೆಹಲಿಯ ಲೋಧಿ ರಸ್ತೆ ಸಮೀಪದಲ್ಲಿರುವ ಶ್ರೀ ಸತ್ಯಸಾಯಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕೇಂದ್ರ ಮತ್ತು ದೆಹಲಿ ಘಟಕಗಳ ಸಂಯುಕ್ತ ಆಶ್ರಯದಲ್ಲಿ,ದೆಹಲಿ ಕರ್ನಾಟಕ ಸಂಘದ ಸಹಕಾರದಲ್ಲಿ ಮತ್ತು ದೆಹಲಿ ಕನ್ನಡ ಶಾಲೆ ಸಹಯೋಗದೊಂದಿಗೆ ಆಯೋಜನೆಗೊಂಡ **'ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ 2023'** ಅಭೂತಪೂರ್ವ ಯಶಸ್ಸು ಕಂಡಿದೆ. ಕರ್ನಾಟಕದಿಂದ ಬಂದಿದ್ದ 400ಕ್ಕೂ ಹೆಚ್ಚು ಮಕ್ಕಳು ಮತ್ತು ಪೋಷಕರು ಸೇರಿದಂತೆ ದೆಹಲಿ ಎನ್‌ಸಿಆರ್ ನ ಮಕ್ಕಳು, ಪೋಷಕರು ಮತ್ತು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೊರನಾಡ ಕನ್ನಡಿಗರು ಈ ಐತಿಹಾಸಿಕ ಸಮ್ಮೇಳನದಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಿದ್ದಾರೆ. ಈ ಚಾರಿತ್ರಿಕ ದಾಖಲೆಯ ಸಮ್ಮೇಳನದಲ್ಲಿ ವಿಜ್ರಂಭಣೆಯ ಮೆರವಣಿಗೆ, ತುಂಬಿ ತುಳುಕಿದ್ದ ಸಭಾಂಗಣದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮ, ಮಕ್ಕಳ ಪ್ರಧಾನ ವಿಚಾರಗೋಷ್ಠಿಗಳು, ಕವಿಗೋಷ್ಠಿ, ಸಂವಾದ, ಸಮಾರೋಪ ಸಮಾರಂಭ, ಅಭಿನಂದನೆ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನಮ್ಮ ದೆಹಲಿ ಕನ್ನಡಿಗರು ಸಾಕ್ಷಿಯಾಗಿದ್ದಾರೆ. ಈ ಸಮ್ಮೇಳನದ ಯಶಸ್ಸಿಗೆ ಪ್ರಮುಖ ರೂವಾರಿಗಳಾದ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎನ್. ಅಶೋಕ್, ಪ್ರಧಾನ ಕಾರ್ಯದರ್ಶಿ ಶ್ರೀ ಎಚ್.ವಿ. ಸಿದ್ದೇಶ್, ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಸಿ.ಎಸ್. ಅರುಣ್, ದೆಹಲಿ ಘಟಕದ ಗೌರವಾಧ್ಯಕ್ಷರಾದ ಶ್ರೀ ಪಿ. ಜಯರಾಜ್, ಅಧ್ಯಕ್ಷರಾದ ಶ್ರೀ ಅರವಿಂದ ಬಿಜ್ಜೈ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ರತ್ನ, ಕೇಂದ್ರ ಸಮಿತಿಯ ಪದಾಧಿಕಾರಿಗಳು, ನಿರ್ದೇಶಕರು, ಜಿಲ್ಲಾಧ್ಯಕ್ಷರುಗಳು, ದೆಹಲಿ ಘಟಕದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಗೌರವ ಸಲಹೆಗಾರರಿಗೆ ಹಾರ್ದಿಕ ಅಭಿನಂದನೆಗಳು.

ಬಂಧುಗಳೇ, ನವೆಂಬರ್ ತಿಂಗಳಲ್ಲಿ ಸಂಘದಲ್ಲಿ ಆಯೋಜನೆಗೊಂಡ ರಾಜ್ಯೋತ್ಸವ ಸಂಭ್ರಮ ಮತ್ತು ವಿವಿಧ ಕಾರ್ಯಕ್ರಮಗಳು, ಡಾ. ಸುಧಾ ಮೂರ್ತಿ ಮತ್ತು ಶ್ರೀಮತಿ ವಿಜಯಶ್ರೀ ಹಾಲಾಡಿ ಅವರ ಅಭಿನಂದನಾ ಕಾರ್ಯಕ್ರಮ ಮತ್ತು ನವದೆಹಲಿಯಲ್ಲಿ ಜರುಗಿದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದ ವರದಿಗಳು, ದೊಡ್ಡ ಕರುಳಿನ ಕ್ಯಾನ್ಸರ್ ಸಂಬಂಧಿತ ವಿಶೇಷ ವೈದ್ಯಕೀಯ ಲೇಖನ, ತಿಂಗಳ ವ್ಯಕ್ತಿ ಶ್ರೀ ಎನ್.ಎ. ಮಾಧವ ಅವರ ಕುರಿತು ಲೇಖನ, ಶ್ರೀ ಜಯಪ್ರಕಾಶ್ ಪುತ್ತೂರು ಅವರ 'ಬದುಕಲು ಬಿಡಿ ಪ್ಲೀಸ್' ಕೃತಿ ಅವಲೋಕನ ಮತ್ತು ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳ ವರದಿಗಳನ್ನೊಳಗೊಂಡ ಅಭಿಮತದ ಡಿಸೆಂಬರ್ ತಿಂಗಳ ಈ ಸಂಚಿಕೆಯು ನಿಮ್ಮ ಕೈ ಸೇರುತ್ತಿದೆ. ಎಂದಿನಂತೆ ನಿಮ್ಮ ಅಭಿಮತವನ್ನು ಪ್ರೋತ್ಸಾಹಿಸಿ, ಸಲಹೆ ಮತ್ತು ಅನಿಸಿಕೆಗಳನ್ನು ನೀಡಿ ಮುನ್ನಡೆಸಿ. **ಮುಂಬರುವ ಕ್ರಿಸ್ಮಸ್ ಆಚರಣೆ ಮತ್ತು ಹೊಸ ವರ್ಷ 2024 ರ ತುಂಬು ಹೃದಯದ ಶುಭಾಶಯಗಳು.**

ಶುಭ ವಂದನೆಗಳೊಂದಿಗೆ,

**ಕೆ. ಶ್ರೀನಿವಾಸ ಮೂರ್ತಿ**

ಪ್ರಧಾನ ಸಂಪಾದಕರು









## ಅಧ್ಯಕ್ಷರ ನುಡಿ



ಆತ್ಮೀಯರೇ, ಎಂದಿನಂತೆ ಪ್ರತಿ ವರ್ಷ ನವೆಂಬರ್ ಕರ್ನಾಟಕ ರಾಜ್ಯೋತ್ಸವದ ತಿಂಗಳು. ಈ ಶುಭ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಯಶಸ್ವಿಯಾಗಿ ಜರುಗಿದ ಅನೇಕ ವಿಶೇಷ ಕಾರ್ಯಕ್ರಮಗಳಿಗೆ ದೆಹಲಿ ಮತ್ತು ಎನ್.ಸಿ.ಆರ್ ನ ಸಾವಿರಾರು ಕನ್ನಡ ಬಾಂಧವರು ಸಾಕ್ಷಿಯಾಗಿದ್ದಾರೆ. ಈ ತಿಂಗಳ ಒಂದನೇ ತಾರೀಖು ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸಲುವಾಗಿ ಸಂಘದ ಆವರಣದಲ್ಲಿ ಬೆಳಿಗ್ಗೆ ಧ್ವಜಾರೋಹಣ ಮಾಡುವ ಮೂಲಕ ಆರಂಭವಾಯಿತು. ಅದೇ ದಿನ ಸಂಜೆ ದೆಹಲಿ ಕರ್ನಾಟಕ ಸಂಘದ ಸಂಪೂರ್ಣ ಸಹಕಾರದೊಂದಿಗೆ ಕರ್ನಾಟಕ ಸರ್ಕಾರದ ನವದೆಹಲಿಯ ಕರ್ನಾಟಕ ಭವನದ ಕಾರ್ಯಕ್ರಮವೂ ಸೊಗಸಾಗಿ ಮೂಡಿಬಂದು ಯಶಸ್ವಿಯಾಗಿದೆ.

ಇನ್ಫೋಸಿಸ್ ಫೌಂಡೇಶನ್‌ನ ಮುಖ್ಯಸ್ಥೆ ಶ್ರೀಮತಿ ಡಾ. ಸುಧಾ ಮೂರ್ತಿ ಅಮ್ಮನವರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಕರೆತರಬೇಕೆಂಬುದು ಸುಮಾರು ವರ್ಷಗಳಿಂದ ನಮ್ಮ ಕನಸಾಗಿತ್ತು. ಈ ನಿಟ್ಟಿನಲ್ಲಿ ಹಲವಾರು ಬಾರಿ ಪ್ರಯತ್ನ ಪಟ್ಟಿದ್ದೆ. ಆದರೆ ಅವರ ಸಮಯ ನಮಗೆ ಸಿಕ್ಕಿರಲಿಲ್ಲ. ಈ ಬಾರಿ ಅಂತಹ ಶುಭ ಸಂದರ್ಭ ನಮಗೆ ಸಿಕ್ಕೇ ಬಿಟ್ಟಿತು. ನವೆಂಬರ್ 9ನೇ ತಾರೀಖು ದೆಹಲಿ ಕರ್ನಾಟಕ ಸಂಘಕ್ಕೆ ಬರಲು ಮಾನ್ಯ ಶ್ರೀಮತಿ ಸುಧಾ ಮೂರ್ತಿ ಅಮ್ಮನವರು ಒಪ್ಪಿಕೊಂಡರು. ಅಂದು ಕೆಲಸದ ದಿನವಾದರೂ ಸಹ ಆ ದಿನ ಮಧ್ಯಾಹ್ನ ಅವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡೆವು. ಅಂದು ಕೆಲಸ ಕಾರ್ಯಗಳ ಎಷ್ಟೇ ಒತ್ತಡಗಳಿದ್ದರೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ದೆಹಲಿ ಮತ್ತು ಎನ್.ಸಿ.ಆರ್ ನ ಕನ್ನಡಿಗರು ಆ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಭಾಂಗಣವನ್ನು ತುಂಬಿ ತುಳುಕಿಸಿದರು. ಸುಧಾ ಅಮ್ಮನವರ ಮಾತುಗಳನ್ನು ಕೇಳಲು ಸಮಯವೇ ಸಾಕಾಗಲ್ಲಿಲ್ಲ. ಅಂದು ಭಾಷಣ ಮಾಡುವುದಕ್ಕಿಂತ ನಿಶ್ಯಬ್ದವಾಗಿ ಕುಳಿತಿದ್ದ ಎಲ್ಲಾ ಅಭಿಮಾನಿ ಪ್ರೇಕ್ಷಕರೊಂದಿಗೆ ನೇರವಾಗಿ ಅವರು ಸಂವಾದ ನಡೆಸಿದ್ದು ಬಹಳ ವಿಶೇಷವಾಗಿತ್ತು. ಸಂಘಕ್ಕೆ ಈಗಿರುವ ಕಟ್ಟಡ ಬರುವ ಸಂದರ್ಭದಲ್ಲಿ ಸುಧಾ ಅಮ್ಮನವರು ನಮ್ಮ ದೆಹಲಿ ಕರ್ನಾಟಕ ಸಂಘಕ್ಕೆ 15 ಲಕ್ಷ ರೂಪಾಯಿಗಳ ದೇಣಿಗೆ ನೀಡಿದ್ದರು. ಅವರ ಹೆಸರಿನಲ್ಲಿ ಅಂದು ನಾವು ಗ್ರಂಥಾಲಯವನ್ನು ಸಹ ಮಾಡಿದ್ದೆವು ಆದರೆ ಅವರು ಆ ಗ್ರಂಥಾಲಯ ನೋಡಲು ಅವರಿಗೆ ಸಮಯವೇ ಸಿಕ್ಕಿರಲಿಲ್ಲ. ಆದರೆ ಈ ಬಾರಿ ಅವರು ಬಂದಿದ್ದಾಗ ಅಮ್ಮನವರು ನಮ್ಮ ಗ್ರಂಥಾಲಯವನ್ನು ವೀಕ್ಷಿಸಿ ಆನಂದದಿಂದ ಇನ್ನೂ ಹೆಚ್ಚಿನ ಪುಸ್ತಕಗಳ ಖರೀದಿಗೆ ಉದಾರ ಮನಸ್ಸಿನಿಂದ ಮತ್ತೊಮ್ಮೆ10 ಲಕ್ಷ ರೂಪಾಯಿಗಳ ಸಹಾಯಧನವನ್ನು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದ್ದಾರೆ. ಅವರ ಆಶೀರ್ವಾದದೊಂದಿಗೆ ಗ್ರಂಥಾಲಯದಲ್ಲಿ ಇನ್ನೂ ಹೆಚ್ಚು ಪುಸ್ತಕಗಳು ಸೇರ್ಪಡೆಯಾಗಲಿದ್ದು ಅದರ ಲಾಭವನ್ನು ಪ್ರತಿಯೊಬ್ಬ ಸ್ಥಳೀಯ ಕನ್ನಡಿಗರೂ ಪಡೆದುಕೊಳ್ಳಬೇಕೆಂದು ನಾನು ಕೋರಿಕೊಳ್ಳುತ್ತೇನೆ.

ಬಂಧುಗಳೇ, ನಮ್ಮ ದೆಹಲಿ ಕರ್ನಾಟಕ ಸಂಘ ಮತ್ತೊಂದು ದೊಡ್ಡ ಜಾಗವನ್ನು ತೆಗೆದುಕೊಳ್ಳಬೇಕು, ಆ ಜಾಗದಲ್ಲಿ ಕರ್ನಾಟಕದಿಂದ ಉನ್ನತ ಶಿಕ್ಷಣಕ್ಕೆ, ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ದೆಹಲಿಗೆ ಬರುವ ಕನ್ನಡಿಗರ ಮಕ್ಕಳಿಗೆ ವಸತಿ ನಿಲಯ ಮತ್ತು ದಾಸೋಹ ಕೇಂದ್ರ ಮಾಡಬೇಕೆಂಬುದು ನಮ್ಮ ಮತ್ತೊಂದು ಕನಸು. ಈ ನಿಟ್ಟಿನಲ್ಲಿ ಎಲ್ಲಾ ಪ್ರಯತ್ನಗಳು ನಡೆಯುತ್ತಿದ್ದು, ಆ ಕನಸು ಆದಷ್ಟು ಬೇಗನೆ ನನಸಾಗಲಿದೆ. ಈ ವಿಷಯವನ್ನು ನಾವು ಸುಧಾ ಅಮ್ಮನವರಿಗೂ ತಿಳಿಸಿ ಈ ಯೋಜನೆ ಆರಂಭವಾಗುವಾಗ ಅವರ ಸಹಕಾರ ನಮ್ಮೊಂದಿಗೆ ಇರಬೇಕೆಂದು ಕೇಳಿಕೊಂಡಿದ್ದೇವೆ, ತುಂಬಾ ಸಂತೋಷದಿಂದ ಅವರು ನಮಗೆ ಶುಭಾಶಯಗಳನ್ನು ಕೋರುತ್ತಾ ಅಂತಹ ಸಮಯದಲ್ಲಿ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ಇಂತಹ ಪುಣ್ಯಾತ್ಮರ ಸಹಕಾರದಿಂದ ಆದಷ್ಟು ಶೀಘ್ರವಾಗಿ ವಸತಿ ನಿಲಯ ಯೋಜನೆ ದೆಹಲಿಯಲ್ಲಿ ಆರಂಭವಾಗಲಿದೆ ಎಂಬುದು ನನ್ನ ಆಶಾಭಾವನೆ. ಸಮಯಕ್ಕೆ ಅತ್ಯಂತ ಬೆಲೆ ನೀಡುವ ಶ್ರೀಮತಿ ಡಾ. ಸುಧಾಮೂರ್ತಿ ಅವರ ಸಾಧನೆಗಳು ಅಪಾರ. ಅವರ ಬಗ್ಗೆ ಎಷ್ಟೇ ಮಾತನಾಡಿದರೂ ಅದು ಕಡಿಮೆಯೇ, ಅಷ್ಟೊಂದು ಕೆಲಸಗಳು ಮತ್ತು ಸಾಧನೆ ಮಾಡಿರುವ ಅವರು ಈ ವರ್ಷ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಅವರು ನಮ್ಮ ಸಂಘಕ್ಕೆ ಬಂದು ನಮ್ಮೊಂದಿಗೆ ಅರ್ಧ ದಿನ ಕಳೆದಿದ್ದು ನಮ್ಮ ಸೌಭಾಗ್ಯ. ಅವರನ್ನು ನಾವೆಲ್ಲರೂ ಸೇರಿ ಅಭಿನಂದಿಸಿದ್ದು ನಮ್ಮ ದೆಹಲಿ ಕರ್ನಾಟಕ ಸಂಘದ ಗೌರವವನ್ನು ಇನ್ನೂ ಹೆಚ್ಚಿಸಿಕೊಂಡಿದ್ದೇವೆ. ಈ ಸುವರ್ಣ ಅವಕಾಶವನ್ನು ನಮಗೆ ಕೊಟ್ಟ ಶ್ರೀಮತಿ ಡಾ. ಸುಧಾಮೂರ್ತಿ ಅಮ್ಮನವರಿಗೆ ನಾನು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ನಮಸ್ಕಾರಗಳನ್ನು ತಿಳಿಸುತ್ತೇನೆ ಹಾಗೂ ಅವರ ಸಹಕಾರ ದೆಹಲಿ ಕರ್ನಾಟಕ ಸಂಘಕ್ಕೆ ಸದಾ ಇರಲಿ ಎಂದು ಕೇಳಿಕೊಳ್ಳುತ್ತೇನೆ.

ನವೆಂಬರ್ ತಿಂಗಳ 15ರಂದು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿ ಮತ್ತು ದೆಹಲಿ ಘಟಕದ ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗಾಗಿ ಅತ್ಯಂತ ಸುಂದರವಾದ, ಒಂದು ಕಾರ್ಯಕ್ರಮ **'ಪ್ರಥಮ ರಾಷ್ಟ್ರೀಯ' ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ**ವನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದಕ್ಕೆ ಸಂಪೂರ್ಣ ಸಹಕಾರವನ್ನು ದೆಹಲಿ ಕರ್ನಾಟಕ ಸಂಘವು ನೀಡಿತ್ತು. ಈ ಕಾರ್ಯಕ್ರಮಕ್ಕೆ ಕರ್ನಾಟಕದಿಂದ ಬಂದಿದ್ದ ಸುಮಾರು 400 ಕ್ಕೂ ಹೆಚ್ಚು ಹಾಗೂ ದೆಹಲಿ ಎನ್‌ಸಿಆರ್ ನಿಂದ 300ಕ್ಕೂ ಹೆಚ್ಚು ಮಕ್ಕಳು, ಪೋಷಕರು ಭಾಗವಹಿಸಿ ಈ ಕಾರ್ಯಕ್ರಮದ ಅದ್ಭುತ ಯಶಸ್ಸಿಗೆ ಕಾರಣಕರ್ತರಾಗಿದ್ದಾರೆ. ಹಲವು ಮಕ್ಕಳು ಕವಿಗೋಷ್ಠಿ, ವಿಚಾರಗೋಷ್ಠಿ ಮತ್ತು ಸಂವಾದದಲ್ಲಿ ಪಾಲ್ಗೊಂಡು ಕನ್ನಡ ಸಾಹಿತ್ಯ ಮತ್ತು ಭಾಷೆಯ ಬಗ್ಗೆ ಮಾತನಾಡಿದ್ದಾರೆ. ಇಂತಹ ಕಾರ್ಯಕ್ರಮಕ್ಕಾಗಿ ತಮ್ಮೆಲ್ಲಾ ಪೂರ್ವ ನಿಯೋಜಿತ ಕಾರ್ಯಕ್ರಮಗಳನ್ನು ಬದಿಗೊತ್ತಿ ಬಂದ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಜಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವದಿಸಿದ್ದು ವಿಶೇಷವಾಗಿತ್ತು. ದೆಹಲಿ ಕನ್ನಡಿಗರ ಮಕ್ಕಳಾದ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿದ್ದ ಕುಮಾರಿ ಸುದೀತಿ ಅಂಬಳೆ ಮತ್ತು ಸಹ ಅಧ್ಯಕ್ಷತೆಯನ್ನು ವಹಿಸಿದ್ದ ಕುಮಾರಿ ನೂತನ ಕೈಕಾಡೆ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ. ಜೊತೆಗೆ ಈ ಕಾರ್ಯಕ್ರಮಕ್ಕೆ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ರಾಜ್ಯಸಭಾ ಸಂಸದರಾದ ಡಾ. ಎಲ್. ಹನುಮಂತಯ್ಯನವರಿಗೆ, ಉದ್ಘಾಟಕರಾದ ವೈದ್ಯ ಸಾಹಿತಿ ಡಾ. ನಾ. ಸೋಮೇಶ್ವರ ಅವರಿಗೆ, ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ರಾಜ್ಯ ಅಬಕಾರಿ ಸಚಿವರಾದ ಶ್ರೀ ಆರ್.ಬಿ. ತಿಮ್ಮಾಪುರ ಅವರಿಗೆ ಹಾಗು ಶ್ರವಣಬೆಳಗೊಳ ಶಾಸಕರಾದ ಶ್ರೀ ಸಿ.ಎನ್. ಬಾಲಕೃಷ್ಣ ಅವರಿಗೆ ಕೃತಜ್ಞತೆಗಳು. ಪ್ರಮುಖವಾಗಿ ಈ ಕಾರ್ಯಕ್ರಮದ ಮುಖ್ಯ ರೂವಾರಿ ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎನ್. ಅಶೋಕ್ ಅವರಿಗೆ, ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಅರವಿಂದ ಬಿಜ್ಜೈರವರಿಗೆ, ಗೌರವಾಧ್ಯಕ್ಷರಾದ ಶ್ರೀ ಪಿ. ಜಯರಾಜ್‌ರವರಿಗೆ, ಕಾರ್ಯದರ್ಶಿಗಳಾದ ಶ್ರೀಮತಿ ರತ್ನ ಸತ್ಯನಾರಾಯಣ ಅವರಿಗೂ ಮತ್ತು ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಎಲ್ಲಾ ಪದಾಧಿಕಾರಿಗಳಿಗೂ, ಸದಸ್ಯರಿಗೂ ಹಾಗು ಇಂತಹ ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಆಯೋಜಿಸುವ ಕನಸನ್ನ ಕಂಡಂತಹ ತರುಣ ಶ್ರೀ ಸಿ.ಎಸ್. ಅರುಣ್ ಅವರಿಗೂ ದೆಹಲಿ ಕರ್ನಾಟಕ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು.

ಪ್ರತಿವರ್ಷ ಪಕ್ಕದ ಗುರುಗಾಂವ್ ಕನ್ನಡ ಸಂಘಕ್ಕೆ ರಾಜ್ಯೋತ್ಸವ ಸಂದರ್ಭದಲ್ಲಿ ಕಾರ್ಯಕ್ರಮ ಮಾಡಲು ನಾವು ಸಂಪೂರ್ಣ ಸಹಕಾರ ನೀಡುತ್ತಾ ಬಂದಿದ್ದೇವೆ. ಆ ಕಾರ್ಯಕ್ರಮದ ಆಯೋಜನೆಯ ಸಿಂಹಪಾಲು ಸಹಕಾರ ದೆಹಲಿ ಕರ್ನಾಟಕ ಸಂಘದ್ದೇ ಆಗಿರುತ್ತದೆ. ಅದರಂತೆ ಈ ಬಾರಿಯೂ ಸಹ ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಗುರುಗಾಂವ್ ಕನ್ನಡ ಸಂಘ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನವೆಂಬರ್ 19ರಂದು ಹಮ್ಮಿಕೊಂಡಿದ್ದು ಸಂಪೂರ್ಣ ಯಶಸ್ಸಿನಿಂದ ಸಂಪನ್ನಗೊಂಡಿದೆ. ವಿಶ್ವ ಕಪ್ ಕ್ರಿಕೆಟ್‌ನ ಫೈನಲ್ ಪಂದ್ಯ ಇದ್ದರೂ ಸಹ 300ಕ್ಕೂ ಹೆಚ್ಚು ಕನ್ನಡಿಗರು ಅದರಲ್ಲಿ ಭಾಗಿಯಾಗಿದ್ದು ಶ್ಲಾಘನೀಯ. ಈ ಕಾರ್ಯಕ್ರಮವನ್ನು ಅತ್ಯಂತ ಸುಂದರವಾಗಿ ಆಯೋಜಿಸಿದ ಗುರಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರ್ ಜೋಳದರಾಶಿ ಹಾಗೂ ಎಲ್ಲಾ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳಿಗೆ ಅಭಿನಂದನೆಗಳು. ಇನ್ನು ಮುಂದೆಯೂ ಸಹ ಇದೇ ರೀತಿನಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಿ ಆಯೋಜನೆಗೊಂಡು ಪಕ್ಕದ ರಾಜ್ಯ ಹರಿಯಾಣದ ಗುರುಗ್ರಾಮದಲ್ಲಿ ಕನ್ನಡವನ್ನು ಉಳಿಸಿ ಬೆಳಸುವ ಎಲ್ಲಾ ಕೆಲಸಗಳು ನಡೆಯಲಿ ಎಂದು ಆಶಿಸುತ್ತೇನೆ.

ಮಿತ್ರರೇ, ಪ್ರತಿ ವರ್ಷದಂತೆ ಈ ವರ್ಷವೂ ಸಹ ನುರಿತ ಕಲಾವಿದರನ್ನು ಕರ್ನಾಟಕದಿಂದ ಕರೆತಂದು ಒಂದು ವಾರ ವಿವಿಧ ಜಾನಪದ ಶೈಲಿಯ ಸಾಹಿತ್ಯಿಕ ಕಲಾ ಪ್ರಕಾರಗಳಲ್ಲಿ ಸ್ಥಳೀಯ ಕಲಾವಿದರಿಗೆ ತರಬೇತಿ ನೀಡಿ ಹೆಜ್ಜೆ ಹಾಕಿಸಿದ ಕಲಾವಿದ ಶ್ರೀ ಲಕ್ಷ್ಮಣ್ ನೆಲಸೊಗಡು ಮತ್ತು ಅವರ ತಂಡಕ್ಕೆ ಕೃತಜ್ಞತೆಗಳು. 80ಕ್ಕೂ ಹೆಚ್ಚು ಕಲಾವಿದರು ಈ ತರಬೇತಿಯಲ್ಲಿ ಪಾಲ್ಗೊಂಡು ಸಂಗೀತ, ನೃತ್ಯ, ವೀರಗಾಸೆ, ಪಟ್ಟದ ಕುಣಿತ, ಮಾರಿ ಕುಣಿತ, ಕಂಸಾಳೆ ಮತ್ತು ಜಾನಪದ ಹಾಡುಗಳನ್ನು ಹಾಡುವ ಮೂಲಕ ನವೆಂಬರ್ 26 ರಂದು ಪ್ರಸ್ತುತಿಗೊಂಡ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮ ಅತ್ಯಂತ ಸುಂದರವಾಗಿ ಮೂಡಿ ಬಂತು. ವಿಶೇಷವಾಗಿ ಮಲ್ಲಕಂಬ ಮೊಟ್ಟ ಮೊದಲ ಬಾರಿ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಪ್ರದರ್ಶನಗೊಂಡು ಅದರಲ್ಲಿ ಭಾಗವಹಿಸಿದ ದೆಹಲಿ ಕನ್ನಡಿಗರ ಮಕ್ಕಳ ಪ್ರದರ್ಶನ ಪ್ರೇಕ್ಷಕರ ಮನಸೂರೆಗೊಂಡಿದೆ. ಜೊತೆಗೆ ಯಕ್ಷಗಾನವನ್ನು ಕಲಿತ ಮಕ್ಕಳು ಹೆಜ್ಜೆಗೆ ಹೆಜ್ಜೆ ಹಾಕಿದ್ದು, ವಿವಿಧ ಪ್ರಕಾರಗಳ ಜಾನಪದ ಜಾತ್ರೆ ಇವೆಲ್ಲವೂ ಸಹ ಈ ಬಾರಿಯ ಕಾರ್ಯಕ್ರಮದ ವಿಶೇಷತೆಗಳಾಗಿದ್ದವು. ಪ್ರತಿ ವರ್ಷದಂತೆ ಈ ವರ್ಷವೂ ವಿನೂತನ ಕಾರ್ಯಕ್ರಮಗಳನ್ನು ಪರಿಕಲ್ಪಿಸಿ ನಮ್ಮ ಕಾರ್ಯಕಾರಿ ಸಮಿತಿಯಿಂದ ನಿಮ್ಮ ಮುಂದೆ ಪ್ರಸ್ತುತಿಪಡಿಸುತ್ತಿದ್ದೇವೆ. ಈ ಕಾರ್ಯಕ್ರಮಗಳ ಸಂಪೂರ್ಣ ಲಾಭವನ್ನು ನಮ್ಮ ಎಲ್ಲಾ ದೆಹಲಿ ಕನ್ನಡಿಗರು ಪಡೆದುಕೊಳ್ಳಬೇಕೆಂಬುದೇ ನಮ್ಮ ಅಭಿಲಾಷೆ. ಈ ನನ್ನ ಎಲ್ಲಾ ಕನಸನ್ನು ನನಸಾಗಿ ಮಾಡುವಲ್ಲಿ ಕೈಜೋಡಿಸಿದ ತಮಗೆಲ್ಲರಿಗೂ ನಾನು ಚಿರಋಣಿ. ಇದೇ ಸಂದರ್ಭದಲ್ಲಿ ವಾರ್ಷಿಕ ಆಟೋಟ ಸ್ಪರ್ಧೆಗಳು, ಕಬಡ್ಡಿ, ವಾಲಿಬಾಲ್, ಥ್ರೋಬಾಲ್ ಕ್ರೀಡೆಗಳು, ಸಾಂಸ್ಕೃತಿಕ ಮತ್ತು ಒಳಾಂಗಣ

## ಮುನ್ನೋಟ

ಆತ್ಮೀಯರೇ,

ದೆಹಲಿ ಕರ್ನಾಟಕ ಸಂಘ ಹಾಗೂ ಸಂಘದ ಅವಿರತ ಸಾಂಸ್ಕೃತಿಕ ಚಟುವಟಿಕೆಗಳ ಸಮಗ್ರ ಮಾಹಿತಿ ತಮಗೆ 'ಅಭಿಮತ'ದ ಮೂಲಕ ತಲುಪುತ್ತಿದೆ. ಸಂಘದ ವೇದಿಕೆಯ ಸುತ್ತಳತೆ ಹೆಚ್ಚಾಗದಿದ್ದರೂ, ಅದರ ವ್ಯಾಪಕತೆ ಬಹಳ ಹೆಚ್ಚಾಗಿದೆ. ನೂರಾರು–ಸಾವಿರಾರು ಜನರು ಈ ವೇದಿಕೆಯಿಂದ ತಮ್ಮ ಕಲೆಯನ್ನು ಮೆರೆದಿದ್ದಾರೆ. ಸಂಘದ ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಹಾಗೂ ಸಂಗೀತ, ನೃತ್ಯ ತರಬೇತಿ ವಿದ್ಯಾರ್ಥಿಗಳು ಸಂಘದ ಸಾಂಸ್ಕೃತಿಕ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿರುವುದು ಸಂಘಕ್ಕೆ ಬಹಳ ಅಭಿಮಾನದ ವಿಷಯ.

ಸಂಘದ ಕಟ್ಟಡಕ್ಕೆ ಬಣ್ಣ ಹಚ್ಚುವ ಕೆಲಸದೊಂದಿಗೆ, ದುರಸ್ತಿ ಕಾರ್ಯಗಳು ಹಾಗೂ ಉನ್ನತೀಕರಣದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವೆಲ್ಲಾ ಕಾಮಗಾರಿಗಳಿಂದ ಸಂಘ ಮತ್ತಷ್ಟು ಸುಂದರವಾಗಿ ಕಂಗೊಳಿಸಲಿದೆ.

ಇನ್ನು ಸಂಘದ ಪ್ರಮುಖವಾದ ವಾರ್ಷಿಕ ಕಾರ್ಯಕ್ರಮ–ಸಂಘದ ಪ್ರತಿಷ್ಠಿತ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮ. ಸಂಘದ ಅಮೃತ ಮಹೋತ್ಸವ ಕಾಲದಲ್ಲಿ ಈ ವರ್ಷದಿಂದ ರಾಷ್ಟ್ರಕವಿ ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು) ರವರ ಹೆಸರಿನಲ್ಲಿ ಪ್ರಶಸ್ತಿಯನ್ನು ಪ್ರಾರಂಭಿಸಿದ್ದು, ಈ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದ ಸಾಧಕರಿಗೆ ಪ್ರತೀ ವರ್ಷ ನೀಡಲಾಗುವುದು. ಇದರೊಂದಿಗೆ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿ, ಡಾ. ಶಿವರಾಮ ಕಾರಂತ ಪ್ರಶಸ್ತಿ ಹಾಗೂ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಮುಂಬರುವ ಕಾರ್ಯಕ್ರಮದಲ್ಲಿ ನೀಡಲಾಗುವುದು. ಈ ಬಾರಿಯ ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಭಾಜನರಾಗುತ್ತಿರುವ ನಾಡೋಜ ಶ್ರೀ ಗೊ.ರು. ಚನ್ನಬಸಪ್ಪನವರು ಕರ್ನಾಟಕ ಸಾಹಿತ್ಯಲೋಕದ ಅನರ್ಘ್ಯ ಕಾಣಿಕೆ. ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕೃತರಾಗುತ್ತಿರುವ ಡಾ. ದೊಡ್ಡರಂಗೇ ಗೌಡರು ನಾ ಕಂಡ ಪ್ರಸಕ್ತ ತಲೆಮಾರಿನ ಪ್ರೇಮ ಕವಿ, ಇನ್ನು ಕನ್ನಡ ಭಾರತೀ ರಂಗ ಪ್ರಶಸ್ತಿ ಸ್ವೀಕರಿಸಲಿರುವ ಶ್ರೀ ದೊಡ್ಡಣ್ಣನವರು ಹೆಸರಿಗೆ ತಕ್ಕಂತೆ ಪ್ರೀತಿ, ಪ್ರೇಮ, ವಿಶ್ವಾಸ, ನಟನೆ ಎಲ್ಲ ಕ್ಷೇತ್ರದಲ್ಲಿ ದೊಡ್ಡ ಅಣ್ಣ ಮತ್ತೆ ಕುವೆಂಪು ಪ್ರಶಸ್ತಿ ವಿಜೇತ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಇತ್ತೀಚಿನ ದಿನಗಳಲ್ಲಿ ನಾ ಕಂಡ ಅತ್ಯಂತ ಸರಳ ಸಜ್ಜನಿಕೆಯ ನಾಟಿ ಭಾಷೆ, ವೇಷಭೂಷಿತ ಅಪ್ರತಿಮ ಬರಹಗಾರ.

ಈ ಎಲ್ಲಾ ಮಹನೀಯರನ್ನು ಒಂದೇ ವೇದಿಕೆಯಲ್ಲಿ ಕಾಣುವ ಸೌಭಾಗ್ಯ ದೆಹಲಿ ಕನ್ನಡಿಗರ ಪಾಲಿಗೆ. ಆದುದರಿಂದ ಈ ಅಭೂತಪೂರ್ವ ಕ್ಷಣವನ್ನು ಕಳೆದುಕೊಳ್ಳದೇ ಬನ್ನಿ ನಾವೆಲ್ಲಾ ಒಟ್ಟಾಗಿ ಇವರನ್ನು ಗೌರವಿಸುವ ಮೂಲಕ ಸಂಘವನ್ನು ಗೌರವಿಸೋಣ.

ಸಿರಿಗನ್ನಡಂ ಗೆಲ್ಗೆ.

***ಆರ್. ರೇಣುಕುಮಾರ್***

ಪ್ರಧಾನ ಕಾರ್ಯದರ್ಶಿ

ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಕಾರ್ಯಕ್ರಮವೂ ಸಹಾ ಸಂಪನ್ನಗೊಂಡಿದೆ. ವಿಜೇತರೆಲ್ಲರೂ ಬಂದು ಬಹುಮಾನವನ್ನು ಸ್ವೀಕರಿಸಿ ಕಾರ್ಯಕ್ರಮವನ್ನು ಯಶಸ್ವಿ ಮಾಡಿದ ಆಟೋಟಪ್ರಿಯರಿಗೆ, ಕ್ರೀಡಾ ಪ್ರೇಮಿಗಳಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ.

ಇದರ ಜೊತೆಗೆ ಪ್ರತಿ ವರ್ಷದಂತೆ ಈ ವರ್ಷವೂ ಸಹ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ದೆಹಲಿ ಕನ್ನಡಿಗರಿಗಾಗಿ ಶ್ರಮಿಸಿದ, ಕನ್ನಡಕ್ಕಾಗಿ ದುಡಿದ ಕನ್ನಡಿಗರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು ಈ ಬಾರಿ ಸಂಘದ ಮಾಜಿ ಅಧ್ಯಕ್ಷರೂ ಹಾಗೂ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಬಿ.ಎಲ್. ಸುರೇಶ್ ಡಿಸಿಪಿ ದೆಹಲಿ ಪೊಲೀಸ್, ಗೈನಕಾಲಜಿಸ್ಟ್ ಡಾ. ನೀಲಿಮಾ ಉದಯ್ ಭಟ್ ಮತ್ತು ಸಾಮಾಜಿಕ ಕಾರ್ಯಕರ್ತ, ಹಿರಿಯ ದೆಹಲಿ ಕನ್ನಡಿಗ ಶ್ರೀ ವಿ.ವಿ. ಬಿರಾದಾರ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಈ ನಾಲ್ಕು ಜನರೂ ತಮ್ಮ ಕ್ಷೇತ್ರ ಮಾತ್ರವಲ್ಲದೇ ಸಾಮಾಜಿಕ ಕ್ಷೇತ್ರದಲ್ಲೂ ವಿಶೇಷ ಸಾಧನೆ ಮಾಡಿರುವವರು.

ಪೊಲೀಸ್ ಇಲಾಖೆಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಾ ಜೊತೆಗೆ ಸಾಮಾಜಿಕ ಸೇವಾ ಸಂಸ್ಥೆಯಾದ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಅಧ್ಯಕ್ಷರಾಗಿ ಪ್ರತಿ ವರ್ಷ 10 ಲಕ್ಷಕ್ಕೂ ಹೆಚ್ಚು ಹಣವನ್ನು ವಿದ್ಯಾರ್ಥಿ ವೇತನ, ಪ್ರತಿಭಾ ಪುರಸ್ಕಾರಕ್ಕಾಗಿ ನೀಡುತ್ತಿರುವ, ದೆಹಲಿ ಕನ್ನಡಿಗರಿಗೆ ಕಷ್ಟಕಾಲದಲ್ಲಿ ಜೊತೆ ನಿಲ್ಲುವಂತಹ ಓರ್ವ ದಕ್ಷ ಅಧಿಕಾರಿ ಶ್ರೀ ಬಿ.ಎಲ್. ಸುರೇಶ್ ಅವರು, ಜಾನಪದ ಕ್ಷೇತ್ರದಲ್ಲಿ ತಮ್ಮದೇ ಆದಂತ ವಿಶೇಷ ಸಾಧನೆ ಮಾಡಿರುವ ವಿದ್ವಾಂಸರು ಡಾ. ಪುರುಷೋತ್ತಮ ಬಿಳಿಮಲೆ ಅವರು, ಶ್ರೀಮತಿ ಡಾ. ನೀಲಿಮಾ ಉದಯ ಭಟ್, ಎಂಬಿಬಿಎಸ್, ಡಿ.ಜಿ.ಓ. ಪದವಿ ಪಡೆದು ದೆಹಲಿಯಲ್ಲಿ ಬಡಜನರ ಕಾಲೋನಿಯಲ್ಲಿ ನಿತ್ಯ ಉಚಿತವಾಗಿ ಸೇವೆ ಸಲ್ಲಿಸುತ್ತಿರುವವರು. ಇವರೊಂದಿಗೆ ಆಯ್ಕೆಯಾದ ಶ್ರೀ ವೈಜನಾಥ ವಿ. ಬಿರಾದಾರ ಮಾಜಿ ಉಪರಾಷ್ಟ್ರಪತಿಗಳಾದ ಶ್ರೀ ಬಿ.ಡಿ. ಜತ್ತಿ ಅವರ ಆಪ್ತ ಸಹಾಯಕರಾಗಿ ಅವರ ಜೊತೆಯಲ್ಲಿ ಮತ್ತು ಅನೇಕ ಕೇಂದ್ರ ಮಂತ್ರಿಗಳ ಜೊತೆ ಅತ್ಯಂತ ಜವಾಬ್ದಾರಿಯುತವಾಗಿ ಕೆಲಸ ಮಾಡಿ ಅನೇಕ ಕನ್ನಡಿಗರನ್ನು ತಮ್ಮ ತಾಯ್ನಾಡಿನಿಂದ ಕರೆದುಕೊಂಡು ಬಂದು ದೆಹಲಿಯಲ್ಲಿ ಕೆಲಸ ಕೊಡಿಸಿ ಒಂದು ಉತ್ತಮ ಸ್ಥಾನಮಾನ ದೊರಕಿಸಿದ ಕೀರ್ತಿ ಇವರದ್ದಾಗಿದೆ, ಇಂದು ಅನೇಕ ಕುಟುಂಬಗಳು ಇವರ ಹೆಸರನ್ನ ಹೇಳಿ ಬದುಕುತ್ತಿವೆ. ಇಂತಹ ಮಹನೀಯರನ್ನು ಗುರುತಿಸಿ ಅಮೃತ ಮಹೋತ್ಸವದ ಕಾರ್ಯಕಾಲದಲ್ಲಿ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಪ್ರದಾನ ಮಾಡಿ ಅಭಿನಂದಿಸಿದ್ದು ನಮ್ಮನ್ನ ನಾವೇ ಅಭಿನಂದಿಸಿಕೊಂಡ ಹಾಗೆ ಆಗಿದೆ. ಪೂರ್ವನಿಯೋಜಿತ ಕಾರ್ಯಕ್ರಮದಿಂದ ಡಾ. ಬಿಳಿಮಲೆಯವರು ಹಾಗು ಕಾಲಿನ ಶಸ್ತ್ರ ಚಿಕಿತ್ಸೆಯ ಕಾರಣದಿಂದ ಶ್ರೀ ವಿ.ವಿ. ಬಿರಾದಾರ ಅವರು ಅಂದು ಪ್ರಶಸ್ತಿ ಸ್ವೀಕರಿಸಲಾಗಲಿಲ್ಲ. ಇದರ ಜೊತೆಗೆ ಪ್ರತಿವರ್ಷವೂ ದೆಹಲಿ ಕರ್ನಾಟಕ ಸಂಘವು ಅವಶ್ಯಕತೆ, ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿ ವೇತನ ನೀಡುತ್ತಾ ಬಂದಿದ್ದು, ಈ ಬಾರಿಯೂ ಅತಿ ಹೆಚ್ಚು ಅಂದರೆ 34 ಮಕ್ಕಳಿಗೆ ಅವಶ್ಯಕತೆ ಆಧಾರದ ಮೇಲೆ ಮತ್ತು 18 ಮಕ್ಕಳಿಗೆ ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿ ವೇತನವನ್ನು ಸಂಘದ ವೇದಿಕೆ ಮೇಲೆ ನೀಡಿ ಗೌರವಿಸಿ ಅವರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಶುಭ ಹಾರೈಸಿದ್ದೇವೆ.

ನವೆಂಬರ್ ತಿಂಗಳಲ್ಲಿ ಸಂಘದ ಈ ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಪ್ರತಿವಾರ ಭಾಗಿಯಾಗಿ ಯಶಸ್ವಿಗೊಳಿಸಿಕೊಟ್ಟಿದ್ದಕ್ಕೆ ತಮಗೆ ಮತ್ತು ತಮ್ಮ ಕುಟುಂಬಕ್ಕೆ, ಸಭಾಂಗಣವನ್ನು ತುಂಬಿ ತುಳುಕಿಸಿದ ದೆಹಲಿ ಕನ್ನಡಿಗರಿಗೆ ನನ್ನ ಗೌರವ ಪೂರ್ವಕ ನಮನಗಳು.

ಬಂಧುಗಳೇ, ಕಾರ್ಯಕ್ರಮಗಳನ್ನು ಮಾಡುವುದರ ಜೊತೆ ಜೊತೆಗೆ ಸಂಘದ ಅಭಿವೃದ್ಧಿ ಮಾಡುವ ದಿಸೆಯಲ್ಲಿ ಎರಡು ವರ್ಷ ಸಮಯ ಹೇಗೆ ಕಳೆಯಿತು ಎಂಬುದು ಗೊತ್ತೇ ಆಗಲಿಲ್ಲ. ಅಮೃತ ಮಹೋತ್ಸವ ವರ್ಷ ಅತ್ಯಂತ ಸಂಭ್ರಮದಿಂದ ಸಂಪನ್ನಗೊಂಡಿದೆ. ಎರಡು ವರ್ಷಕ್ಕೆ ನೀಡಿದ ಅವಧಿ ಜನವರಿ ಮೂರನೇ ತಾರೀಕು ಮುಕ್ತಾಯಗೊಳ್ಳುತ್ತಿದೆ, ಅಂದರೆ 12ನೇ ತಾರೀಕಿನ ಒಳಗಾಗಿ ಎಜಿಎಂ ಮತ್ತು ಹೊಸ ಕಾರ್ಯಕಾರಿ ಸಮಿತಿ ಆಯ್ಕೆ ಚುನಾವಣೆ ನಡೆಯಬೇಕಿದೆ. ಆದರೆ ಜನವರಿ ತಿಂಗಳಲ್ಲಿ ತುಂಬಾ ಚಳಿ ಇರುವ ಕಾರಣ ಮತ್ತು ಅನೇಕ ದೆಹಲಿ ಕನ್ನಡಿಗರು ಕ್ರಿಸ್‌ಮಸ್ ರಜೆಯಲ್ಲಿ ಊರಿಗೆ ಹೋಗುವ ಕಾರಣ ಸಂಘದ ಬೈಲಾ ಪ್ರಕಾರವಾಗಿ ಎರಡು ತಿಂಗಳು ಮುಂದೂಡಿದ್ದೇವೆ. ಆದರೂ ಸಹ ಸಮಯಕ್ಕೆ ಅನುಗುಣವಾಗಿ ಸೂಕ್ತ ಸಮಯಕ್ಕೆ ಎಜಿಎಂ ಅನ್ನು ಕರೆಯಲಾಗುವುದು.

ಆತ್ಮೀಯರೇ, ಸಂಘದ ಅಮೃತ ಮಹೋತ್ಸವ ವರ್ಷದಲ್ಲಿ ತಾವು ನೀಡಿದ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿಭಾಯಿಸಿಕೊಂಡು ಸಂಘದ ಖಜಾನೆಯಿಂದ ಸ್ವಲ್ಪವೂ ಹಣ ತೆಗೆಯದೆ ಹೊರಗಡೆಯಿಂದ ದೇಣಿಗೆಗಳನ್ನು ತಂದು ಅಮೃತ ಮಹೋತ್ಸವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಿ, ಜೊತೆಗೆ ಸಂಘಕ್ಕೆ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ನಿಶ್ಚಿತ ಠೇವಣಿ (ಎಫ್‌ಡಿ) ಮಾಡಲಾಗಿದೆ. ನನ್ನ ಅತ್ಯಂತ ಅಮೂಲ್ಯವಾದ ಸಮಯವನ್ನು ಸಂಘಕ್ಕೆ ಮೀಸಲಿಟ್ಟು ತಾವು ನೀಡಿದ ಜವಾಬ್ದಾರಿಯನ್ನ ಪೂರ್ತಿ ಮಾಡಿದ್ದೇನೆ ಅಂದುಕೊಂಡಿದ್ದೇನೆ, ಸಂಘಕ್ಕೆ ಮತ್ತೊಂದು ಜಾಗವನ್ನು ಪಡೆಯುವ ನಮ್ಮೆಲ್ಲರ ಕನಸು ಆದಷ್ಟು ಬೇಗನೆ ನನಸಾಗಲಿ....

ಧನ್ಯವಾದಗಳು.

***ಸಿ.ಎಂ. ನಾಗರಾಜ***

ಅಧ್ಯಕ್ಷರು

### ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**24 ಡಿಸೆಂಬರ್ 2023 ಭಾನುವಾರ**

**ಸಂಜೆ : 5.00 ಗಂಟೆಗೆ**

ಸಂಘದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

**16 ಡಿಸೆಂಬರ್ , ಶನಿವಾರ, ಅಪರಾಹ್ನ : 3.00 ಗಂಟೆಗೆ**

**ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ವತಿಯಿಂದ, ಪದ್ಮಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ, ವಿದ್ಯಾರ್ಥಿ ವೇತನ ವಿತರಣೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ.**

## ಕರ್ನಾಟಕ ಸುವರ್ಣ ಸಂಭ್ರಮ 50 : ದೆಹಲಿ ಕರ್ನಾಟಕ ಸಂಘದಲ್ಲಿ 68ನೇ

# ಕರ್ನಾಟಕ ರಾಜ್ಯೋತ್ಸವ ದಿನಾಚರಣೆ



ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಘೋಷಣೆಯೊಂದಿಗೆ ರಾಜ್ಯಾದ್ಯಂತ ಮತ್ತು ಹೊರನಾಡುಗಳಲ್ಲಿ ಆಚರಿಸಲಾಗುತ್ತಿರುವ ಕರ್ನಾಟಕ ಸಂಭ್ರಮ–50ರ ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ 1, 2023 ರಂದು ರಾಷ್ಟ್ರ ಧ್ವಜಾರೋಹಣ ಮಾಡುವುದರ ಮೂಲಕ 68ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯನ್ನು ಬಹಳ ಸಂಭ್ರಮದಿಂದ ಆಚರಿಸಲಾಯಿತು. ಬೆಳಿಗ್ಗೆ 9.00 ಗಂಟೆಗೆ ಸಂಘದ ಆವರಣದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರಿನಿಂದ ಆಗಮಿಸಿದ್ದ ವೈದ್ಯೆ, ರೊಟೇರಿಯನ್ ಡಾ. ಪದ್ಮಾಕ್ಷಿ ಲೋಕೇಶ್ ಅವರೊಂದಿಗೆ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ರಾಷ್ಟ್ರ ಧ್ವಜಾರೋಹಣ ಮಾಡಿ ವಂದನೆ ಸಲ್ಲಿಸಿದರು. ನೆರೆದಿದ್ದವರೆಲ್ಲರೂ ನಾಡಗೀತೆ ಹಾಡಿ, ಕನ್ನಡ ತಾಯಿ ಭುವನೇಶ್ವರಿಯ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗುವುದರೊಂದಿಗೆ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಅಮೃತ ವರ್ಷ ಕಾರ್ಯಕಾಲದಲ್ಲಿ ಮೈಸೂರು ರಾಜ್ಯ ಕರ್ನಾಟಕವೆಂದು ನಾಮಕರಣವಾಗಿ 50 ವರ್ಷಗಳು ತುಂಬಿದ ಈ ದಿನ ಎಲ್ಲರೂ ಸೇರಿ ಆಚರಿಸುತ್ತಿರುವ 68ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ನಾಡಿನ, ದೇಶದ ಸಮಸ್ತ ಜನತೆಗೆ ಮತ್ತು ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ, ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ತಿಳಿಸಿದರು.

ಇಂದಿನ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ನಮ್ಮೊಂದಿಗೆ ಭಾಗವಹಿಸಿರುವ ಬೆಂಗಳೂರಿನ ರೋಟರಿ ಕ್ಲಬ್‌ನ ಡಾ. ಪದ್ಮಾಕ್ಷಿ ಲೋಕೇಶ್ ಹಾಗೂ ಅವರ ತಂಡದ ಸದಸ್ಯರಿಗೆ ಮತ್ತು ದೆಹಲಿಯ ಹಿರಿಯ ಕನ್ನಡಿಗರಾದ ಡಾ. ಹೊನ್ನಮ್ಮ, ಡಾ. ಅಶೋಕ ಎಂ.ಈಟಿ, ಡಾ. ರೂಪಶ್ರೀ, ಶ್ರೀ ವಿ.ವಿ. ಬಿರಾದಾರ, ಕರ್ನಾಟಕ ಬ್ಯಾಂಕಿನ ಮ್ಯಾನೇಜರ್, ಸಂಘದ ಪದಾಧಿಕಾರಿಗಳು, ಸದಸ್ಯರು, ಮಹಿಳೆಯರು ಮತ್ತು ಮಕ್ಕಳಿಗೆ ಧನ್ಯವಾದಗಳನ್ನು ಹೇಳಿದರು. ಡಾ. ಪದ್ಮಾಕ್ಷಿ ಲೋಕೇಶ್ ಅವರು ದೆಹಲಿ ಕನ್ನಡಿಗರ ಜೊತೆ ಧ್ವಜಾರೋಹಣ ಮತ್ತು ಸುವರ್ಣ ಕರ್ನಾಟಕ ಸಂಭ್ರಮದ ರಾಜ್ಯೋತ್ಸವದಲ್ಲಿ ಭಾಗಿಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ನಂತರ ಸಂಘದ ಸೆಮಿನಾರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸೈಕಾಲಜಿಸ್ಟ್ ಹಾಗು ರೊಟೇರಿಯನ್ ಡಾ. ಪದ್ಮಾಕ್ಷಿ ಲೋಕೇಶ್ ಅವರು ಮಾತನಾಡಿ ಬೆಂಗಳೂರಿನ ಕೋರಮಂಗಲ ಮತ್ತು ನಾಗರಭಾವಿ ರೋಟರಿ ಕ್ಲಬ್‌ನ ಸದಸ್ಯರ ತಮ್ಮ ತಂಡ ಬೆಂಗಳೂರಿನಿಂದ ಕಾಶ್ಮೀರದವರೆಗೆ ಒಂದು ಸಾಮಾಜಿಕ ಅಭಿಯಾನವನ್ನು ಸಾಕಾರಗೊಳಿಸಲು ಹಳ್ಳಿಯಿಂದ ದೆಹಲಿಗೆ ಬಂದಿದ್ದು, ರಾಜ್ಯೋತ್ಸವ ಸಂದರ್ಭ ಇಲ್ಲಿ ಭಾಗವಹಿಸಲು ತಮಗೆ ನೀಡಿದ ಅವಕಾಶಕ್ಕೆ ಸಂಘದ ಅಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸಿದರು. ಕನ್ನಡ ಸೇವೆ ರಾಷ್ಟ್ರ ಸೇವೆ ಎಂಬ ಧ್ಯೇಯದೊಂದಿಗೆ ತಾವು ಮೂರು–ಡಿಗಳ (ಡಯಾಬಿಟೀಸ್ ನಿರ್ವಹಣೆ, ಡಿಪ್ರೆಷನ್ ನಿವಾರಣೆ ಹಾಗೂ ಡ್ರಗ್ ಅಡಿಕ್ಷನ್ ನಿರ್ಮೂಲನೆ) ಅಭಿಯಾನವನ್ನು ದೇಶದಾದ್ಯಂತ ನಡೆಸುತ್ತಿದ್ದೇವೆ. ಮನುಷ್ಯನಿಗೆ ದೈಹಿಕ ಆರೋಗ್ಯದ ಜೊತೆ ಜೊತೆಗೆ ಮಾನಸಿಕ ಆರೋಗ್ಯವೂ ಮುಖ್ಯ, ನಮ್ಮ ಬದುಕು ಏಕೆ ಹೇಗೆ ಎಂಬ ಅರಿವು ಅಗತ್ಯ. ತಾವು ಈ ಅಭಿಯಾನದಲ್ಲಿ ರೇಡಿಯೋ ಲೈವ್ ಮತ್ತು ವಿವಿಧ ಪ್ರದೇಶಗಳ ಪ್ರವಾಸದ ಮೂಲಕ ಈಗಾಗಲೇ 2.5 ಲಕ್ಷ ಜನರನ್ನು ಮುಟ್ಟಿದ್ದು ಮುಂದೆ 5 ಲಕ್ಷ ಜನರನ್ನು ತಲುಪುವ ಗುರಿ ತಮ್ಮದಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯೋತ್ಸವದ ಕುರಿತು ಮಾತನಾಡುತ್ತಾ ನಮ್ಮ ಕನ್ನಡ ಕಸ್ತೂರಿ ಕನ್ನಡ, ಸಾವಿರಾರು ವರ್ಷಗಳಿಂದ ಇರುವ ನಮ್ಮ ಕನ್ನಡವನ್ನು ಮನೆಯಲ್ಲಿ ಹೆಚ್ಚು ಹೆಚ್ಚು ಬಳಸಬೇಕು, ಭಾಷೆಗೆ ಮನುಷ್ಯನ ಜೀವನದಲ್ಲಿ ಅತ್ಯಂತ ಪ್ರಾಮುಖ್ಯತೆ ಇದೆ. ಸರಿಯಾದ ಭಾಷೆ ಬರಲಿಲ್ಲವಾದಲ್ಲಿ ಮಾನಸಿಕ ಅಭಿವೃದ್ಧಿ ಸಾಧ್ಯವಿಲ್ಲ, ನಮ್ಮ ಮಾತೃಭಾಷೆಯಾದ ಕನ್ನಡವನ್ನು ನಾವೆಲ್ಲರೂ ಬಳಸೋಣ ಬೆಳೆಸೋಣವೆಂದು ಕರೆ ನೀಡಿದರು. ದೆಹಲಿ ಕರ್ನಾಟಕ ಸಂಘದ ಬಗ್ಗೆ ಮಾತನಾಡುತ್ತಾ ಇಲ್ಲಿನ ಅಧ್ಯಕ್ಷರು ತಮ್ಮ ವೃತ್ತಿಯ ಜೊತೆಗೆ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ಸಂಘವು ಮಹಿಳೆಯರಿಗೆ ಪ್ರಾಮುಖ್ಯತೆ ಮತ್ತು ಪ್ರಾಧಾನ್ಯತೆ ನೀಡುತ್ತಿರುವುದು ಅಭಿನಂದನಾರ್ಹ ಎಂದರು. ತಮ್ಮ ಜೊತೆ ಬಂದಿರುವ ಸಹ ರೊಟೇರಿಯನ್‌ಗಳನ್ನು ಪರಿಚಯಿಸಿದ ಅವರು ಕೈಜೋಡಿಸಿ ತಲೆ ಬಾಗಿ ನಮಸ್ಕಾರ ಮಾಡುವುದು ಹಾಗು ಸ್ವೀಕರಿಸುವುದು ನಮ್ಮ ಸಂಸ್ಕೃತಿ ಹಾಗು ಆರೋಗ್ಯದ ದೃಷ್ಟಿಯಲ್ಲಿ ಒಳ್ಳೆಯದು ಎಂದು ಸಲಹೆ ನೀಡಿದರು.

ಹಿರಿಯ ದೆಹಲಿ ಕನ್ನಡಿಗ, ಸಾಮಾಜಿಕ ಸುದಾರಣಾ ಪ್ರಗತಿಶೀಲ ಸಂಸ್ಥೆಯ ಕಾರ್ಯದರ್ಶಿ ಮತ್ತು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸುತ್ತಾ ಕರ್ನಾಟಕದಿಂದ ಕಾಶ್ಮೀರದವರೆಗೆ ಪುಸ್ತಕದ ಓದಿ ನೋಡು ಅಥವಾ ದೇಶ ಸುತ್ತಿ ನೋಡು ಎಂಬ ನಾಣ್ನುಡಿಯಂತೆ ತಮ್ಮ ಸಾಮಾಜಿಕ ಅಭಿಯಾನದಡಿಯಲ್ಲಿ ಪ್ರವಾಸ ಮಾಡುತ್ತಿರುವ ಡಾ. ಪದ್ಮಾಕ್ಷಿ ಲೋಕೇಶ್ ಅವರ ತಂಡಕ್ಕೆ ಅಭಿನಂದನೆಗಳು, ಬಸವಣ್ಣನವರ ವಚನದಲ್ಲಿ ಬಾಗಿದ ತಲೆಯ ಮುಗಿದ ಕೈಯಾಗಿರಿಸು ಎಂಬ ಉಲ್ಲೇಖವಿದೆ. ಇದು ನಮ್ಮ ಸಂಸ್ಕಾರವೂ ಸಹಾ ಎಂದರು.

46 ವರ್ಷಗಳಿಂದ ದೆಹಲಿಯಲ್ಲಿ ಸಕ್ರಿಯವಾಗಿರುವ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಎನ್. ಆರ್. ಶ್ರೀನಾಥ ಅವರು ಮಾತನಾಡಿ ರೋಟರಿ ಕ್ಲಬ್ ಹಲವಾರು ಸಾಮಾಜಿಕ ಮಜಲುಗಳಲ್ಲಿ ಜನರ ಸ್ಪಂದನೆ ಮಾಡುತ್ತಿದೆ. ಕುಡಿತದ ಬಗ್ಗೆ ಹಳ್ಳಿಗಳಿಗೆ ಹೋಗಿ ಜನರಿಗೆ ಅದರ ದುಷ್ಪರಿಣಾಮವನ್ನು ಮನವರಿಕೆ ಮಾಡಿಕೊಡಬೇಕು. ರೈತನ ಬೆಳವಣಿಗೆಗೆ ಸಹಾಯವಾಗುವಂತಹ ಕೆಲಸಗಳು ಆಗಬೇಕು, ಡಯಾಬಿಟೀಸ್ ನಿವಾರಣೆಗೆ ಶಾಶ್ವತ ಉಪಾಯ ಸಿಗಲಿ, ದೆಹಲಿ ಪೋಲಿಸ್ ವೃತ್ತಿಯಲ್ಲಿದ್ದುಕೊಂಡು ತಾವು ಜನಕಪುರಿ ಕನ್ನಡ ಕೂಟದಲ್ಲಿ, ದೆಹಲಿ ಕರ್ನಾಟಕ ಸಂಘ ಮತ್ತು ಕನ್ನಡ ಶಾಲೆಯ ಜೊತೆ ದೆಹಲಿಯಲ್ಲಿ ಕನ್ನಡಪರ ಕಾರ್ಯಗಳಲ್ಲಿ ಅಳಿಲು ಸೇವೆ ಮಾಡುತ್ತಿದ್ದು, ಕನ್ನಡತನ ದೆಹಲಿಯಲ್ಲಿ ಹೆಚ್ಚಿದೆ ಆದರೆ, ಬೆಂಗಳೂರಿನಲ್ಲಿ ಕಡಿಮೆಯಾಗುತ್ತಿರುವುದು

ಚಿಂತನೆಯ ವಿಷಯ, ಎಲ್ಲರೂ ಕನ್ನಡತನವನ್ನು ಉಳಿಸಿ ಕನ್ನಡವನ್ನು ಬೆಳೆಸುವಂತಾಗಲಿ, ಎಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳು, ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ ಎಂದರು.

ಸಿಜಿಎಚ್‌ಓ ಜಂಟಿ ಕಾರ್ಯದರ್ಶಿಗಳೂ, ಆಯುರ್ವೇದ ತಜ್ಞರೂ, ದೆಹಲಿ ಕನ್ನಡಿಗರಾದ ಡಾ. ಅಶೋಕ್ ಎಂ.ಈಟಿ ಅವರು ಮಾತನಾಡಿ 10 ನೇ ಮತ್ತು 12ನೇ ತರಗತಿಯ ಮಕ್ಕಳಲ್ಲಿ ಮಾನಸಿಕ ಒತ್ತಡ ಇದೆ, ತಾವು ಪ್ರತಿದಿನ ಒಪಿಡಿ ಯಲ್ಲಿ ಈ ವಯಸ್ಸಿನ ಹೆಚ್ಚು ಮಕ್ಕಳು ಚಿಕಿತ್ಸೆಗೆ ಬರುವುದನ್ನು ಕಾಣುತ್ತಿದ್ದೇವೆ. ಡಾ. ಪದ್ಮಾಕ್ಷಿ ಮತ್ತು ಅವರ ತಂಡ ತಮ್ಮ ಅಭಿಯಾನದಲ್ಲಿ ಮಹತ್ತರವಾದ ಉದ್ದೇಶ ಇಟ್ಟುಕೊಂಡು ನಡೆಯುತ್ತಿದ್ದಾರೆ ಅದು ಈಡೇರಲಿ, ಎಲ್ಲರಿಗೂ ಕರ್ನಾಟಕದ ರಾಜ್ಯೋತ್ಸವದ ಶುಭಾಶಯಗಳು ಎಂದರು. ಅವರ ಪತ್ನಿ ಆಯುರ್ವೇದ ತಜ್ಞೆ ಡಾ. ರೂಪಶ್ರೀ ಅವರೂ ಸಹಾ ಇತ್ತೀಚೆಗೆ ಮಕ್ಕಳಲ್ಲಿ ಹೆಚ್ಚು ಹೆಚ್ಚು ಮಾನಸಿಕ ಒತ್ತಡ ಇರುವುದು ಕಂಡು ಬರುತ್ತಿರುವುದನ್ನು ಪುಷ್ಟಿ ನೀಡುತ್ತಾ ಎಲ್ಲರಿಗೂ ರಾಜ್ಯೋತ್ಸವದ ಶುಭ ಹಾರೈಸಿದರು.

ಸಿಜಿಎಚ್‌ಓ ಚೀಫ್ ಮೆಡಿಕಲ್ ಆಫೀಸರ್ ಆದ ಡಾ. ಹೊನ್ನಮ್ಮ ಅವರು ಮಾತನಾಡಿ ರಾಜ್ಯೋತ್ಸವ ಶುಭಾಶಯಗಳನ್ನು ತಿಳಿಸುತ್ತಾ ತಾವು ಕಳೆದ 34 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದು, 2–3 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದ ಸಂಪರ್ಕದಲ್ಲಿದ್ದು, ಸಂಘ ಮಾಡುತ್ತಿರುವ ಆರೋಗ್ಯ ಮೇಳ, ಆಹಾರ ಮೇಳ, ಪಿಕ್‌ನಿಕ್ ಮತ್ತು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೇನೆ, ಡಾ. ಪದ್ಮಾಕ್ಷಿಯವರ ಪ್ರಯತ್ನ ಸ್ತುತ್ಯಾರ್ಹ, ಅವರಿಗೆ ತಮ್ಮ ಸಂಪೂರ್ಣ ಸಹಾಯ ಸಹಕಾರ ನೀಡುತ್ತೇನೆ, ಮಕ್ಕಳ ಹೆಚ್ಚಿನ ಮೊಬೈಲ್ ಮತ್ತು ಇಂಟರ್ ನೆಟ್ ಬಳಕೆಗೆ ಪೋಷಕರು ಕಡಿವಾಣ ಹಾಕಬೇಕು, ಅವರಿಗೆ ಇದರಿಂದ ಕಡಿಮೆ ಊಟ ಮಾಡುವ ಮತ್ತು ನಿದ್ರೆ ಮಾಡುವ ಸಮಸ್ಯೆಗಳು ಬರುತ್ತವೆ. ಬದಲಾಗಿ ಪ್ರಕೃತಿ ಮತ್ತು ಪರಿಸರದ ಬಗ್ಗೆ ಅವರಿಗೆ ತಿಳಿಸಬೇಕು, ಗಿಡ ಮರ, ಪ್ರಾಣಿ ಪಕ್ಷಿಗಳನ್ನು ತೋರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಡಾ. ಪದ್ಮಾಕ್ಷಿ ಲೋಕೇಶ್ ಮತ್ತು ತಂಡದವರ ಕರ್ನಾಟಕದಿಂದ ಕಾಶ್ಮೀರದವರೆಗಿನ ಈ ರಸ್ತೆಯ ಮುಖೇನ ಯಾತ್ರೆ ಮತ್ತು ಅಭಿಯಾನ ಸಫಲವಾಗಲಿ ನಮ್ಮ ಸಂಘ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಒಟ್ಟಾರೆ 3500–4000 ಕಲಾವಿದರನ್ನು ದೆಹಲಿಗೆ ಕರೆಸಿ ಸಂಘದ ವೇದಿಕೆಯಲ್ಲಿ ಹಾಗೂ ಪ್ರಧಾನಿಯವರ ಸಮ್ಮುಖದಲ್ಲಿ ನಾನಾ ಕಲಾ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಸಂಘದಲ್ಲಿ ಕನ್ನಡ ಕಲಿಕಾ ಕೇಂದ್ರದಲ್ಲಿ ಸುಮಾರು 40 ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ. ಸಂಗೀತ, ನೃತ್ಯ ತರಬೇತಿ ಕೇಂದ್ರಗಳು ನಿರಂತರವಾಗಿ ನಡೆಯುತ್ತಿದ್ದು, ಸದಸ್ಯೆ ಶ್ರೀಮತಿ ರೂಪಶ್ರೀ ಹಾಗೂ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅದಕ್ಕೆ ಸಹಕರಿಸುತ್ತಿದ್ದು, ದೆಹಲಿಯ ಕಾಲೋನಿ ಶ್ರೀನಿವಾಸಪುರಿಯ ಕುಷ್ಠರೋಗಿಗಳ ಆಶ್ರಮದ ಸುಮಾರು 40ಕ್ಕೂ ಹೆಚ್ಚು ಸಂಘದ ಮಕ್ಕಳಿಗೆ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಅವರು ಕನ್ನಡ ಕಲಿಸುತ್ತಿದ್ದಾರೆ. ಮಕ್ಕಳಿಗಾಗಿ ಮನೋ ಆರೋಗ್ಯ ಸಂಬಂಧಿತ ಪ್ರತ್ಯೇಕ ವಿಚಾರ ಸಂಕಿರಣವನ್ನು ನಾವು ಮುಂದೆ ಆಯೋಜನೆ ಮಾಡಲಿದ್ದೇವೆ. ಬರುವ ನವೆಂಬರ್ 9 ರಂದು ಇನ್ಫೋಸಿಸ್ ಫೌಂಡೇಶನ್‌ನ ಡಾ. ಸುಧಾ ಮೂರ್ತಿ ಅವರಿಗೆ ಅಭಿನಂದನೆ, ನ. 15 ರಂದು





ಸಂಘದ ಸಹಕಾರದೊಂದಿಗೆ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕೇಂದ್ರ ಮತ್ತು ದೆಹಲಿ ಘಟಕಗಳು ಆಯೋಜಿಸುತ್ತಿರುವ ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ ದೆಹಲಿಯಲ್ಲಿ ಜರುಗಲಿದ್ದು, ನ. 19ರಂದು ಗುರುಗಾಂವ್ ಕನ್ನಡ ಸಂಘವು ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಆಚರಿಸಲಿದೆ. ನ. 18 ರಿಂದ 26 ರವರೆಗೆ ನಮ್ಮ ಸ್ಥಳೀಯ ಕಲಾವಿದರಿಗೆ ಬೆಂಗಳೂರಿನ ಪರಿಣಿತರಿಂದ ನೃತ್ಯ ಮತ್ತು ಸಂಗೀತ ತರಬೇತಿ ನೀಡಲಾಗುವುದು, ತರಬೇತಿ ಪಡೆದ ಸ್ಥಳಿಯ ಕಲಾವಿದರು ನ. 26 ರಂದು ಸಂಘದಲ್ಲಿ ನಡೆಯುವ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಲಿದ್ದಾರೆ ಹಾಗು ಸಂಘಕ್ಕೆ ಸೇವೆ ಸಲ್ಲಿಸಿದ ದೆಹಲಿ ಕನ್ನಡಿಗರಲ್ಲಿ ಈಗಾಗಲೇ ಆಯ್ಕೆ ಮಾಡಿದವರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಲಾಗುವುದು, ವಾರ್ಷಿಕ ಕ್ರೀಡಾ ಸ್ಪರ್ಧೆ, ಆಟೋಟ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ, ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ನೀಡಲಾಗುವುದು ಎಂದರು.

ಇಂದು ಸಂಜೆ ದೆಹಲಿಯ ಉಪ ರಾಜ್ಯಪಾಲರಾದ ಶ್ರೀ ವಿನಯ್ ಕುಮಾರ್ ಸಕ್ಸೆನಾ ಅವರು ಆಹ್ವಾನ ನೀಡಿರುವಂತೆ ದೆಹಲಿಯಲ್ಲಿ ಮೊಟ್ಟ ಮೊದಲ ಬಾರಿ ಆಯೋಜಿಸಲಾಗಿರುವ ಕರ್ನಾಟಕ ಫೌಂಡೇಷನ್ ದಿನದ ಆಚರಣೆ ಕಾರ್ಯಕ್ರಮಕ್ಕೆ ನಮ್ಮ ಸಂಘದ ಸದಸ್ಯರುಗಳು ಭಾಗವಹಿಸುತ್ತಿದ್ದು, ಅಲ್ಲಿ ನಮ್ಮ ನಾಡಗೀತೆ ಹಾಗು ಮಕ್ಕಳಿಂದ ನೃತ್ಯ ಪ್ರಸ್ತುತಿ ಮಾಡಲಿದ್ದೇವೆ. ಇದು ನಮ್ಮ ದೆಹಲಿ ಕನ್ನಡಿಗರಿಗೆಲ್ಲಾ ಅತ್ಯಂತ ಹೆಮ್ಮೆ, ಗೌರವ ಮತ್ತು ಅಭಿಮಾನದ ಸಂದರ್ಭ. ಹಾಗೇನೇ ನಮ್ಮ ಕರ್ನಾಟಕ ಸರ್ಕಾರ ಹೊರನಾಡಿನಲ್ಲಿ ಕನ್ನಡವನ್ನು ಬೆಳೆಸುತ್ತಿರುವ ನಮ್ಮ ಕರ್ನಾಟಕದ ಸಂಸ್ಕೃತಿಯನ್ನು, ಕನ್ನಡತನವನ್ನು ಪಸರಿಸುತ್ತಿರುವ ಸೂಕ್ತ ವ್ಯಕ್ತಿಗಳನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡುವಂತಾಗಲಿ ಎಂದು ಆಶಿಸಿದರು.

ಇಂದು ನಮ್ಮೊಂದಿಗಿರುವ ಚೀನಾದಲ್ಲಿ ನಡೆದ ಪಾರಾ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕಗಳನ್ನು ಪಡೆದ ಸಂಪೂರ್ಣ ಅಂಧರಾಗಿರುವ ಕು. ರಕ್ಷಿತರಾಜು ಹಾಗೂ ಕು. ರಾಧ ಅವರಿಗೆ ಸರ್ಕಾರದಿಂದ ಸರಿಯಾದ ಸಹಕಾರ ಪ್ರೋತ್ಸಾಹ ಸಿಗದಿದ್ದರೂ ತಮ್ಮ ಪರಿಶ್ರಮ ಛಲದಿಂದ ಉತ್ತಮ ಸಾಧನೆ ಮಾಡಿ, ಜಾಗತಿಕ ಮಟ್ಟದಲ್ಲಿ ಪದಕಗಳನ್ನು ಪಡೆದು ದೇಶದ ರಾಜ್ಯದ ಹಿರಿಮೆ ಹೆಚ್ಚಿಸಿದ್ದಾರೆ. ಇವರಿಗೆ ತಲೆಬಾಗುತ್ತೇನೆ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ ಮತ್ತು ಪದ್ಮಾಕ್ಷಿ ಲೋಕೇಶ್ ಅವರ ತಂಡಕ್ಕೆ ನಮ್ಮ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಸಮಸ್ತ ಕನ್ನಡನಾಡಿನ ಜನತೆಗೆ, ದೇಶ ವಿದೇಶಗಳಲ್ಲಿ ನೆಲಸಿರುವ ಸಮಸ್ತ ಹೊರನಾಡ ಕನ್ನಡಿಗರಿಗೆ ದೆಹಲಿ, ಎನ್.ಸಿ.ಆರ್. ನ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು ಮತ್ತು ಸುವರ್ಣ ಕರ್ನಾಟಕ ಸಂಭ್ರಮದ ಅಭಿನಂದನೆಗಳು ಎಂದರು.

ನಂತರ, ಡಾ. ಪದ್ಮಾಕ್ಷಿ ಲೋಕೇಶ್, ಶ್ರೀ ಅನಿಲ್, ರಾಜ್, ಮಣಿವನ್ನನ್ ಮತ್ತು ಸಂಗಡಿಗರನ್ನು, ಪಾರಾ ಏಷ್ಯನ್ ಗೇಮ್ಸ್‌ನಲ್ಲಿ 1500ಮೀ ಓಟದಲ್ಲಿ ಚಿನ್ನದ ಪದಕ ವಿಜೇತರಾದ ಕು. ರಕ್ಷಿತ ರಾಜು ಮತ್ತು ಕು. ರಾಧ ಅವರನ್ನು ಸಂಘದ ಪರವಾಗಿ ಶಾಲು ಹೊದಿಸಿ ಸ್ಮರಣಿಕೆ, ಸ್ಮರಣ ಸಂಚಿಕೆ ನೀಡಿ ಗೌರವಿಸಿ ಅಭಿನಂದಿಸಲಾಯಿತು. ಬೆಂಗಳೂರಿನ ಕೋರಮಂಗಲ ಹಾಗೂ ನಾಗರಭಾವಿ ರೋಟರಿ ಕ್ಲಬ್ ವತಿಯಿಂದ ದೆಹಲಿ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ, ಡಾ. ಹೊನ್ನಮ್ಮ, ಡಾ. ಅಶೋಕ ಎಂ.ಈಟಿ ಹಾಗೂ ಡಾ. ರೂಪಶ್ರೀಯವರಿಗೆ ಮತ್ತು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರಿಗೆ ವಿವಿಧ ಪ್ರಶಸ್ತಿ ಮತ್ತು ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು. ಸಂಘದ ವತಿಯಿಂದ ಆಗಮಿಸಿದ್ದವರಿಗೆ ರಾಜ್ಯೋತ್ಸವ ಪ್ರಯುಕ್ತ ವಿಶೇಷ ಉಪಹಾರ ಏರ್ಪಡಿಸಲಾಗಿತ್ತು.

**ನಾಡಿನ, ದೇಶದ, ವಿಶ್ವದ ಸಮಸ್ತ ಕನ್ನಡ ಜನತೆಗೆ, ದೆಹಲಿ ಕನ್ನಡಿಗರಿಗೆ 68ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.** ■

***ಅಭಿಮತ ವರದಿ***

## ದೆಹಲಿ ಉಪ ರಾಜ್ಯಪಾಲರಿಂದ ವಿವಿಧ ರಾಜ್ಯಗಳ ಹಾಗು ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನಾ ದಿನಾಚರಣೆ:

# 'ತಾಲ್ಕಟೋರ ಕ್ರೀಡಾಂಗಣದಲ್ಲಿ ಮೊಳಗಿದ ಕರ್ನಾಟಕ ನಾಡಗೀತೆ'



ದೆಹಲಿಯ ಉಪ ರಾಜ್ಯಪಾಲರಾದ ಶ್ರೀ ವಿನಯ್ ಕುಮಾರ್ ಸಕ್ಸೇನಾ ಅವರ ಸಮ್ಮುಖದಲ್ಲಿ ಇಲ್ಲಿನ ಪ್ರೆಸಿಡೆಂಟ್ ಎಸ್ಟೇಟ್ ಬಳಿ ಇರುವ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ವೇದಿಕೆಯಲ್ಲಿ 01.11.2023 ರಂದು ಕರ್ನಾಟಕವೂ ಸೇರಿದಂತೆ ಎಂಟು ರಾಜ್ಯಗಳು ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳ 'ಸ್ಥಾಪನಾ ದಿನ' (Foundation Day)ವನ್ನು ದೆಹಲಿ ಪ್ರಸಾಶನ್ ವತಿಯಿಂದ ಆಯೋಜಿಸಲಾಗಿತ್ತು. ಉಪ ರಾಜ್ಯಪಾಲರಿಂದ ದೆಹಲಿ ಕನ್ನಡಿಗರಿಗೆ ವೈಯಕ್ತಿಕ ಆಮಂತ್ರಣ ಪತ್ರ ನೀಡಲಾಗಿತ್ತು.

68ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಹಾಗೂ ಸುವರ್ಣ ಕರ್ನಾಟಕ ಸಂಭ್ರಮಾಚರಣೆಯ ದಿನದಂದು ಕರ್ನಾಟಕ ಸ್ಥಾಪನಾ ದಿನದ ಕಾರ್ಯಕ್ರಮ ದೆಹಲಿಯಲ್ಲಿ ಆಯೋಜನೆಗೊಂಡಿದ್ದು ಇಲ್ಲಿನ ಕನ್ನಡಿಗರಿಗೆ ವಿಶೇಷವಾದ ಸಂದರ್ಭವಾಗಿತ್ತು. ಈ ಕಾರ್ಯಕ್ರಮದಲ್ಲಿ ಎಂಟು ರಾಜ್ಯಗಳು:ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಹರಿಯಾಣ, ಪಂಜಾಬ್, ಮಧ್ಯಪ್ರದೇಶ ಮತ್ತು ಚತ್ತೀಸ್‌ಗಡ ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳು : ದೆಹಲಿ, ಚಂಢೀಗಡ, ಪಾಂಡಿಚೇರಿ, ಲಕ್ಷ ದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ 'ಸ್ಥಾಪನಾ ದಿನ'ವನ್ನು ಆಚರಿಸಲಾಯಿತು. ವಿವಿಧ ರಾಜ್ಯಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆಯಾ ರಾಜ್ಯಗಳ ಕಲಾವಿದರು ವೇದಿಕೆ ಮೇಲೆ ಉಪರಾಜ್ಯಪಾಲರ ಮುಂದೆ ನಾನಾ ಕಲಾ ಪ್ರಕಾರಗಳನ್ನು ಪ್ರದರ್ಶಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಹಾಗು ನೂರಕ್ಕೂ ಹೆಚ್ಚು ದೆಹಲಿ ಕರ್ನಾಟಕ ಸಂಘದ ಸದಸ್ಯರು, ಇಲ್ಲಿನ ಹಿರಿಯ ಕನ್ನಡಿಗರು ಕರ್ನಾಟಕವನ್ನು ಪ್ರತಿನಿಧಿಸಿದ್ದರು.

ರಾಷ್ಟ್ರಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ತಮಿಳುನಾಡು ಕಲಾವಿದರಿಂದ ನಾದಸ್ವರ, ಮೃದಂಗ ವಾದನ, ಆಂಧ್ರದ ಕಲಾವಿದೆಯರಿಂದ ಕಥಕ್ಕಳಿ ನೃತ್ಯ, ಕೇರಳದ ಕಲಾವಿದರಿಂದ ನೃತ್ಯ, ಪಂಜಾಬ್ ಮುಲ್ತಾನಿ ಕಲಾವಿದರಿಂದ ಲುಟಿ ನೃತ್ಯ, ದೆಹಲಿ ರಾವ್‌ಜಾಸ್ ಕಾಲೇಜು ಕಲಾವಿದರಿಂದ ಸಮೂಹ ನೃತ್ಯ, ಹರಿಯಾಣ್ವಿ ಡಾನ್ಸ್ ಮುಂತಾದವು ಪ್ರದರ್ಶನಗೊಂಡವು.







ದೆಹಲಿಯ ಕನ್ನಡಿಗ ಮಹಿಳೆಯರಿಂದ ನಾಡಗೀತೆ ಪ್ರಸ್ತುತಿ ಮಾಡಲಾಯಿತು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ, ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಶುಭಾ ದೇವಿಪ್ರಸಾದ್ ಹಾಗೂ ಶ್ರೀಮತಿ ಶ್ವೇತಾಸುಧೀರ್ ಜೊತೆಯಲ್ಲಿ ಹಾಡಿದ ರಾಷ್ಟ್ರಕವಿ ಕುವೆಂಪುರವರ ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ನಾಡಗೀತೆಯ ಸಾಲುಗಳು ಸಭಾಂಗಣದಲ್ಲಿ ಪ್ರತಿಧ್ವನಿಸಿದ್ದವು. ಈ ಸಂದರ್ಭ ಉಪರಾಜ್ಯಪಾಲರು ಹಾಗೂ ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲಾ ರಾಜ್ಯಗಳ, ಪ್ರದೇಶಗಳ ಜನರು ಎದ್ದು ನಿಂತು ಗೌರವ ಸೂಚಿಸಿದ್ದು ಕನ್ನಡ ತಾಯಿ ಭುವನೇಶ್ವರಿಗೆ ಸಮಸ್ತ ಕನ್ನಡಿಗರಿಗೆ ರಾಜ್ಯೋತ್ಸವ ಸಂದರ್ಭ ಸಂದ ಗೌರವವಾಗಿದೆ. ಗುರುಗಾಂವ್ ಕನ್ನಡ ಸಂಘದ ವತಿಯಿಂದ ಕುಮಾರಿಯರಾದ ಸ್ನೇಹ ಶರಣಪ್ಪ, ಶೃತಿ ಪ್ರಭಾಕರ್, ಕೃಪಾ ರಮೇಶ್, ಮನುಶ್ರೀ ಮರಿಬಸಪ್ಪ ಹಾಗೂ ಕೃಷ್ಣನಾಗಿ ಕು: ಜಿಷ್ಣು ರಮೇಶ್ 'ಸಿಂಗಾರ ಸಿರಿಯೇ' ಬಾಲ ಮುಕುಂದ ಮುರಾರಿ...ಗೀತೆಗಳಿಗೆ ಅಮೋಘವಾಗಿ ಪ್ರಸ್ತುತಿ ನೀಡಿದ ಸಮೂಹ ನೃತ್ಯ ನೆರೆದಿದ್ದ ಜನರ ಹಾಗು ಉಪ ರಾಜ್ಯಪಾಲರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳು, ದೆಹಲಿ ಉಪ ರಾಜ್ಯಪಾಲರಾದ ಶ್ರೀ ವಿ.ಕೆ. ಸಕ್ಸೇನಾ ಅವರಿಗೆ ಮೈಸೂರು ಪೇಟ ತೊಡಿಸಿ, ಏಲಕ್ಕಿ ಹಾರ ಸಮರ್ಪಿಸಿ ಸಂಘದ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆ ಸಲ್ಲಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದ ನಂತರ ಸಭಿಕರನ್ನು ಉದ್ದೇಶಿಸಿ ಮಾತನಾಡಿದ ಉಪ ರಾಜ್ಯಪಾಲ ಶ್ರೀ ವಿ. ಕೆ.ಸಕ್ಸೇನಾ ಅವರು ನೆರೆದಿದ್ದ ಎಲ್ಲರಿಗೂ, ಆಯಾ ರಾಜ್ಯಗಳ ಕೇಂದ್ರಾಡಳಿತ ಪ್ರದೇಶಗಳ ಸ್ಥಾಪನಾ ದಿನದ ಅಭಿನಂದನೆಗಳನ್ನು ತಿಳಿಸುತ್ತಾ, ಈ ದಿನ

ಬಹಳ ಮಹತ್ವ ಪೂರ್ಣವಾದ ದಿನ. ಪ್ರೆಸಿಡೆನ್ಸಿ ಸಿಸ್ಟಂ, ಪಾರ್ಸಿ ಆಡಳಿತ ಸಮಾಪ್ತಿಯಾದ ದಿನ, ಆಗಮಿಸಿರುವ ಎಲ್ಲರಿಗೂ ಹಾರ್ದಿಕ ಸ್ವಾಗತ ಮತ್ತು ಅಭಿನಂದನೆ ಸಲ್ಲಿಸುತ್ತೇನೆ, ದೆಹಲಿ ನಿಮ್ಮೆಲ್ಲರಿಂದ ಒಳಗೊಂಡಿದೆ, ಅದರ ಅಭಿವೃದ್ಧಿಯಲ್ಲಿ ನಿಮ್ಮದು ಸಮಪಾಲು ಇದೆ ಎಂದರು. 'ದೆಹಲಿ ದೇಶ್ ಕಾ ದಿಲ್ ಹೈ, ದಿಲ್ಲಿ ದಿಲ್ ವಾಲೋನ್ಕಾ ಹೈ' ಭಾಷಾ ಕಾ ಕೋಯಿ ಸೀಮಾ ನಹೀ ಹೋತಾ ಹೈ, ಏಕ್ ದೂಸ್ ರೆ ಕಾ ಬೀಚ್ ಕಾ ದೂರ್ ಕಮ್ ಕರ್ನೆ ಕಾ ಅವಸರ್ ಹೈ ಆಜ್ ಕಾ ದಿನ್. ಆಪ್ ಸಬ್ ದಿಲೋಂಕೋ ಜೋಡಿಯೇ, ಪ್ರಧಾನಮಂತ್ರಿ ಜಿ ಕಾ ಏಕ್ ಭಾರತ್ ಶ್ರೇಷ್ಠ ಭಾರತ್ ಕಾ ಧ್ಯೇಯ್ ಕಾ ಅಂತರ್ಗತ್ ಸಬ್ ಕೊ ಜೋಡ್ನೇ ಕೀ ಪ್ರಯಾಸ್ ಹೋ ರಹಾ ಹೈ ಎಂದರು.

ಮುಂದುವರಿದು, ಎಲ್ಲರೂ ಜೊತೆಗೂಡಿ ಸಾಧಿಸುವ ಸಫಲತೆಯೇ ವಿಕಾಸದ ಸದೃಢತೆ, ದೆಹಲಿ ಮೆಟ್ರೋ ನಂತಹ ಟ್ರಾನ್ಸ್ಪೋರ್ಟ್ ಸಿಸ್ಟಮ್‌ಗಳು ಈಗ ಇತರ ರಾಜ್ಯಗಳಿಗೂ ಬಹಳ ತ್ವರಿತ ಗತಿಯಲ್ಲಿ ವಿಸ್ತಾರವಾಗುತ್ತಿವೆ, ಭಾರತದ ಪ್ರತಿಯೊಂದು ರಾಜ್ಯವು ಅಭಿವೃದ್ಧಿಯ ಪಥದಲ್ಲಿ ಸಾಗಬೇಕು. ಭಾರತದಲ್ಲಿ ಭಾಷೆ ಅನೇಕ ಆದರೆ ಭಾರತೀಯರು ಬೇರೆ ರಾಜ್ಯದ ಭಾಷೆ ಅರ್ಥವಾಗದಿದ್ದರೂ ಸಹ ಸಂಗೀತ ನೃತ್ಯಗಳಿಂದ ಅವುಗಳ ಭಾವವನ್ನು, ಅಲ್ಲಿನ ಕಲೆ, ಸಂಸ್ಕೃತಿಯನ್ನು ಪ್ರತಿಯೊಬ್ಬರೂ ಚೆನ್ನಾಗಿ ಅರ್ಥೈಸಿಕೊಳ್ಳಬಹುದೆಂದು ಇಂದು ನಾವೆಲ್ಲಾ ವೀಕ್ಷಿಸಿದ ವಿವಿಧ ರಾಜ್ಯಗಳ ಕಲಾ ಪ್ರಸ್ತುತಿಗಳಿಂದ ತಿಳಿದು ಬರುತ್ತದೆ. ಈ ಕಾರ್ಯಕ್ರಮ ತಮಗೆ ಬಹಳ ಸಂತೋಷ ತಂದಿದೆ, ಭಾಗವಹಿಸಿದ ಎಲ್ಲಾ ತಂಡಗಳ ಕಲಾವಿದರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಆಗಮಿಸಿರುವ ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳಿಗೆ ತಾವು ಆಭಾರಿ, ಎಲ್ಲರಿಗೂ ಸ್ಥಾಪನಾ ದಿವಸದ ಶುಭಾಶಯಗಳು ಎಂದು ಬಹಳ ಸಂತೋಷದಿಂದ ತಿಳಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಯುತ ಶಿವಪ್ಪ ಎಂ., ಕೆ.ಎಸ್. ಮೂರ್ತಿ, ಪ್ರಭಾಕರ ಮಡ್ಡಿತೋಟ್, ಸಂತೋಷ ಜೆ., ವಸಂತ ಕುಮಾರ್, ಹಾಗು ಶ್ರೀಮತಿಯರಾದ ಮೀನಾ ವಸಂತ್, ಸರೋಜ ಮಾಧವ, ಮಮತಾ ಶಿವರಾಮ್, ಡಾ. ಹೊನ್ನಮ್ಮ, ರೂಪಶ್ರೀ, ದೀನಾ ಜೋಯ್ಸ್, ದೀಪಾ ಶಿವಪ್ಪ, ಶ್ರುತಿ ರಮೇಶ್, ರತ್ನ, ಹಿರಿಯರಾದ ಶ್ರೀ ಎನ್.ಎ. ಮಾಧವ, ಡಾ. ಎಸ್. ಎಲ್. ಭಂಡಾರ್‌ಕರ್, ಡಾ. ಎಸ್.ಎಂ. ಕಂಟೀಕರ್, ಶ್ರೀ ವಿ.ವಿ. ಬಿರಾದಾರ, ಡಾ. ಅಶೋಕ್ ಎಂಕಟಿ, ಡಾ. ಬಸವರಾಜ, ಶ್ರೀ ಅನಂತರಾಮ ಅರಳಿ, ಶ್ರೀ ಎಚ್.ಜಿ. ಶಿವರಾಮ್, ಶ್ರೀ ಸತ್ಯ ನಾರಾಯಣ ಪಧಿ, ಶ್ರೀ ರಾಜಕುಮಾರ್, ಶ್ರೀ ನರಸಿಂಹಮೂರ್ತಿ, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ರಮೇಶ್ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್, ಜರ್ನಲಿಸ್ಟ್ ಶ್ರೀ ಯಲ್ಲಾಲಿಂಗ ಕೊಪ್ಪದ್, ಸಂಸತ್ ಭವನದ ಜಂಟೀ ಕಾರ್ಯದರ್ಶಿ ಡಾ. ಕೆ.ಎಸ್. ಸೋಮಶೇಖರ್, ಏರ್ ಕಮಾಡೋರ್ ಟಿ.ಎಂ. ಶ್ರೀನಾಥ್, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಎಂ. ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ, ಸದಸ್ಯರಾದ ಶ್ರೀಮತಿ ಮತ್ತು ಶ್ರೀ ಶರಣಪ್ಪ, ಶ್ರೀ ರಮೇಶ್, ಶ್ರೀಮತಿ ಮಾಲಾ ರಮೇಶ್, ಮಕ್ಕಳು ಮುಂತಾದವರು ಭಾಗಿಯಾಗಿದ್ದರು.

ಕಾರ್ಯಕ್ರಮದ ನಂತರ ಆಗಮಿಸಿದ್ದ ಎಲ್ಲರಿಗೂ ಆಯೋಜಕರಿಂದ ಹೈ ಟೀ–ಲಘು ಉಪಹಾರ, ಟೀ, ಕಾಫಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಕರ್ನಾಟಕ ರಾಜ್ಯೋತ್ಸವದ ಸಂದರ್ಭ, ದೆಹಲಿಯಲ್ಲಿರುವ ಇತರ ರಾಜ್ಯಗಳ ಜನರ ಜೊತೆ ಕರ್ನಾಟಕ ರಾಜ್ಯದ ಸ್ಥಾಪನಾ ದಿನದ ಅಂಗವಾಗಿ ಏರ್ಪಡಿಸಿದ್ದ ಒಂದು ಅತ್ಯುತ್ತಮ ಕಾರ್ಯಕ್ರಮದಲ್ಲಿ ಭಾಗಿಯಾದ ಧನ್ಯತಾಭಾವ ದೆಹಲಿ ಕನ್ನಡಿಗರಲ್ಲಿ ಮೂಡಿತ್ತು. ■

***ಅಭಿಮತ ವರದಿ***

# ಪದ್ಮಭೂಷಣ ಶ್ರೀಮತಿ (ಡಾ.) ಸುಧಾ ಮೂರ್ತಿ

**ಪರಿಚಯ**



ಉತ್ತರ ಕರ್ನಾಟಕದ ಶಿಗ್ಗಾಂವ್‌ನಲ್ಲಿ ಆಗಸ್ಟ್ 19, 1950 ರಂದು ಜನಿಸಿದ ಶ್ರೀಮತಿ ಸುಧಾ ಮೂರ್ತಿ ಅವರು 1972 ರಲ್ಲಿ ಹುಬ್ಬಳ್ಳಿಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನಿಂದ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಮತ್ತು 1974 ರಲ್ಲಿ ಬೆಂಗಳೂರಿನ ಐಐಎಸ್‌ಸಿ (IISc) ಯಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅನಂತರ ಟೆಲ್ಕೋ (ಈಗಿನ ಟಾಟಾ ಮೋಟಾರ್ಸ್) ಕಂಪನಿಯಲ್ಲಿ ನೇಮಕಗೊಂಡ ಮೊದಲ ಮಹಿಳಾ ಇಂಜಿನಿಯರ್ ಆಗಿ ಎಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ತಮ್ಮ ಪತಿ ಶ್ರೀ ಎನ್. ಆರ್. ನಾರಾಯಣ ಮೂರ್ತಿ ಅವರ ಜೊತೆ 1981 ರಲ್ಲಿ ಇನ್ಫೋಸಿಸ್ ಸಂಸ್ಥೆಯ ಸ್ಥಾಪನೆಗೆ ಶ್ರೀಮತಿ ಸುಧಾ ಮೂರ್ತಿಯವರು ಕೊಡುಗೆ ನೀಡಿದ ಕಥೆ ಎಲ್ಲರಲ್ಲೂ ಮನೆ ಮಾತಾಗಿದೆ. ಇವರ ಅಚಲವಾದ ಬೆಂಬಲ, ಸಮರ್ಪಣೆ, ತೀಕ್ಷ್ಣವಾದ ಚಾಣಾಕ್ಷತೆ ಮತ್ತು ನಿರ್ಣಾಯಕ ನಾಯಕತ್ವದ ಗುಣಗಳು ಇನ್ಫೋಸಿಸ್ ಪ್ರತಿಷ್ಠಾನದ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದವು. ಫೌಂಡೇಷನ್‌ನ ಸಂಸ್ಥಾಪಕರು ಮತ್ತು ಅಧ್ಯಕ್ಷರಾಗಿ ಇಪ್ಪತ್ತೈದು ವರ್ಷಗಳ ಸುದೀರ್ಘ ಅಧಿಕಾರಾವಧಿಯಲ್ಲಿ ಇವರು ಆರೋಗ್ಯ, ಶಿಕ್ಷಣ, ಕಲೆ ಮತ್ತು ಸಂಸ್ಕೃತಿ, ಮಹಿಳಾ ಸಬಲೀಕರಣ ಮತ್ತು ಸಾರ್ವಜನಿಕ ನೈರ್ಮಲ್ಯ ಕ್ಷೇತ್ರಗಳಲ್ಲಿ ಭಾರತದಾದ್ಯಂತ ಅನೇಕ ಯೋಜನೆಗಳನ್ನು ಬೆಂಬಲಿಸಿದ್ದಾರೆ. ಮಹಿಳಾ ಸಬಲೀಕರಣಕ್ಕೆ ಇವರ ಪ್ರಮುಖ ಕೊಡುಗೆಯೆಂದರೆ ದೇವದಾಸಿ ಸಮುದಾಯದೊಂದಿಗೆ ಮಾಡಿದ ವ್ಯಾಪಕ ಕೆಲಸ ಮತ್ತು ಉಪಕ್ರಮವು ಮೂರು ಸಾವಿರಕ್ಕೂ ಹೆಚ್ಚು ದೇವದಾಸಿಯರಿಗೆ ಬದಲಿ ಜೀವನೋಪಾಯ ಅವಕಾಶ, ಪುನರ್ವಸತಿ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಸಹಾಯ ಮಾಡಿದೆ. ಇವರು ಹದಿನಾರು ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಪರಿಹಾರ ಪ್ರಯತ್ನಗಳಲ್ಲಿ ಸಹಾಯ ನೀಡಿ ಬೆಂಬಲಿಸಿದ್ದಾರೆ. ಕರ್ನಾಟಕದಲ್ಲಿ ಎಪ್ಪತ್ತು ಸಾವಿರಕ್ಕೂ ಹೆಚ್ಚು ಗ್ರಂಥಾಲಯಗಳನ್ನು, ಹದಿನೈದು ಸಾವಿರ ಶೌಚಾಲಯಗಳನ್ನು ಮತ್ತು ಐದು ಧರ್ಮಶಾಲೆಗಳನ್ನು ನಿರ್ಮಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯಕ್ಕೂ 25 ಲಕ್ಷಗಳ ಆರ್ಥಿಕ ನೆರವು ನೀಡಿದ್ದಾರೆ.

ಬಹುಮುಖ ಶೈಕ್ಷಣಿಕ ಹಿನ್ನೆಲೆ ಹೊಂದಿರುವ ಕುಟುಂಬದಿಂದ ಬಂದ ಶ್ರೀಮತಿ ಸುಧಾ ಮೂರ್ತಿ ಅವರು ಚಿಕ್ಕ ವಯಸ್ಸಿನಲ್ಲೇ ಓದುವ ಹವ್ಯಾಸವನ್ನು ಬೆಳೆಸಿಕೊಂಡು, ಸಮೃದ್ಧ ಬರಹಗಾರರಾಗಿದ್ದಾರೆ. ಮಕ್ಕಳ ಪುಸ್ತಕಗಳು, ಸಣ್ಣ ಕಥೆಗಳು, ಕಾದಂಬರಿಗಳು, ತಾಂತ್ರಿಕ ಪುಸ್ತಕಗಳು ಮತ್ತು ಪ್ರವಾಸ ಕಥನಗಳೂ ಸೇರಿದಂತೆ ಸುಮಾರು 250ಕ್ಕೂ ಹೆಚ್ಚು ಶೀರ್ಷಿಕೆಗಳ ಪುಸ್ತಕಗಳನ್ನು ಈವರೆಗೆ ಬರೆದಿದ್ದಾರೆ. ಮುಖ್ಯವಾಗಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬರೆಯುವ ಇವರ ಪುಸ್ತಕಗಳನ್ನು ಎಲ್ಲಾ ಪ್ರಮುಖ ಭಾರತೀಯ ಭಾಷೆಗಳಿಗೆ, ಹಾಗೂ ಹಲವಾರು ಪುಸ್ತಕಗಳನ್ನು ಇಟಾಲಿಯನ್ ಮತ್ತು ಅರೇಬಿಕ್ ಭಾಷೆಗಳಿಗೆ ಅನುವಾದಿಸಲಾಗಿದ್ದು, ದೇಶದಾದ್ಯಂತ 60 ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಸರಳವಾದ ಭಾಷೆಯಲ್ಲಿ ಬರೆದಿರುವ ಇವರ ಪುಸ್ತಕಗಳಲ್ಲಿ ಅತ್ಯಂತ ಪ್ರಸಿದ್ಧ ಶೀರ್ಷಿಕೆಗಳು : ಏರಿಳಿತದ ದಾರಿಯಲ್ಲಿ, ಸಾಮಾನ್ಯರಲ್ಲಿ ಅಸಾಮಾನ್ಯರು, ಯಶಸ್ವಿನಿ, ಕಾವೇರಿಯಿಂದ ಮೆಕೆಂಜಿಗೆ, ಗುಟ್ಟೊಂದು ಹೇಳುವೆ, ಡಾಲರ್ ಸೊಸೆ, ಮನದ ಮಾತು, ಹಕ್ಕಿಯ ತೆರದಲ್ಲಿ, Grandma's Bag of Stories, Grand Parents Bag of Stories, Gently falls the Bakula, Gopi Diaries, Three Thousand Stitches & Wise and Otherwise. ಶ್ರೀಮತಿ ಸುಧಾ ಮೂರ್ತಿ ಅವರ ಕಥೆಗಳು ಕಿರಿಯ ಮತ್ತು ಹಿರಿಯ ಓದುಗರಿಗೆ ಸ್ಫೂರ್ತಿ ನೀಡುತ್ತವೆ. ಇವರ ಬರಹಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಗೆ ಅನುಗುಣವಾಗಿ ಸಹಾನುಭೂತಿ ಮತ್ತು ದಯೆಯ ಮೌಲ್ಯಗಳಿಂದ ತುಂಬಿವೆ, ಕಾಲ್ಪನಿಕವಲ್ಲದ ಇವರ ಕಥೆಗಳು ಇನ್ಫೋಸಿಸ್ ಫೌಂಡೇಶನ್‌ನಲ್ಲಿ ಎಲ್ಲಾ ವರ್ಗಗಳ ಜನರೊಂದಿಗೆ ಅವರು ಕೆಲಸ ಮಾಡಿದ ಸಮಯದ ಅನುಭವಗಳನ್ನಾಧರಿಸಿವೆ.

ಶ್ರೀಮತಿ ಸುಧಾ ಮೂರ್ತಿ ಅವರು ಅನೇಕ ಗೌರವ ಡಾಕ್ಟರೇಟ್ ಪದವಿಗಳು, ಪ್ರತಿಷ್ಠಿತ ಪ್ರಶಸ್ತಿ ಮತ್ತು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಭಾರತ ಸರ್ಕಾರವು 2023 ಮತ್ತು 2006 ರಲ್ಲಿ ಕ್ರಮವಾಗಿ ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳನ್ನು ನೀಡಿ ಇವರನ್ನು ಗೌರವಿಸಿದೆ. 2023 ರಲ್ಲಿ ಸಾಹಿತ್ಯ ಅಕಾಡೆಮಿಯಿಂದ ಬಾಲ ಸಾಹಿತ್ಯ ಪುರಸ್ಕಾರ, 2006 ರಲ್ಲಿ ಸಾಹಿತ್ಯಕ್ಕಾಗಿ ಆರ್.ಕೆ. ನಾರಾಯಣ್ ಪ್ರಶಸ್ತಿ, 2020 ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಸ್ತಿ ಮತ್ತು ಕರ್ನಾಟಕ ಸರ್ಕಾರದಿಂದ ಕನ್ನಡ ಸಾಹಿತ್ಯದಲ್ಲಿನ ಶ್ರೇಷ್ಠತೆಗಾಗಿ 2000ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಮತ್ತು 2012 ರಲ್ಲಿ ಅತ್ತಿಮಬ್ಬೆ ಪ್ರಶಸ್ತಿಯನ್ನು ಸಹಾ ಇವರು ಪಡೆದಿದ್ದಾರೆ. ಐಐಟಿ ಕಾನ್ಪುರ ಸೇರಿದಂತೆ ಭಾರತದಾದ್ಯಂತದ ವಿಶ್ವವಿದ್ಯಾಲಯಗಳಿಂದ ಹನ್ನೊಂದು ಗೌರವ ಡಾಕ್ಟರೇಟ್‌ಗಳನ್ನೂ ಇವರು ಪಡೆದಿದ್ದಾರೆ.

ಬಹುಮುಖ ಪ್ರತಿಭೆ, ವ್ಯಕ್ತಿತ್ವ ಹೊಂದಿರುವ, ಕನ್ನಡಿಗರ ಬಗ್ಗೆ ಅಪಾರ ಗೌರವ ಮತ್ತು ಸದಾ ಕಾಳಜಿ ತೋರುವ, ದೆಹಲಿ ಕರ್ನಾಟಕ ಸಂಘದ ಮೇಲೆ ಅಭಿಮಾನವಿಟ್ಟು ಕೆಲಸ ಕಾರ್ಯಗಳಿಗೆ ಸಹಕಾರ ಹಾಗು ಮಾರ್ಗದರ್ಶನ ನೀಡುತ್ತಿರುವ ಪದ್ಮ ಭೂಷಣ ಪ್ರಶಸ್ತಿ ಮತ್ತು ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರಗಳಿಗೆ ಭಾಜನರಾದ **ಶ್ರೀಮತಿ ಡಾ. ಸುಧಾ ಮೂರ್ತಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮತ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.**■

# ದೆಹಲಿ ಕರ್ನಾಟಕ ಸಂಘದಲ್ಲಿ ಪದ್ಮಭೂಷಣ ಪುರಸ್ಕೃತೆ ಶ್ರೀಮತಿ (ಡಾ.) ಸುಧಾ ಮೂರ್ತಿ ಅವರಿಗೆ ಗೌರವ ಅಭಿನಂದನೆ




ದೆಹಲಿ ಕನ್ನಡಿಗರ ಅಸ್ಮಿತೆಯಾಗಿ, ಕರ್ನಾಟಕದ ರಾಯಭಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ದೆಹಲಿ ಕರ್ನಾಟಕ ಸಂಘವು ಪದ್ಮ ಸರಣಿ ಪ್ರಶಸ್ತಿ, ಚಲನಚಿತ್ರ, ಸಾಹಿತ್ಯ, ಶಿಕ್ಷಣ, ಕಲೆ, ರಂಗಭೂಮಿ ಮುಂತಾದ ಕ್ಷೇತ್ರಗಳಲ್ಲಿ ನಾಡಿನ ಗಣ್ಯ ಸಾಧಕರಿಗೆ ಪ್ರಶಸ್ತಿ ಸಿಕ್ಕಾಗಲೆಲ್ಲ ಅವರನ್ನು ಸಂಘಕ್ಕೆ ಬರಮಾಡಿಕೊಂಡು ಗೌರವಿಸಿ ಅಭಿನಂದಿಸುವ ಪರಂಪರೆಯನ್ನು ನಡೆಸುತ್ತಾ ಬಂದಿದೆ. ಅದರಂತೆ ಭಾರತದ ರಾಷ್ಟ್ರಪತಿಗಳಿಂದ ಈ ಬಾರಿಯ ಪದ್ಮಭೂಷಣ ಪ್ರಶಸ್ತಿ ಪಡೆದ ಕನ್ನಡನಾಡಿನ ಹೆಮ್ಮೆಯ ಸಾಧಕರು, ಲೇಖಕರು, ಚಿಂತಕರು, ಸಮಾಜ ಸೇವಕರು, ಇನ್ಫೋಸಿಸ್ ಫೌಂಡೇಷನ್ ಸಂಸ್ಥಾಪಕರು, ಮೂರ್ತಿ ಟ್ರಸ್ಟ್‌ನ ಅಧ್ಯಕ್ಷರೂ ಆದ ಶ್ರೀಮತಿ (ಡಾ.) ಸುಧಾ ಮೂರ್ತಿ ಅವರನ್ನು ದಿ. 09.11.2023 ರಂದು ಸಂಘದ ಸಭಾಂಗಣದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಗೌರವಪೂರ್ವಕವಾಗಿ ಅಭಿನಂದಿಸಲಾಯಿತು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಅಭಿನಂದನಾ ಕಾರ್ಯಕ್ರಮವನ್ನು ನಿರ್ವಹಿಸಿದರು. ಅವರು ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸುತ್ತಾ ಸಂಪತ್ತಿನ ಜೊತೆ ವಿವೇಚನೆ, ಪಾಂಡಿತ್ಯದ ಜೊತೆ ನಮ್ರತೆ, ಅಧಿಕಾರದ ಜೊತೆ ಸೌಜನ್ಯತೆ ಈ ಎಲ್ಲಾ ಗುಣಗಳನ್ನು ಹೊಂದಿರುವವರನ್ನು ಮಹಾತ್ಮ ಅಥವಾ ಮಹಾನ್ ವ್ಯಕ್ತಿಗಳು ಎನ್ನಬಹುದು. ಇಂಥಹ ಎಲ್ಲ ಲಕ್ಷಣಗಳನ್ನು, ಗುಣಗಳನ್ನು ಯಥೇಚ್ಛವಾಗಿ ಹೊಂದಿರುವ ವ್ಯಕ್ತಿ ಬಹುಜನತೆಯ ಸ್ಫೂರ್ತಿ, ಸಫಲತೆಯ ಸಾಕಾರ ಮೂರ್ತಿ ಶ್ರೀಮತಿ ಸುಧಾ ಮೂರ್ತಿ ಅವರು ಇಂದು ನಮ್ಮೊಂದಿಗಿರುವುದು ಸಮಸ್ತ ದೆಹಲಿ ಕನ್ನಡಿಗರ ಸೌಭಾಗ್ಯ, ಅವರಿಗೆ ಪದ್ಮಭೂಷಣ ಪ್ರಶಸ್ತಿ ಬಂದಿರುವುದು ನಾಡಿನ ಜನರೆಲ್ಲರಿಗೆ ಹೆಮ್ಮೆಯ ವಿಷಯವೆಂದರು.

ಕಾರ್ಯಕ್ರಮದ ಕೇಂದ್ರ ಬಿಂದುವಾಗಿದ್ದ ಡಾ. ಸುಧಾ ಮೂರ್ತಿಯವರನ್ನು ಮತ್ತು ಆಗಮಿಸಿದ್ದವರೆಲ್ಲರನ್ನೂ




ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಆತ್ಮೀಯವಾಗಿ ಸ್ವಾಗತಿಸಿದರು. ಅವರು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ, ಸಂಘದ ಅಮೃತ ಕಾಲದಲ್ಲಿ ಶ್ರೀಮತಿ ಸುಧಾ ಮೂರ್ತಿ ಅವರನ್ನು ಸಂಘಕ್ಕೆ ಕರೆಯಿಸಿ ಅವರ ಮಾತುಗಳನ್ನು ಕೇಳಬೇಕೆಂದೂ ಅವರ ಮಾರ್ಗದರ್ಶನ ಪಡೆದುಕೊಳ್ಳಬೇಕೆಂದೂ ಬಹಳ ದಿನಗಳಿಂದ ನಾವು ಪ್ರಯತ್ನ ಮಾಡುತ್ತಿದ್ದೆವು. ಅದು ಈಗ ಫಲಪ್ರದವಾಗಿದೆ. ಶ್ರೀಮತಿ ಸುಧಾ ಮೂರ್ತಿ ಅಮ್ಮನವರು ನಮ್ಮ ಸಂಘದ ಗ್ರಂಥಾಲಯಕ್ಕೆ ಈ ಹಿಂದೆ 2008ರಲ್ಲಿ 15ಲಕ್ಷ ರೂ.ಗಳ ಆರ್ಥಿಕ ನೆರವು ನೀಡಿದ್ದರು, ಇಂದು ಅವರು ನಮ್ಮ ಸಂಘದಲ್ಲಿ ಗ್ರಂಥಾಲಯವನ್ನು ವೀಕ್ಷಿಸಿದ ನಂತರ ಇನ್ನೂ 10 ಲಕ್ಷ ರೂಪಾಯಿಗಳನ್ನು ನೀಡಲು ಒಪ್ಪಿಕೊಂಡಿದ್ದಾರೆ. ಅವರಿಗೆ ನಾವು ಚಿರಋಣಿ, ಸಂಘದ ಪರವಾಗಿ, ದೆಹಲಿ ಕನ್ನಡಿಗರ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದರು. ನಮ್ಮ ಇನ್ನೊಂದು ಕನಸಾದ ಕರ್ನಾಟಕದಿಂದ ದೆಹಲಿಗೆ ನಾಗರೀಕ ಸೇವಾ ಪರೀಕ್ಷೆಗಳು ಹಾಗೂ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬರುವ ಬಡ ಮಕ್ಕಳಿಗೆ ವಸತಿ ನಿಲಯವನ್ನು ನಿರ್ಮಿಸುವ ನಿಟ್ಟಿನಲ್ಲಿ ನೋಯಿಡಾ ಮತ್ತು ಗ್ರೇಟರ್ ನೋಯಿಡಾ ಅಥಾರಿಟಿಯ ನಮ್ಮ ಕನ್ನಡದವರೇ ಆದ ಇಬ್ಬರೂ ಸಿ.ಇ.ಓ. ಗಳಿಗೆ ಇನ್ನೊಂದು ಜಾಗವನ್ನು ಪಡೆಯಲು ನಾವು ಈಗಾಗಲೇ ಕೋರಿಕೆ ಸಲ್ಲಿಸಿದ್ದೇವೆ. ಆರ್ಥಿಕ ಸಹಾಯಕ್ಕೆ ಕರ್ನಾಟಕ ಸರ್ಕಾರಕ್ಕೂ ಮನವಿ ಮಾಡಿದ್ದೇವೆ. ಶ್ರೀಮತಿ ಸುಧಾ ಮೂರ್ತಿಯವರಿಗೂ ಈ ಬಗ್ಗೆ ತಿಳಿಸಿದ್ದೇನೆ, ವಸತಿ ಶಾಲೆ ಮಾಡುವ ಸಂದರ್ಭ ಅಮ್ಮನವರ ಆಶೀರ್ವಾದ ನಮಗೆ ಇರಲಿ ಎಂದು ಆಶಿಸಿದರು.

ಅನಂತರ, ಡಾ. ಸುಧಾ ಮೂರ್ತಿ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು. ಸ್ಥಳೀಯ ಕನ್ನಡ ಪರ ಸಂಸ್ಥೆಗಳಾದ ನಾಡಪ್ರಭು ಕೆಂಪೇಗೌಡ ಫೌಂಡೇಷನ್, ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ, ಕರ್ನಾಟಕ ಭವನ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕ, ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್, ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ಗೋಕರ್ಣ ಮಂಡಳ, ಗುರುಗಾಂವ್ ಕನ್ನಡ ಸಂಘ, ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ಮತ್ತು ಇನ್ನಿತರ ಸಂಘ ಸಂಸ್ಥೆಗಳ ಪರವಾಗಿ ಡಾ. ಸುಧಾ ಮೂರ್ತಿ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಅಭಿನಂದನೆ ಮತ್ತು ಇತರ ಸಂಘ ಸಂಸ್ಥೆಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಸುಧಾ ಮೂರ್ತಿ ಅವರು ವರ್ಕಿಂಗ್ ದಿನವಾದ ಇಂದು ನಾನು ಇಲ್ಲಿಗೆ ಬಂದಿರುವುದು ಅವೇಳೆಯಾಗಿದ್ದರೂ, ಬಂದಿರುವ ನೀವು ಇಷ್ಟೆಲ್ಲಾ ಜನ ದೆಹಲಿ ಕನ್ನಡಿಗರನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಬೇರಿನಿಂದ ದೂರವಾದರೂ ಆಗ ಬೇರಿನ ಬಗ್ಗೆ ಆಳವಾದ ಜ್ಞಾನ, ಪ್ರೀತಿ ಮತ್ತು ಮೋಹ ಉಳಿಯುತ್ತದೆ. ಹಾಗಾಗಿ ದೂರದ ಊರಿನಲ್ಲಿದ್ದಾಗ ನಾಡಿನ ಬಗ್ಗೆ, ಕನ್ನಡ ಭಾಷೆಯ ಮೇಲೆ ಬಹಳ ಅಭಿಮಾನ ಉಂಟಾಗುತ್ತದೆ. ಬೆಂಗಳೂರಿನಲ್ಲಿ ಕನ್ನಡದ ಬಗ್ಗೆ ಕಾಳಜಿ ಕಡಿಮೆಯಾಗುತ್ತಿದೆ ಆದರೆ ದೂರದ ದೆಹಲಿಯಲ್ಲಿ ನೀವೆಲ್ಲಾ ಸಂಘಕ್ಕೆ ಮಕ್ಕಳನ್ನು ಕರೆದುಕೊಂಡು ಬಂದು ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿರುವುದು

ಅಭಿನಂದನಾರ್ಹ ಹಾಗೂ ಶುಭಾಶಯಗಳು ಎಂದರು. ಇಲ್ಲಿನ ಕರ್ನಾಟಕ ಸಂಘದಲ್ಲಿ ಪ್ರತಿ ವಾರಾಂತ್ಯ ವರ್ಷವಿಡೀ ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ. ಬೆಂಗಳೂರಿನವರಾದ ನಿರುಪಮಾ ರಾಜೇಂದ್ರ ಎಂಬ ಸುಪ್ರಸಿದ್ಧ ನೃತ್ಯಗಾರ್ತಿಯ ಕಾರ್ಯಕ್ರಮವನ್ನು ನೀವು ಇಲ್ಲಿ ಏರ್ಪಡಿಸಬಹುದು ಅದಕ್ಕೆ ನಾನು ಪ್ರಾಯೋಜನೆ ಮಾಡುತ್ತೇನೆ ಎಂದರು.

ತಮ್ಮ ಜೀವನದಲ್ಲಿಯೂ ಎಷ್ಟೋ ಕಷ್ಟ ಬಂದಿದೆ, ಆದರೆ ಕಷ್ಟಗಳು ಬಂದಾಗ This too shall pass ಅಂದು ಕೊಳ್ಳುತ್ತೇನೆ. ಕಷ್ಟಗಳು ಚಲಿಸುವ ಮೋಡಗಳಿದ್ದಂತೆ ಬಂದು ಮರೆಯಾಗುತ್ತವೆ, ಅದೇ ರೀತಿ ಸುಖವು ಬಂದಾಗಲೂ ನಾನು ಅನ್ನು ಕೊಳ್ಳುತ್ತೇನೆ This too shall pass ಅಂತ. ಯಾವ ಕಷ್ಟಗಳೂ ನಿರಂತರವಲ್ಲ, ಯಾವ ಸುಖಗಳೂ ನಿರಂತರವಲ್ಲ, ಪರಿಸ್ಥಿತಿಗೆ ಅನುಗುಣವಾಗಿ ಜೀವನ ಮಾಡುವುದರಿಂದ, ಸಾಧನೆ ಮಾಡಬಹುದು. ಜೀವನವೆಂದರೆ ಸಮುದ್ರದ ತೆರೆಗಳಂತೆ. ಕಷ್ಟಗಳು ಬರುತ್ತಲೇ ಇರುತ್ತವೆ, ಹೋಗುತ್ತಿರುತ್ತವೆ, ಅಕ್ಕಮಹಾದೇವಿ ಹೇಳಿರುವಂತೆ ಸಮುದ್ರದ ಮೇಲೆ ಮನೆಯ ಮಾಡಿ ತೆರೆಗಳಿಗಂಜಿದೊಡೆಂತಯ್ಯಾ. ಜೀವನವೆಂದರೆ ಸಮುದ್ರವಿದ್ದಂತೆ ನಾವು ಸರ್ಫಿಂಗ್ ಕಲಿತು, ಅಲೆಯನ್ನು ಪಾರು ಮಾಡಿ ನಡೆಯಲು ಪ್ರಯತ್ನ ಮಾಡಬೇಕು, ಕಷ್ಟಗಳನ್ನು ಜಯಿಸುವ ಆಶಾಭಾವನೆ ಇಟ್ಟುಕೊಳ್ಳಬೇಕು, ಸುಖ ಬಂದಾಗ, ಯಶಸ್ಸು ಬಂದಾಗ ತಲೆಗೇರದೆಯೆ ಜೀವನ ಮಾಡುವುದು ಮುಖ್ಯ ಎಂದರು. ಮಹಿಳೆ ಸಾಧನೆ ಮಾಡಬೇಕಾದರೆ 60% ಅವಳ ಪ್ರಯತ್ನವಾದರೆ, ಉಳಿದ 40% ಪ್ರಯತ್ನಕ್ಕೆ ಮನೆಯವರ, ಕುಟುಂಬದವರ ಸಹಕಾರವಿರುತ್ತದೆ. ನನ್ನ ಯಶಸ್ಸಿನ ಹಿಂದೆ ಒಂದು ತಂಡವಿದೆ, ಹಾಗೆನೇ Behind every successful woman, there is an understanding man ಎಂದರು. ನನ್ನ ಜೀವನದಲ್ಲಿ ಎಲ್ಲಕ್ಕಿಂತ ನನಗೆ ಅಮೂಲ್ಯವಾದದ್ದು ವೇಳೆ. ಕಾಲವನ್ನು ಅತ್ಯಂತ ಅರ್ಥವಿತವಾಗಿ ನಾನು ಉಪಯೋಗ ಮಾಡುತ್ತೇನೆ. ಮದುವೆ, ಸಭೆ ಸಮಾರಂಭಗಳಿಗೆ, ಹುಟ್ಟು ಹಬ್ಬದ ಕಾರ್ಯಕ್ರಮಗಳಿಗೆ, ನಾನು ಭೇಟಿ ಮಾಡುವುದರ ಬದಲು ಅವರಿಗೆ ನಾನಿದ್ದ ಜಾಗದಿಂದಲೇ ಆಶೀರ್ವಾದ ಮಾಡುತ್ತೇನೆ ಎಂದು ಹೇಳಿದರು.

ನಂತರ ನಡೆದ ಪ್ರಶ್ನೋತ್ತರದಲ್ಲಿ ದೆಹಲಿ ಕನ್ನಡಿಗರು ಭಾಗಿಯಾಗಿ ಡಾ. ಸುಧಾ ಮೂರ್ತಿ ಅವರಿಂದ ಅನೇಕ ವಿಷಯಗಳನ್ನು ತಿಳಿದುಕೊಂಡು, ತಮ್ಮ ಪ್ರಶ್ನೆಗಳಿಗೆ ಸೂಕ್ತ ಉತ್ತರ ಪಡೆದರು. ಪ್ರಮುಖವಾಗಿ ಏರ್ ಕಮಾಡೇರ್ ಶ್ರೀ ಟಿ.ಎಂ. ಶ್ರೀನಾಥ, ಶ್ರೀ ಹೆಚ್. ಎನ್. ಅಶ್ವಥ್, ಶ್ರೀಮತಿ ಸರೋಜ ಮಾಧವ, ಶ್ರೀಮತಿ ಸವಿತಾ ಇನಾಮದಾರ್, ಶ್ರೀ ಎನ್.ಆರ್. ಶ್ರೀನಾಥ, ಶ್ರೀ ಶಾಂತಕುಮಾರ ನಿಂಬಾಳ್, ಶ್ರೀ ಕೆ.ಎಸ್. ಮೂರ್ತಿ, ಶ್ರೀಮತಿ ಪ್ರತಿಭಾ ಮಂಜುಗೌಡ, ಶ್ರೀ ಬಸವರಾಜ ಎಸ್. ಕಲ್ಲೂರು, ಶ್ರೀಮತಿ ಲಾವಣ್ಯ ಬಸವರಾಜು, ಶ್ರೀ ರಾಜಕುಮಾರ್, ಕು. ನಂದಿತಾ, ಕು. ಅನರ್ಘ್ಯ, ಕು. ಕೋಶಲ್, ಕು. ನೂತನ ಕೈಕಾಡೆ, ಕು. ಪ್ರೇರಣಾ ರಾವ್ ಮುಂತಾದವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಡಾ. ಸುಧಾ ಮೂರ್ತಿ ಅವರು ನೀಡಿ ದೆಹಲಿ ಕನ್ನಡಿಗರ ಮನಗೆದ್ದರು. ಅವರ ಮಾತುಗಳನ್ನು ಕೇಳಲು ಬಂದಿದ್ದವರು ಉತ್ತಮ ಸಲಹೆಗಳನ್ನು ಪಡೆದುಕೊಂಡರಲ್ಲದೇ ಅನೇಕರು ಅವರೊಂದಿಗೆ ಸೆಲ್ಫಿಯನ್ನು ತೆಗೆದುಕೊಂಡರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಶ್ರೀಮತಿ ಡಾ. ಸುಧಾ ಮೂರ್ತಿ ಅವರಿಗೆ ಮತ್ತು ಆಗಮಿಸಿದ್ದವರೆಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ■

*ಅಭಿಮತ ವರದಿ*

# ಶ್ರೀಮತಿ (ಡಾ.) ಸುಧಾ ಮೂರ್ತಿ ಮತ್ತು ಶ್ರೀಮತಿ ವಿಜಯಶ್ರೀ ಹಾಲಾಡಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ 2023ರ ಬಾಲ ಸಾಹಿತ್ಯ ಪುರಸ್ಕಾರ ಪ್ರದಾನ





ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರತಿ ವರ್ಷ ನೀಡುವ ಬಾಲ ಸಾಹಿತ್ಯ ಪುರಸ್ಕಾರವನ್ನು ಈ ವರ್ಷ ವಿವಿಧ ಭಾಷೆಗಳ ದೇಶದ 23 ಮಕ್ಕಳ ಸಾಹಿತಿ ಗಣ್ಯರಿಗೆ ನೀಡಿ ಗೌರವಿಸಿದೆ. ಇವರಲ್ಲಿ ಕನ್ನಡ ನಾಡಿನ ಹೆಮ್ಮೆಯ ಸಾಧಕಿ, ಲೇಖಕಿ, ಮಕ್ಕಳ ಸಾಹಿತಿ, ಇನ್ಫೋಸಿಸ್ ಫೌಂಡೇಶನ್‌ನ ಸಂಸ್ಥಾಪಕರು, ಮೂರ್ತಿ ಫೌಂಡೇಷನ್‌ನ ಅಧ್ಯಕ್ಷರೂ ಆದ ಶ್ರೀಮತಿ (ಡಾ.) ಸುಧಾ ಮೂರ್ತಿ ಅವರಿಗೆ ಇಂಗ್ಲೀಷ್ ಭಾಷೆಯಲ್ಲಿ ಅವರು ಬರೆದ Grandparents Bag of Stories ಕೃತಿಗೆ ಹಾಗೂ ಕನ್ನಡದ ಪ್ರಸಿದ್ಧ ಬರಹಗಾರ್ತಿ, ಮಕ್ಕಳ ಸಾಹಿತಿ ಶ್ರೀಮತಿ ವಿಜಯಶ್ರೀ ಹಾಲಾಡಿ ಅವರಿಗೆ ಮಕ್ಕಳಿಗಾಗಿ ಬರೆದ 'ಸೂರಕ್ಕಿ ಗೇಟ್' ಎಂಬ ಕಾದಂಬರಿಗೆ 2023 ರ ಬಾಲ ಸಾಹಿತ್ಯ ಪುರಸ್ಕಾರ ಲಭಿಸಿದೆ. ಇದು ಕನ್ನಡ ನಾಡಿನ ಎಲ್ಲಾ ಸಾಹಿತಿಗಳಿಗೆ, ಮಕ್ಕಳ ಪ್ರೇಮಿಗಳಿಗೆ ಹಾಗು ಸಮಸ್ತ ಕನ್ನಡಿಗರಿಗೆ ಸಿಕ್ಕಂತಹ ಗೌರವವಾಗಿದೆ.

09.11.2023ರಂದು ಸಂಜೆ ನವದೆಹಲಿಯ ತಾನ್ ಸೇನ್ ಮಾರ್ಗದಲ್ಲಿರುವ ತ್ರಿವೇಣಿ ಕಲಾ ಸಂಗಮ್‌ನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಶ್ರೀ ಮಾಧವ್ ಕೌಶಿಕ್ ಸಾಧಕರಿಗೆ ಈ ವರ್ಷದ ಬಾಲ ಸಾಹಿತ್ಯ ಪುರಸ್ಕಾರ ನೀಡಿ ಗೌರವಿಸಿದರು. ಮುಖ್ಯ ಅತಿಥಿಗಳಾಗಿ ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಶ್ರೀ ಹರೀಷ್ ತ್ರಿವೇದಿ ಆಗಮಿಸಿದ್ದರು. ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷೆ ಶ್ರೀಮತಿ ಕುಮುದ್ ಶರ್ಮ ಹಾಗು ಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸ ರಾವ್ ವೇದಿಕೆಯಲ್ಲಿದ್ದರು.

ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ 2023ರ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಭಾಜನರಾದ ಹೆಮ್ಮೆಯ ಕನ್ನಡತಿಯರಾದ ಡಾ. ಸುಧಾ ಮೂರ್ತಿ ಮತ್ತು ಶ್ರೀಮತಿ ವಿಜಯಶ್ರೀ ಹಾಲಾಡಿ ಮತ್ತು ಇತರ ಭಾಷೆಯ ಮಕ್ಕಳ ಸಾಹಿತಿಗಳಿಗೆ ಸಮಸ್ತ ನಾಡಿನ ಜನತೆಯ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಶ್ರೀ ಎನ್. ಆರ್. ಶ್ರೀನಾಥ, ಸಂಘದ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ, ಶ್ರೀ ಸಂತೊಷ ಜೆ, ಶ್ರೀ ರಮೇಶ್, ಶ್ರೀ ಚಂದ್ರಶೇಖರ ಎನ್.ಪಿ., ಶ್ರೀಮತಿ ಹೇಮಶ್ರೀ ಮುಂತಾದವರು ಭಾಗಿಯಾಗಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮ ಅಧಿಕಾರಿ ಶ್ರೀ ಎಲ್ ಸುರೇಶ್ ಕುಮಾರ್ ಎಲ್ಲರಿಗೂ ಆಹ್ವಾನ ನೀಡಿ ಕಾರ್ಯಕ್ರಮದ ಸಮನ್ವಯ ನಿರ್ವಹಿಸಿದ್ದರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ನಂತರ ಇಂಗ್ಲಿಷ್ ಭಾಷೆ ವಿಭಾಗದಲ್ಲಿ ಪ್ರಶಸ್ತಿ ಪಡೆದ ಡಾ. ಸುಧಾ ಮೂರ್ತಿ ಅವರು ದೆಹಲಿ ಕನ್ನಡಿಗರೊಂದಿಗೆ ತಮ್ಮ ಸಂತಸವನ್ನು ಹಂಚಿಕೊಂಡು, ಬೆಂಗಳೂರಿನತ್ತ ಪ್ರಯಾಣ ಬೆಳಸಿದರು.

ಅನಂತರ ಕನ್ನಡ ಭಾಷೆ ವಿಭಾಗದಲ್ಲಿ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ವಿಜಯಶ್ರೀ ಹಾಲಾಡಿ ಅವರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಬರಮಾಡಿಕೊಂಡು, ಸಂಘದ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು. ಈ ಅಭಿನಂದನಾ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು. ಕಾರ್ಯಕ್ರಮ ನಿರ್ವಹಿಸಿದ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿ, ಶ್ರೀಮತಿ ವಿಜಯಶ್ರೀ ಹಾಲಾಡಿ ಅವರ ಪರಿಚಯ ಮಾಡಿಕೊಟ್ಟರು.




ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀಮತಿ ವಿಜಯಶ್ರೀ ಹಾಲಾಡಿ ಅವರು ತಮ್ಮ ಶಿಕ್ಷಕಿಯಾಗಿ ವೃತ್ತಿ ಜೀವನ, ಸಾಹಿತ್ಯಿಕ ಪಯಣ, ಮಕ್ಕಳ ಪುಸ್ತಕಗಳನ್ನು ಬರೆಯಲು ಪ್ರೇರಣೆ, ನಿಜ ಜೀವನದ ನಿದರ್ಶನಗಳು ಹಾಗೂ ಪ್ರಕೃತಿಯೊಂದಿಗಿನ ಒಡನಾಟ ಮುಂತಾದ ವಿಷಯಗಳನ್ನು, ಹಾಗು ಬಾಲ ಸಾಹಿತ್ಯ ಪುರಸ್ಕಾರ ತಂದುಕೊಟ್ಟ ಮಕ್ಕಳ ಕಾದಂಬರಿ 'ಸೂರಕ್ಕಿ ಗೇಟ್' ಬಗ್ಗೆ ಮಾಹಿತಿ ಹಂಚಿಕೊಂಡು ತಮ್ಮನ್ನು ಸಂಘಕ್ಕೆ ಆಹ್ವಾನಿಸಿ ಅಭಿನಂದಿಸಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಅವರೊಂದಿಗೆ ನಡೆದ ಸಂವಾದದಲ್ಲಿ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಶ್ರೀ ಎನ್.ಆರ್. ಶ್ರೀನಾಥ, ದೆಹಲಿ ಕನ್ನಡ ಶಾಲೆಯಲ್ಲಿ ಕನ್ನಡ ಶಿಕ್ಷಕರಾದ ಶ್ರೀ ಅರವಿಂದ ಬಿಜ್ಜೈ, ಸಾಹಿತ್ಯ ಅಕಾಡೆಮಿಯ ಪ್ರೋಗ್ರಾಮ್ ಆಫೀಸರ್ ಶ್ರೀ ಎಲ್. ಸುರೇಶ್ ಕುಮಾರ್, ಸಂಘದ ಸದಸ್ಯರಾದ ಶ್ರೀ ರಾಮಚಂದ್ರ ಉಭಾಳೆ, ಶ್ರೀ ನರಸಿಂಹ ಮೂರ್ತಿ ಮುಂತಾದವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ, ಶ್ರೀ ಸಂತೋಷ ಜೆ., ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷ ಶ್ರೀ ಅರವಿಂದ ಬಿಜ್ಜೈ, ಕಾರ್ಯದರ್ಶಿ ಶ್ರೀಮತಿ ರತ್ನ, ಸಂಚಾಲಕ ಶ್ರೀ ನಾಗರಾಜ ಎಂ., ಸಂಘದ ಸದಸ್ಯರಾದ ಶ್ರೀ ರಮೇಶ್, ಶ್ರೀಮತಿ ಶೋಭಾ ನಾಗರಾಜ, ಶ್ರೀಮತಿ ರೂಪಶ್ರೀ ನರಸಿಂಹ ಮೂರ್ತಿ, ಶ್ರೀಮತಿ ಕನಕ ಸಂತೋಷ ಮುಂತಾದವರು ಭಾಗವಹಿಸಿದ್ದರು. ಶ್ರೀಮತಿ ವಿಜಯಲಕ್ಷ್ಮೀ ಅವರ ಪತಿ ಶ್ರೀ ಕುಶಾಲಪ್ಪ ಮತ್ತು ಮಗ ಶ್ರೀ ವಿನ್ಯಾಸ್ ಕೆ.ವಿ. ಈ ಸಂದರ್ಭ ಉಪಸ್ಥಿತರಿದ್ದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ, ಕನ್ನಡದ ಮಕ್ಕಳ ಸಾಹಿತಿಗಳಾದ ಡಾ. ಸುಧಾ ಮೂರ್ತಿ ಅವರಿಗೆ ಇಂಗ್ಲಿಷ್ ಭಾಷಾ ವಿಭಾಗದಲ್ಲಿ ಹಾಗೂ ಶ್ರೀಮತಿ ವಿಜಯಶ್ರೀ ಹಾಲಾಡಿಯವರಿಗೆ ಕನ್ನಡ ಭಾಷಾ ವಿಭಾಗದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬಾಲ ಸಾಹಿತ್ಯ ಪುರಸ್ಕಾರ 2023 ಸಿಕ್ಕಿರುವುದು ನಮ್ಮೆಲ್ಲರಿಗೆ ಹೆಮ್ಮೆ, ಗೌರವ ಮತ್ತು ಸಂತೋಷ ತಂದಿದೆ. ಪದ್ಮಭೂಷಣ ಮತ್ತು ಬಾಲ ಸಾಹಿತ್ಯ ಪ್ರಶಸ್ತಿ ಪುರಸ್ಕೃತೆ ಡಾ. ಸುಧಾ ಮೂರ್ತಿ ಅಮ್ಮನವರನ್ನು ಇಂದು ಸಂಘದಲ್ಲಿ ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ನಾವು ಅಭಿನಂದಿಸಿದ್ದೇವೆ. ಬಾಲ ಸಾಹಿತ್ಯ ಪ್ರಶಸ್ತಿಗೆ ಭಾಜನರಾದ ಶ್ರೀ ವಿಜಯಶ್ರೀ ಹಾಲಾಡಿ ಅವರನ್ನು ಇಲ್ಲಿ ಗೌರವಿಸಿ ಸನ್ಮಾನಿಸುತ್ತಿರುವುದು ನಮ್ಮ ಸೌಭಾಗ್ಯ. ಈ ಇಬ್ಬರೂ ಸಾಧಕರಿಗೆ, ಮಕ್ಕಳ ಸಾಹಿತಿಗಳಿಗೆ ದೆಹಲಿ ಕರ್ನಾಟಕ ಸಂಘದ ಹಾಗು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಅವರು ಶ್ರೀಮತಿ ವಿಜಯಶ್ರೀ ಹಾಲಾಡಿ ಹಾಗು ಅವರ ಕುಟುಂಬದವರಿಗೆ ಮತ್ತು ಆಗಮಿಸಿದ್ದ ಎಲ್ಲಾ ದೆಹಲಿ ಕನ್ನಡಿಗರಿಗೆ ವಂದನೆಗಳನ್ನು ಅರ್ಪಿಸಿದರು.■

***ಅಭಿಮತ ವರದಿ***

**ಪರಿಚಯ**

# ಶ್ರೀಮತಿ ವಿಜಯಶ್ರೀ ಹಾಲಾಡಿ



ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹಾಲಾಡಿ ಗ್ರಾಮದ ಮುದೂರಿ ಎಂಬ ಹಳ್ಳಿಯಲ್ಲಿ ಶ್ರೀ ಎಂ. ಬಾಬುರಾವ್ ಮತ್ತು ಶ್ರೀಮತಿ ರತ್ನಾವತಿ ದಂಪತಿಗಳ ಮಗಳಾಗಿ 28-4-1975 ರಂದು ವಿಜಯಶ್ರೀಯವರು ಜನಿಸಿದರು.

ಹಾಲಾಡಿ, ಮುದೂರಿಯಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದು, ಪ್ರೌಢಶಿಕ್ಷಣ ಮತ್ತು ಪಿಯುಸಿಯನ್ನು ಪದವಿಪೂರ್ವ ಕಾಲೇಜು ಶಂಕರನಾರಾಯಣದಲ್ಲಿ ಮುಗಿಸಿದರು. ನಂತರ ಬಸ್ರೂರಿನ ಶಾರದಾ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು, ಮಂಗಳೂರು ವಿ.ವಿ. ಕೊಣಾಜೆಯ ಮಂಗಳಗಂಗೋತ್ರಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, ಮಂಗಳೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಿಂದ ಪ್ರಥಮ ರ‍್ಯಾಂಕ್ ಮತ್ತು ಟಿಎಂಎ ಪೈ ಚಿನ್ನದ ಪದಕದೊಂದಿಗೆ ಬಿ.ಇಡಿ ಪದವಿಯನ್ನು ಪಡೆದಿದ್ದಾರೆ. ಹೊಳೆನರಸೀಪುರ, ಹರಿಹರಪುರ ಮತ್ತು ಮೂಡುಬಿದಿರೆಯ ನೀರ್ಕೆರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕಿಯಾಗಿ ಹದಿನೈದು ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಅಪಾರ ಕೃಷಿ ಮಾಡಿರುವ ಇವರ ಒಂಬತ್ತು ಪುಸ್ತಕಗಳು ಇದುವರೆಗೆ ಪ್ರಕಟವಾಗಿವೆ. ಅವುಗಳಲ್ಲಿ ಆರು ಮಕ್ಕಳಿಗಾಗಿ ಬರೆದ ಕೃತಿಗಳು, ಉಳಿದ ಮೂರು ಪ್ರೌಢ ಸಾಹಿತ್ಯದ್ದು.

**ಮಕ್ಕಳಿಗಾಗಿ ಬರೆದ ಪುಸ್ತಕಗಳು :** 1. ಓತಿಕ್ಯಾತ ತಲೆಕುಣ್ಣಿ–ಮಕ್ಕಳ ಕವಿತೆಗಳು 2012, 2. ಸೂರಕ್ಕಿ ಗೇಟ್–ಮಕ್ಕಳ ಕಾದಂಬರಿ 2017 (ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪುರಸ್ಕಾರ 2023 ಪಡೆದ ಕೃತಿ), 3. ಜಂಬಿಕೊಳ್ಳಿ ಮತ್ತು ಪುಟ್ಟ ವಿಜಿ–ಮಕ್ಕಳಿಗಾಗಿ ಅನುಭವ ಕಥನ 2016, 4. ಪಪ್ಪುನಾಯಿಯ ಪೀಪಿ– ಮಕ್ಕಳ ಕವಿತೆಗಳು (ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ಪಡೆದ ಕೃತಿ) 2015, 5. ಕಾಡಂಚಿನ ಊರಿನಲ್ಲಿ – ಮಕ್ಕಳಿಗಾಗಿ ಅನುಭವ ಕಥನ 2021, 6. ಪಟ್ಟಟೆಕಾಯಿ ಚಟ್ಟಟ– ಮಕ್ಕಳ ಕವಿತೆಗಳು 2022.

ಬೀಜ ಹಸಿರಾಗುವ ಗಳಿಗೆ (ಕವಿತೆಗಳು), ಅಲೆಮಾರಿ ಇರುಳು (ಕಿರು ಕವಿತೆಗಳು) ಮತ್ತು ಸಾಕು ಬೆಳಕಿನ ಮಾತು (ಕವಿತೆಗಳು) ಇವಿಷ್ಟು ಪ್ರಕಟಿತ ಮೂರು ಪ್ರೌಢ ಸಾಹಿತ್ಯ ಪುಸ್ತಕಗಳು. ಕಣ್ಣ ಕಾಡಿನ ಹಾಡು (ಪ್ರಬಂಧಗಳು) ಹಾಗು ಕತ್ತಲೆಗೆ ಎಷ್ಟೊಂದು ಬಣ್ಣ(ಕವಿತೆಗಳು) ಪ್ರಕಟಣೆಯ ಹಾದಿಯಲ್ಲಿರುವ ಪ್ರೌಢ ಸಾಹಿತ್ಯದ ಕೃತಿಗಳು.

ಇವರು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಮುಂಬಯಿಯ ಸುಶೀಲಾ ಶೆಟ್ಟಿ ಸ್ಮಾರಕ ಕಾವ್ಯ ಪ್ರಶಸ್ತಿ, ಮಕ್ಕಳ ಕವಿತೆಗಳಿಗೆ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಜಿ.ಬಿ. ಹೊಂಬಳ ಮಕ್ಕಳ ಕೃತಿಯ ಪುರಸ್ಕಾರ, ಡಿ'ಸೋಜ–ಎಚ್ಚೆಸ್ವಿ ಪುಟಾಣಿ ಸಾಹಿತ್ಯ ಪುರಸ್ಕಾರ, ಕಸಾಪ ಶಾರದಾರಾವ್ ದತ್ತಿನಿಧಿ ಪ್ರಶಸ್ತಿ ಮುಂತಾದುವು ಇವರಿಗೆ ಸಂದಿವೆ.

ಇವರು ರಚಿಸಿದ ಮಕ್ಕಳ ಕಾದಂಬರಿ 'ಸೂರಕ್ಕಿ ಗೇಟ್' ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯು ನವದೆಹಲಿಯಲ್ಲಿ ನವೆಂಬರ್ 9, 2023 ರಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಶ್ರೀಮತಿ ವಿಜಯಶ್ರೀ ಹಾಲಾಡಿ ಅವರಿಗೆ ಕನ್ನಡ ಭಾಷಾ ವಿಭಾಗದಲ್ಲಿ 'ಬಾಲ ಸಾಹಿತ್ಯ ಪುರಸ್ಕಾರ'ವನ್ನು ನೀಡಿ ಗೌರವಿಸಿದೆ.

ಶ್ರೀಮತಿ ವಿಜಯಶ್ರೀ ಹಾಲಾಡಿ ಅವರು ಈ ಹಿಂದೆ ಬರೆದ ಮೂರು ಮಕ್ಕಳ ಕವಿತೆಗಳು ಪಠ್ಯಗಳಾಗಿವೆ. ಸದ್ಯ ಆರನೇ ತರಗತಿಯ ಪಠ್ಯಪುಸ್ತಕದಲ್ಲಿ 'ಕಾಡಂಚಿನ ಊರಿನಲ್ಲಿ' ಮಕ್ಕಳ ಕೃತಿಯ ಕಥನವೊಂದು ಪ್ರಕಟವಾಗಿದೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಇವರ ಹಲವಾರು ಬರಹಗಳು ನಿರಂತರವಾಗಿ ಪ್ರಕಟವಾಗಿವೆ.

ಪರಿಸರ ಮತ್ತು ಸಾಹಿತ್ಯ ಇವರ ಪ್ರಮುಖ ಆಸಕ್ತಿಯ ಕ್ಷೇತ್ರಗಳಾದರೆ, ಸಂಗೀತ ಮತ್ತು ಜನಪದವೂ ಇವರಿಗೆ ಆಸಕ್ತಿ ಇರುವ ಇತರೆ ಕ್ಷೇತ್ರಗಳು.ಮಕ್ಕಳೊಂದಿಗೆ ಸಂವಾದ, ಮಕ್ಕಳ ಒಡನಾಟ ಮತ್ತು ಅವರಿಗಾಗಿ ಬರೆಯುವುದು ಇವರಿಗೆ ಇಷ್ಟವಾದ ಹವ್ಯಾಸಗಳು. ಇವರು ಒಬ್ಬ ನುರಿತ ರೇಖಾಚಿತ್ರ ಕಲಾವಿದೆಯೂ ಹೌದು.

ಬಹುಮುಖ ಪ್ರತಿಭೆಯುಳ್ಳ ಕನ್ನಡ ಭಾಷಾ ಶಿಕ್ಷಕಿ, ಪ್ರತಿಭಾವಂತ ಮಕ್ಕಳ ಸಾಹಿತಿ, ಬಾಲ ಸಾಹಿತ್ಯ ಮತ್ತು ಪ್ರೌಢ ಸಾಹಿತ್ಯದಲ್ಲಿ ಗಣನೀಯ ಸಾಧನೆ ಮಾಡಿರುವ ಹೆಮ್ಮೆಯ ಕನ್ನಡತಿ ಶ್ರೀಮತಿ ವಿಜಯಶ್ರೀ ಹಾಲಾಡಿ ಅವರಿಗೆ ಕನ್ನಡ ಭಾಷಾ ವಿಭಾಗದಲ್ಲಿ 2023 ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ ಸಿಕ್ಕಿರುವುದು ಎಲ್ಲಾ ಕನ್ನಡಿಗರಿಗೂ ಹೆಮ್ಮೆಯ ವಿಷಯವಾಗಿದೆ. **ಕರ್ನಾಟಕದ ಏಳು ಕೋಟಿ ಜನತೆಯ ಪರವಾಗಿ ಹಾಗು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮತವು ಶ್ರೀಮತಿ ವಿಜಯಶ್ರೀ ಹಾಲಾಡಿ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.**

# ಶ್ರೀ ನಿಡ್ಯಮಲೆ ಅಪ್ಪಯ್ಯ ಮಾಧವ

**ತಿಂಗಳ ವ್ಯಕ್ತಿ**



ಇಂಗ್ಲಿಷ್ ಪದಗಳ ಚಿಕ್ಕದೊಂದು ಶಬ್ದಕೋಶವನ್ನು ತಮ್ಮ ಉಸಿರಲ್ಲಿ ಹಿಡಿದಿಟ್ಟು, ಆತ್ಮೀಯರ ಜೊತೆಗಿನ ಸಂಭಾಷಣೆಯಲ್ಲಿ ತುಟಿಯಂಚಿನಲ್ಲಿ ನಗುತ್ತ ಒಂದೇ ಧ್ವನಿ ನೀಡುವ ವಿಭಿನ್ನ ಪದಗಳನ್ನು ಬಳಸಿ, ಮೆಲುದನಿಯಲ್ಲಿ ಗಮನಾಕರ್ಷಿಸುವ ಅಪರೂಪದ ವ್ಯಕ್ತಿ–ನಿಡ್ಯಮಲೆ ಅಪ್ಪಯ್ಯ ಮಾಧವ. ದೆಹಲಿ ಕನ್ನಡಿಗರ ಎನ್.ಎ. ಮಾಧವ. ಕಳೆದ ಸುಮಾರು 35 ವರ್ಷಗಳಲ್ಲಿ ಆಗೊಮ್ಮೆ ಈಗೊಮ್ಮೆ ಸಭೆ–ಸಮಾರಂಭಗಳಲ್ಲಿ, ಸಮಾಲೋಚನಾ ಸಭೆಗಳಲ್ಲಿ ಭೇಟಿ ಆಗುತ್ತಿದ್ದ ಮಾಧವ ಅವರ ಸಜ್ಜನಿಕೆ, ಪ್ರತಿಭೆ, ಸಮಾಜಗುಣ, ಹಿರಿತನ ಅವರ ಮೇಲೆ ಅಪಾರ ಗೌರವ ಮೂಡಿಸಿದೆ. ದಶಕಗಳ ಹಿಂದಿನಿಂದಲೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹೋರಾಟ ಕುರಿತಾದ ಚಿಂತನೆಗಳಿರಬಹುದು, ದೆಹಲಿ ಕರ್ನಾಟಕ ಸಂಘದ ಚುನಾವಣೆ ಅಥವಾ ಇನ್ನಿತರ ಆಯೋಜನೆಗಳ ಗಹನ ವಿಚಾರಗಳ ಕುರಿತಾದ ಖಾಸಗಿ ಚರ್ಚೆಗಳಿರಬಹುದು, ಅಂದಿನ ಅಧ್ಯಕ್ಷರಾದ ಶ್ರೀ ಕೆ.ಆರ್. ನಾಗರಾಜರವರು, ಮಾಧವ ಅವರನ್ನು ಕರೆಯದೇ ಇರುತ್ತಿರಲಿಲ್ಲ. ನಾಗರಾಜರವರ ವಿಷಯ ಮಂಡನೆಯಲ್ಲಿ ತರ್ಕಬದ್ಧ ವ್ಯಕ್ತಿಗಳ ಪ್ರಶ್ನೆಗಳಿಗೆ ಉತ್ತರ ಅಡಕವಾಗಿ ಇರುತ್ತಿತ್ತು. ಆದ್ದರಿಂದ ಈಗಿನ ಕಾಲದಂತೆ ಹೆಚ್ಚಿನ ಚರ್ಚೆಗಳು ಇರುತ್ತಿರಲಿಲ್ಲ. ಹಿರಿಯರಾದ ಗೋಪಾಲ ಶಾಸ್ತ್ರಿಗಳು, ಐ. ರಾಮಮೋಹನ ರಾವ್, ಕುಮಟಾಕರ್, ಎಸ್.ಜಿ. ಹೆಗಡೆ ಮುಂತಾದ ನಾಲ್ಕಾರು ಮಂದಿ ಹಿರಿಯರು ಮಂಡಿಸಿದ ವಿಚಾರಗಳಿಗೆ ಮೌನ ಸಮ್ಮತಿ ನೀಡಿ ಸಂಘದ ಬೆಳವಣಿಗೆಗೆ ಸದ್ದಿಲ್ಲದೆ ಕೆಲಸ ಮಾಡುತ್ತಿದ್ದ ಕೆಲವೇ ಮಂದಿಗಳಲ್ಲಿ ಶ್ರೀ ಎನ್.ಎ. ಮಾಧವ ಒಬ್ಬರು.

ಬಡತನದ ಕಷ್ಟ–ಸಂಕಷ್ಟಗಳನ್ನು ಅರಿತವರು, ಹಿರಿ ಮನೆತನದ ಹಿರಿತನವನ್ನು ಉಳಿಸಿಕೊಂಡವರು, ಹಾಗಾಗಿಯೇ ಎಲ್ಲರಿಗೂ ಬೇಕಾದವರು. ಸಮಾಜ ಮುಖಿ ಚಿಂತನೆ ಪ್ರಾಯಶಃ ಅವರ ಹುಟ್ಟೂರಾದ ತಲಕಾವೇರಿ ಭಾಗಮಂಡಲದ ಪರಿಸರ ತಂದಿತ್ತೋ, ಕರ್ನಾಟಕ ಎನ್ಐಟಿ (ಹಿಂದಿನ Karnataka Regional Engineering College) ನಿಂದ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದ ಸುರತ್ಕಲ್ಲಿನ ಪರಿಸರ ತಂದಿತ್ತೋ, ಅಥವಾ ಆಗಿನ ಕಾಲದಲ್ಲೇ ಮೆರೈನ್ ಇಂಜಿನಿಯರಿಂಗ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದು ದಶಕಗಳ ಕಾಲ ದೇಶದ ಸುಪ್ರಸಿದ್ಧ ಕಂಪೆನಿ ಇಂಜಿನಿಯರ್ಸ್ ಇಂಡಿಯಾ ಲಿಮಿಟೆಡ್‌ನ ಕೆಲಸದ ಅನುಭವದಿಂದ ಬಂದಿತ್ತೋ ಅರಿಯೆ. ಆದರೆ ಮಾಡುವ ಪ್ರತಿಯೊಂದು ಕೆಲಸವನ್ನೂ ಸಹ ಅಚ್ಚುಕಟ್ಟಾಗಿ ಮಾಡುವುದು ಅವರ ಗುಣ, ತಮ್ಮ ಸಾಧನೆಗಳ ಬಗ್ಗೆ ಎಲ್ಲೂ ಹೇಳಿಕೊಳ್ಳದೆ, ತೋರ್ಪಡಿಸಿಕೊಳ್ಳದೆ, ತಮ್ಮ ಇತಿ–ಮಿತಿಯೊಳಗೆ ಕೆಲಸ ಮಾಡುವ ಇವರಿಂದ ನೋಡಿ ಕಲಿಯಬೇಕಾದ ವಿಷಯಗಳು ಅಪಾರವಾಗಿವೆ.

ದೆಹಲಿಯ ಒಕ್ಕಲಿಗ ಗೌಡ ಸಮಾಜದ ಸ್ಥಾಪನೆ, ಕೃಷಿಕ್ ಫೌಂಡೇಶನ್‌ನ ಚಟುವಟಿಕೆ, ಇವೆಲ್ಲವುಗಳಿಗಿಂತ ಹೆಚ್ಚಾಗಿ ದಾಖಲಿಸಲೇ ಬೇಕಾದ ಅಂಶ ಎಂದರೆ, ದೆಹಲಿ ಕರ್ನಾಟಕ ಸಂಘದ ಪ್ರಸ್ತುತ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಸಮಯದಲ್ಲಿ ನಿರ್ಮಾಣ ಸಮಿತಿಯ ಸಂಚಾಲಕರಾಗಿ, ದಿನ ದಿನದ ಕಾಮಗಾರಿ ಪ್ರಗತಿ, ಗುಣಮಟ್ಟ, ಕಾಂಟ್ರಾಕ್ಟರ್ ಸಲ್ಲಿಸಿದ, ಪರಿಶೀಲಿಸಲಾದ ಬಿಲ್‌ಗಳ ಮರುಪರಿಶೀಲನೆ ಮಾಡಿ, ಅಂತಿಮವಾಗಿ ಪಾವತಿಗೆ ಅನುಮೋದನೆ ನೀಡುತ್ತಿದ್ದರು. ಇಂದಿನ ದಿನಗಳಲ್ಲಿ ಆ ರೀತಿ ಕೆಲಸ ಮಾಡುವುದು ಕಷ್ಟ ಸಾಧ್ಯ. ಆದರೆ ಮಾಧವ ಅವರು ಅದನ್ನು ಸಲೀಸಾಗಿಸಿದ್ದಾರೆ. ಅದಕ್ಕಾಗಿ ಅವರು ನೀಡಿದ ಸಮಯ ಒಂದೆರಡು ದಿನಗಳಲ್ಲ. ವಾರಕ್ಕೆರಡು ಬಾರಿ ಆದರೂ ಬಂದು ಎಲ್ಲಾ ಕಾಮಗಾರಿಗಳನ್ನು ವೀಕ್ಷಿಸುತ್ತಿದ್ದರು. ಹಾಗಾಗಿ ಅಂದು ಪ್ರಧಾನ ಕಾರ್ಯದರ್ಶಿಯಾಗಿ, ನನ್ನ ಕೆಲಸ ತುಂಬಾ ಸುಲಭವಾಗಿತ್ತು. ಶ್ರೀ ಉದಯ ಭಟ್, ಶ್ರೀ ಎಂ.ಸಿ. ವೆಂಕಟೇಶ್, ಶ್ರೀ ಸಿ.ಆರ್. ವೆಂಕಟೇಶ್, ಶ್ರೀ ಎಸ್.ಜಿ. ಹೆಗಡೆ ಇವರೆಲ್ಲ ಜೊತೆ ಸೇರಿ ಸಂಘದ ಐತಿಹಾಸಿಕವಾದ ಈ ಕೆಲಸವನ್ನು ಸುಲಭಗೊಳಿಸಿದ್ದು ಮಾತ್ರವಲ್ಲ, ಅದನ್ನು ಸುಸೂತ್ರವಾಗಿಸಿದ ಪ್ರಮುಖರು ಶ್ರೀ ಮಾಧವ ಅವರು, ನಂತರದ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ತಮ್ಮ ಕಂಪನಿಯಿಂದ ನಿವೃತ್ತಿಹೊಂದಿದರೂ, ಸದಾ ಕೆಲಸ ಮಾಡುವ ಅವರ ಪ್ರವೃತ್ತಿಯನ್ನು, ದೇಶದ ಹತ್ತಾರು ಪ್ರತಿಷ್ಠಿತ ಸಂಸ್ಥೆಗಳು ಬಳಸಿಕೊಂಡಿವೆ. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆಗಳನ್ನು ದಾಖಲಿಸುತ್ತ ಹೋದರೆ ಬಹುದೊಡ್ಡ ಪುಸ್ತಕವಾದೀತು. 78 ವರ್ಷ ವಯಸ್ಸಾದರೂ, ಸಮುದ್ರ ತೀರದ ತೈಲೋದ್ಯಮ ಇಂಜಿನಿಯರಿಂಗ್ ಕ್ಷೇತ್ರಕ್ಕೆ ಅವರ ಕೊಡುಗೆ ಈಗಲೂ ಇದೆ. ದೆಹಲಿ ಕರ್ನಾಟಕ ಸಂಘದಿಂದ ವಿಶಿಷ್ಟ ಕನ್ನಡಿಗರೆಂದು ಗೌರವಿಸಲ್ಪಟ್ಟ ಅತಿ ವಿಶಿಷ್ಟ ಕನ್ನಡಿಗ ಶ್ರೀ ಎನ್ ಎ ಮಾಧವ ಅವರು.

ಇವರ ಧರ್ಮಪತ್ನಿ ಶ್ರೀಮತಿ ಸರೋಜ ಮಾಧವ ಅವರು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ಪ್ರಸ್ತುತ ಅಧ್ಯಕ್ಷರಾಗಿ ದೆಹಲಿ ಕನ್ನಡಿಗರ ವಲಯದಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಇವರ ಮಗಳು ಶ್ರೀಮತಿ ಎನ್.ಎಂ. ಸೌಮ್ಯ ಅವರು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದ್ದಾರೆ. ಮಗ ಶ್ರೀ ಎನ್.ಎಂ. ಸನ್ಮಾನ್ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಸೊಸೆ ಶ್ರೀಮತಿ ತೃಷಾಲ ಸನ್ಮಾನ್ ಪದವೀಧರೆ. ಮೊಮ್ಮಕ್ಕಳಾದ ಕು. ಕೋಶಲ್ ಮತ್ತು ಕು. ಅನರ್ಘ್ಯ ಎಳೆಯ ವಯಸ್ಸಿನಲ್ಲಿಯೇ ಅಪ್ರತಿಮ ಪ್ರತಿಭೆ ಬಿಂಬಿಸುತ್ತಿರುವ ಕಣ್ಮಣಿಗಳು.'ಕಾವೇರಿ ನದಿಯು ತಲಕಾವೇರಿಯೊಳ್ ಜನಿಸಿ ಪಾವನೆ ಎಂದೆನಿಸುವಳು ಪಾಪವನು ಹರಿಸಿ...' ದಕ್ಷಿಣದ ಕರ್ನಾಟಕದಿಂದ ಉತ್ತರ ಭಾರತಕ್ಕೆ ಹರಿದ ಈ ನಿಡ್ಯಮಲೆ ಅಪ್ಪಯ್ಯ ಮಾಧವರ ಜ್ಞಾನ ಸಿಂಚನ ಸಂಘಕ್ಕೂ ಆಗಿರುವುದು ದಾಖಲಿಸಬೇಕಾದ ಅಂಶ.■



*ಸರವು ಕೃಷ್ಣ ಭಟ್*



# "ದೊಡ್ಡ ಕರುಳಿನ ಕ್ಯಾನ್ಸರ್: ಒಂದು ಕಿರುನೋಟ"

ಕೊಲೊನ್ ಕ್ಯಾನ್ಸರ್ (ದೊಡ್ಡ ಕರುಳಿನ ಕ್ಯಾನ್ಸರ್) ಇಂದು ವಿಶ್ವದಾದ್ಯಂತ ಕಾಣಸಿಗುವ ಸಾಮಾನ್ಯ ಕ್ಯಾನ್ಸರ್‌ಗಳಲ್ಲೊಂದು. ಒಟ್ಟಾರೆಯಾಗಿ ಕ್ಯಾನ್ಸರ್ ಸಂಬಂಧಿ ಸಾವುಗಳಲ್ಲಾಗುವ ಅಂಕಿಅಂಶಗಳನ್ನು ಪರಿಗಣಿಸುವುದಾದರೆ, ಮಾರಣಾಂತಿಕ ಕ್ಯಾನ್ಸರ್‌ಗಳ ಪಟ್ಟಿಯಲ್ಲಿ ಕೊಲೊನ್ ಕ್ಯಾನ್ಸರ್ ಮೂರನೆಯ ಸ್ಥಾನದಲ್ಲಿ ಬಂದು ನಿಲ್ಲುತ್ತದೆ. ಜಗತ್ತಿನಾದ್ಯಂತ ಕೊಲೊರೆಕ್ಟಲ್ (colorectal) ಕ್ಯಾನ್ಸರ್ ಸಂಖ್ಯೆಯು ಇಳಿಮುಖವಾದಂತಿದ್ದರೂ, ಯುವ ವಯಸ್ಕರಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಂಡುಬರುತ್ತಿರುವ ಕೊಲೊನ್ ಕ್ಯಾನ್ಸರ್ ನಿಜಕ್ಕೂ ಒಂದು ಚಿಂತಾರ್ಹ ಸಂಗತಿಯಾಗಿದೆ.

**ಹಿನ್ನೆಲೆ :** ಜೀರ್ಣಾಂಗವ್ಯೂಹದ ಕೊನೆಯ ಭಾಗವಾಗಿರುವ ದೊಡ್ಡ ಕರುಳಿನಲ್ಲಿ ಉಂಟಾಗುವ ಕ್ಯಾನ್ಸರ್ ಅನ್ನು ಕೊಲೊನ್ ಕ್ಯಾನ್ಸರ್ ಎನ್ನಲಾಗುತ್ತದೆ. ಒಟ್ಟಾರೆಯಾಗಿ ಇದು ಯಾರಿಗೂ ಬರಬಹುದಾದರೂ, ಸಾಮಾನ್ಯವಾಗಿ ವಯಸ್ಸಾದವರಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು. ಆರಂಭಿಕ ಹಂತದಲ್ಲಿ ಸಣ್ಣ ಕ್ಯಾನ್ಸರ್ ರಹಿತ ನಿರುಪದ್ರವಿ ಪಾಲಿಪ್ (polyp) ಗಳ ರೂಪದಲ್ಲಿ, ದೊಡ್ಡ ಕರುಳಿನ ಒಳಭಾಗದಲ್ಲಿ ಹುಟ್ಟಿಕೊಳ್ಳುವ ಈ ಸ್ಥಿತಿಯು, ಕಾಲಾಂತರದಲ್ಲಿ ದೊಡ್ಡ ಕರುಳಿನ ಕ್ಯಾನ್ಸರ್ ರೂಪವನ್ನು ಪಡೆದುಕೊಳ್ಳುವ ಸಾಧ್ಯತೆಗಳಿರುತ್ತವೆ.


ಹಾಗೆ ನೋಡಿದರೆ ಹಲವರಲ್ಲಿ ಚಿಕ್ಕ ಗಾತ್ರದ ಪಾಲಿಪ್‌ಗಳು ಕೆಲವೇ ಕೆಲವು ರೋಗಲಕ್ಷಣಗಳನ್ನು ಮಾತ್ರ ಮಂದವಾಗಿ ತೋರ್ಪಡಿಸುತ್ತಿರಬಹುದು. ಈ ಕಾರಣಕ್ಕಾಗಿಯೇ ಚಿಕ್ಕ ಪಾಲಿಪ್ ಗಳು ದೊಡ್ಡ ಕರುಳಿನ ಕ್ಯಾನ್ಸರ್‌ಗೆ ರೂಪಾಂತರವಾಗದಿರುವಂತೆ ಜಾಗರೂಕರಾಗಿರಲು, ನಿಯಮಿತ ಪರೀಕ್ಷೆಗಳನ್ನು ನಡೆಸುತ್ತಿರಬೇಕು ಎಂದು ಸಾಮಾನ್ಯವಾಗಿ ವೈದ್ಯರು ಸಲಹೆ ನೀಡುತ್ತಾರೆ.

**ಲಕ್ಷಣಗಳು :** ಹಲವು ಸಂದರ್ಭಗಳಲ್ಲಿ ರೋಗಿಗಳ ನಿರ್ಲಕ್ಷ್ಯದಿಂದ ಅಥವಾ ರೋಗಲಕ್ಷಣಗಳನ್ನು ತಪ್ಪಾಗಿ ಅರ್ಥೈಸಿಕೊಂಡು ರೋಗಪತ್ತೆಯಲ್ಲಿ ಎಡವಿ ಬಿಡುವ ಪ್ರಾಥಮಿಕ ವೈದ್ಯರಿಂದಾಗಿ ಕೊಲೊನ್ ಕ್ಯಾನ್ಸರ್ ಇರುವಿಕೆಯು ಬಹಳ ತಡವಾಗಿ ಪತ್ತೆಯಾಗುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ಯಾವುದೇ ರೋಗಲಕ್ಷಣಗಳು ಕಂಡುಬಂದಲ್ಲಿ ಅದು ಕೊಲೊನ್ ಕ್ಯಾನ್ಸರ್ ಅಪಾಯದತ್ತ ಸುಳಿವು ನೀಡುತ್ತಿದೆ ಎಂಬುದನ್ನು ಮನಗಂಡು ಶೀಘ್ರವಾಗಿ ಚಿಕಿತ್ಸೆಯನ್ನು ಪಡೆಯುವುದು ಉತ್ತಮ.

- ಮಲಬದ್ಧತೆ ಮತ್ತು ಅತಿಸಾರ ಸೇರಿದಂತೆ ದೈನಂದಿನ ಮಲವಿಸರ್ಜನೆಯ ಅಭ್ಯಾಸದಲ್ಲಿ ಕಂಡುಬರುವ ಹಠಾತ್ ಬದಲಾವಣೆಗಳು ಅಥವಾ ದೀರ್ಘಾವಧಿ ಉಳಿಯುವ ಬದಲಾವಣೆಗಳು.
- ರಕ್ತಸಹಿತವಾದ ಮಲ (ಹೆಮಟೋಚೇಝಿಯಾ)
- ಕಪ್ಪು ಬಣ್ಣಕ್ಕೆ ತಿರುಗಿರುವ ಮಲ (ಮಲೆನಾ).
- ನಿರಂತರವಾಗಿ ಹೊಟ್ಟೆಯಲ್ಲುಂಟಾಗುವ ಅಸ್ವಸ್ಥತೆ (ಹೊಟ್ಟೆ ಉಬ್ಬರಿಕೆ, ಗ್ಯಾಸ್, ನೋವು ಇತ್ಯಾದಿ).
- ಮಲವಿಸರ್ಜನೆಯನ್ನು ಮಾಡಿದ ನಂತರವೂ ಅಪೂರ್ಣವಾಗಿ ವಿಸರ್ಜನೆಯಾದ ಭಾವನೆ.
- ರಕ್ತಹೀನತೆ
- ವಿಪರೀತ ದಣಿವು
- ಅಕಾರಣ ದೇಹತೂಕದಲ್ಲಿ ಇಳಿತ
- ಕರುಳಿನ ಕಾರ್ಯಾಚರಣೆಗಳಲ್ಲಿ ಅಡಚಣೆಯುಂಟಾದ ಪರಿಣಾಮವಾಗಿ ಹೊಟ್ಟೆ ಉಬ್ಬರಿಕೆ.

ಮೇಲೆ ಪಟ್ಟಿ ಮಾಡಿರುವ ಬಹಳಷ್ಟು ಲಕ್ಷಣಗಳು ಕೊಲೊನ್ ಕ್ಯಾನ್ಸರ್ ಇರುವ ರೋಗಿಗಳಲ್ಲಿ ಆರಂಭಿಕ ಹಂತದಲ್ಲಿ ಕಾಣದಿರಬಹುದು. ಅಸಲಿಗೆ



ಲೇಖಕರು : ಡಾ. ಬಿ. ನಿರಂಜನ್ ನಾಯ್ಕ್
ಎಂಬಿಬಿಎಸ್, ಎಂಎಸ್ (ಜನರಲ್ ಸರ್ಜರಿ)
ಸರ್ಜಿಕಲ್ ಒಂಕಾಲಜಿ (BRAIRCH, AIIMS)
ಡೈರೆಕ್ಟರ್-ಸರ್ಜಿಕಲ್ ಒಂಕಾಲಜಿ ವಿಭಾಗ ಹಾಗು ರೋಬೋಟಿಕ್ ಸರ್ಜನ್, ಫೋರ್ಟಿಸ್ ಮೆಮೋರಿಯಲ್ ರಿಸರ್ಚ್ ಇನ್ಸ್ಟಿಟ್ಯೂಟ್ (FMRI),
ಗುರುಗ್ರಾಮ, ಹರಿಯಾಣ
(ಮೊ.) 9810203273
ಇಮೇಲ್ : bniranjan29@gmail.com

**Risk Factors for Colorectal Cancer**

| Nonmodifiable Risk Factors | Modifiable Risk Factors |
|---|---|
| Older than age 50 years | Smoking |
| Male gender | Excessive alcohol consumption |
| Ethnicity | High consumption of red meats |
| Family history of colorectal cancer or colorectal polyps | High consumption of processed foods |
| History of inflammatory bowel disease | Low intake of fruits and vegetables |
| Certain genetic syndromes | Body fat and obesity |
| Type 2 diabetes | Physical inactivity |

ಕ್ಯಾನ್ಸರ್‌ನ ಗಾತ್ರ ಮತ್ತು ದೊಡ್ಡ ಕರುಳಿನ ಯಾವ ಭಾಗದಲ್ಲಿ ಇದು ಹುಟ್ಟಿಕೊಂಡಿದೆ ಎಂಬುದರ ಮೇಲೆ ರೋಗಲಕ್ಷಣಗಳ ತೀವ್ರತೆಯು ಬದಲಾಗುತ್ತದೆ. ಕರುಳಿನ ಲೂಮೆನ್ ಎಂದು ಕರೆಯಲಾಗುವ ಭಾಗವು ಸಾಕಷ್ಟು ದೊಡ್ಡದಾಗಿರುವುದರಿಂದ, ಪಚನಕ್ರಿಯೆಯಲ್ಲುಂಟಾಗುವ ಅಡಚಣೆಗಳು ಗಮನಾರ್ಹ ರೀತಿಯಲ್ಲಿ ಕಾಣಿಸಿಕೊಳ್ಳಲು ತಡವಾಗುವ ಸಾಧ್ಯತೆಗಳೂ ಇವೆ. ಇನ್ನು ಈ ಬಗೆಯ ಯಾವುದೇ ಲಕ್ಷಣಗಳು ಸತತವಾಗಿ ಕಂಡುಬಂದ ಪಕ್ಷದಲ್ಲಿ ನುರಿತ ಕ್ಯಾನ್ಸರ್ ತಜ್ಞರನ್ನು ತಕ್ಷಣ ಸಂಪರ್ಕಿಸುವುದು ಒಳಿತು.

**ಕಾರಣ–ಪರಿಹಾರಗಳತ್ತ :** ಉಳಿದ ಕ್ಯಾನ್ಸರ್ ಗಳಂತೆ ಕೊಲೊನ್ ಕ್ಯಾನ್ಸರ್ ಹಿಂದಿರುವ ಕಾರಣವೂ ಕೂಡ ಜೀವಕೋಶಗಳ ಡಿ.ಎನ್.ಎ ಗಳಲ್ಲಾಗುವ ಮ್ಯೂಟೇಷನ್ ಕ್ರಿಯೆಗಳು. ಸಾಮಾನ್ಯವಾಗಿ ದೊಡ್ಡ ಕರುಳಿನಲ್ಲಿರುವ ಆರೋಗ್ಯವಂತ ಜೀವಕೋಶಗಳು ಮ್ಯುಟೇಷನ್ ಪ್ರಕ್ರಿಯೆಗೊಳಪಟ್ಟಾಗ ಅವುಗಳು ಕ್ಯಾನ್ಸರ್ ಮಹಾಮ್ಮಾರಿಗೆ ಕಾರಣವಾಗುತ್ತವೆ. ದೇಹದ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯುತ್ತಿರಬೇಕು ಎಂದರೆ ಆರೋಗ್ಯವಂತ ಜೀವಕೋಶಗಳ ಬೆಳವಣಿಗೆ ಮತ್ತು ವಿಭಜನೆಗಳು ಒಟ್ಟೊಟ್ಟಿಗೇ ನಡೆಯುವುದು ಅನಿವಾರ್ಯವಾಗಿರುತ್ತದೆ. ಆದರೆ ಈ ಆರೋಗ್ಯವಂತ ಜೀವಕೋಶಗಳ ಡಿ.ಎನ್.ಎ ಗಳು ಹಾನಿಗೊಳಗಾದ ಸಂದರ್ಭಗಳಲ್ಲಿ ಅವುಗಳು ಕ್ಯಾನ್ಸರ್ ಕಾರಕ ಜೀವಕೋಶಗಳಾಗಿ ಬದಲಾಗುತ್ತವೆ. ಜೊತೆಗೇ ಮ್ಯುಟೇಷನ್ನಿಗೊಳಗಾದ ಈ ಜೀವಕೋಶಗಳು

ಒಂದೆಡೆ ಜಮೆಯಾಗುತ್ತಾ ಹೋಗಿ, ಕ್ರಮೇಣ ಟ್ಯೂಮರ್ (ಗಡ್ಡೆ) ರೂಪವನ್ನು ತಾಳುತ್ತವೆ.

ಕೊಲೊನ್ ಕ್ಯಾನ್ಸರಿಗೆ ಸಂಬಂಧಪಟ್ಟಂತೆ ರಿಸ್ಕ್ ಫ್ಯಾಕ್ಟರ್‌ಗಳೆಂದು ಪರಿಗಣಿಸಲ್ಪಡುವ ಅಂಶಗಳು ಬೆರಳೆಣಿಕೆಯಷ್ಟೇ ಇವೆ. ಐವತ್ತಕ್ಕಿಂತ ಹೆಚ್ಚಿನ ವಯಸ್ಸು, ಆಫ್ರಿಕನ್-ಅಮೆರಿಕನ್ ಜನಾಂಗೀಯ ಹಿನ್ನೆಲೆ, ವೈಯಕ್ತಿಕ ನೆಲೆಯಲ್ಲಿ ಪಾಲಿಪ್‌ಗಳು ಅಥವಾ ಕೊಲೊರೆಕ್ಟಲ್ ಕ್ಯಾನ್ಸರ್ ಗಳಿರುವ ಮೆಡಿಕಲ್ ಹಿಸ್ಟರಿ... ಇತ್ಯಾದಿಗಳು ಅವುಗಳಲ್ಲಿ ಮುಖ್ಯವಾದವುಗಳು. ಇನ್ನು ಕರುಳಿನ ಉರಿಯೂತ, ಕುಟುಂಬದ ಮೆಡಿಕಲ್ ಹಿಸ್ಟರಿಯಲ್ಲಿ ಕಾಣುವ ಕೊಲೊನ್ ಕ್ಯಾನ್ಸರ್ ಹಿನ್ನೆಲೆ ಮತ್ತು ವಂಶವಾಹಿ ಕಾರಣಗಳನ್ನೂ ಇಲ್ಲಿ ಉಲ್ಲೇಖಿಸುವುದು ಮುಖ್ಯ. ಉಳಿದಂತೆ ಲೋ-ಫೈಬರ್ ಡಯೆಟ್ (ನಾರು ಪದಾರ್ಥಗಳ ಕೊರತೆಯಿರುವ ಆಹಾರ ಶೈಲಿ), ಹೈ-ಫ್ಯಾಟ್ ಡಯೆಟ್ (ಅತಿಯಾದ ಕೊಬ್ಬಿರುವ ಆಹಾರ ಶೈಲಿ), ಹೆಚ್ಚಾಗಿ ಮಟನ್ ಯಾ ಬೀಫ್ (ರೆಡ್ ಮೀಟ್) ಸೇವನೆ, ಜಡವಾದ ಜೀವನ ಶೈಲಿ, ಮಧುಮೇಹ, ಬೊಜ್ಜು, ಧೂಮಪಾನ-ಮದ್ಯಪಾನದಂತಹ ಚಟಗಳು, ರೇಡಿಯೇಷನ್ ಥೆರಪಿಗಳೂ ಕೂಡ ಕೊಲೊನ್ ಕ್ಯಾನ್ಸರ್ ಖಾಯಿಲೆಯ ರಿಸ್ಕ್ ಫ್ಯಾಕ್ಟರ್ ಪಟ್ಟಿಗೆ ಬರುವ ಅಂಶಗಳು.

ತಜ್ಞರು ಹೇಳುವ ಪ್ರಕಾರ ಸುಮಾರು ಐವತ್ತರ ಪ್ರಾಯವನ್ನು ತಲುಪಿದ ಹಂತದಲ್ಲಿ ಕೊಲೊನ್ ಕ್ಯಾನ್ಸರ್ ಸಂಬಂಧಿ ಪರೀಕ್ಷೆಯನ್ನು ಮುಂಜಾಗ್ರತೆಯ ರೂಪದಲ್ಲಿ ಮಾಡಿಸಿಕೊಳ್ಳುವುದು ಉತ್ತಮ. ಆದರೆ ಮೊದಲೇ ಹೇಳಿದಂತೆ ಕೌಟುಂಬಿಕ ನೆಲೆಯಲ್ಲಿ ಮೆಡಿಕಲ್ ಹಿಸ್ಟರಿಗಳು ಇದ್ದ ಸಂದರ್ಭಗಳಲ್ಲಿ ಈ ಪರೀಕ್ಷೆಯನ್ನು ಕೊಂಚ ಮುಂಚಿತವಾಗಿಯೇ ಮಾಡಿಸಿಕೊಂಡರೆ ಒಳಿತು.




ಕೊಲೊನ್ ಕ್ಯಾನ್ಸರ್ ರೋಗಪತ್ತೆಗೆ ಸಂಬಂಧಪಟ್ಟಂತೆ ಹಲವು ಬಗೆಯ ಪರೀಕ್ಷಾ ಸೌಲಭ್ಯಗಳು ಇಂದು ಲಭ್ಯವಿದೆ. ಇನ್ನು ಪ್ರತಿಯೊಂದು ಪರೀಕ್ಷಾವಿಧಾನಗಳಿಗೂ ತಮ್ಮದೇ ಆದ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳಿರುವುದು ಸಾಮಾನ್ಯ. ಹೀಗಾಗಿ ಈ ಬಗ್ಗೆ ವೈದ್ಯರೊಂದಿಗೆ ವಿಸ್ತೃತವಾಗಿ ಚರ್ಚಿಸಿ, ಸೂಕ್ತ ಬಗೆಯ ಪರೀಕ್ಷಾವಿಧಾನವನ್ನು ಆಯ್ಕೆ ಮಾಡಿಕೊಳ್ಳುವುದು ಬುದ್ಧಿವಂತಿಕೆಯ ನಡೆ.

ಇನ್ನುಳಿದಂತೆ ಈ ಕೆಳಗಿನ ಕೆಲವು ಆರೋಗ್ಯವಂತ ಆಹಾರಶೈಲಿ ಮತ್ತು ಜೀವನಶೈಲಿಗಳು ಕೊಲೊನ್ ಕ್ಯಾನ್ಸರ್ ಸಾಧ್ಯತೆಗಳನ್ನು ಗಣನೀಯವಾಗಿ ತಗ್ಗಿಸಬಲ್ಲದು.

- ದೈನಂದಿನ ಆಹಾರಸೇವನೆಯಲ್ಲಿ ಹಣ್ಣು, ತರಕಾರಿಗಳು ಮತ್ತು ಧಾನ್ಯಗಳ ಯಥೇಚ್ಛ ಬಳಕೆ.
- ಮದ್ಯಪಾನದಲ್ಲಿ ಮಿತಿ.
- ಧೂಮಪಾನವನ್ನು ಸಂಪೂರ್ಣವಾಗಿ ತ್ಯಜಿಸುವುದು.
- ರೆಡ್ ಮೀಟ್ ಸೇವನೆ ಕಡಿಮೆ ಮಾಡುವುದು.
- ಪ್ರತಿದಿನ 2-3 ಲೀಟರ್ ನೀರು ಕುಡಿಯುವುದು.
- ಆರೋಗ್ಯವಂತ ದೇಹತೂಕವನ್ನು ಕಾಯ್ದುಕೊಳ್ಳಲು ದಿನಚರಿಯಲ್ಲಿ ಕನಿಷ್ಠ ಮೂವತ್ತು ನಿಮಿಷಗಳ ಅವಧಿಯನ್ನು ದೈಹಿಕ ವ್ಯಾಯಾಮಕ್ಕೆಂದು ಮೀಸಲಿಡುವುದು.

ಇವೆಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡೆವು ಎಂದಾದಲ್ಲಿ, ಮುಂದೆಂದಾದರೂ ಕೊಲೊನ್ ಕ್ಯಾನ್ಸರ್ ಹುಟ್ಟಿಕೊಳ್ಳುವ ಸಾಧ್ಯತೆಗಳನ್ನು ನಾವು ಮೊಳಕೆಯಲ್ಲೇ ಚಿವುಟಿ ಹಾಕಬಹುದು.■



26.11.2023 ರಂದು ಸಂಘದ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು ಹಾಗು ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರೊಂದಿಗೆ 2023ರ ಸಾಲಿನ ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ದೆಹಲಿ ಕನ್ನಡಿಗರ ಹೆಮ್ಮೆಯ ಮಕ್ಕಳು. ಕತಿಜ ರಿಫಾ-1ನೇ ತರಗತಿ, ಮೊನಿಷ್ಕಾ-2ನೇ ತರಗತಿ, ಬಿ. ಲಕ್ಷ ಗೌಡ-3ನೇ ತರಗತಿ, ವಿಧಿ ಕೊಠಾರಿ-4ನೇ ತರಗತಿ, ಅಕ್ಷತಾ ಹಲ್ಕರ್-5ನೇ ತರಗತಿ, ಕೀರ್ತನ್ ಪಿ-6ನೇ ತರಗತಿ, ಸೃಜನ್ ಆರ್-7ನೇ ತರಗತಿ, ಸಂಚಿತಾ-8ನೇ ತರಗತಿ, ನಿಕ್ಷಿತ್-9ನೇ ತರಗತಿ, ಅನಿರುದ್ ಆಚಾರ್ಯ-10ನೇ ತರಗತಿ, ಅನುಪ್ರಿಯಾ ಶರ್ಮಾಮತ್ತು ಲಕ್ಷಿತಾ ಜೈನ್-12ನೇ ತರಗತಿ, ಎಸ್. ಪ್ರಿಯಾಂಕ ಮತ್ತು ರಬಿಯತ್ ಬಾನು, ಶ್ರೇಯಾ ಭಜಂತ್ರಿ -ಗ್ರಾಜ್ಯುಯೇಷನ್, ನವಯುಗ್ ಶ್ರೀರಾಮ್-ಬಿಇ ಸಿಎಸ್‌ಇ, ಮಹೇಶ್ ಕುಮಾರ್ ಎಸ್. ನಿಂಬಾಳ್-ಬಿಟೆಕ್, ಕೆ. ಮೇಘಾ ಕಿಣಿ-ಫೈನ್ ಆರ್ಟ್ಸ್ ಹಾಗೂ ಅವಶ್ಯಕತೆ ಆಧಾರದ ಮೇಲೆ 41 ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

# ದೆಹಲಿ ಕರ್ನಾಟಕ ಸಂಘದಲ್ಲಿ ವೈಭವಪೂರ್ಣ
# ಕರ್ನಾಟಕ ರಾಜ್ಯೋತ್ಸವ ಸಂಭ್ರಮಾಚರಣೆ




ಮೈಸೂರು ರಾಜ್ಯ ಸ್ಥಾಪಿತಗೊಂಡು 67 ವರ್ಷಗಳು ತುಂಬಿದ್ದು, ರಾಜ್ಯದ ಹೆಸರು ಕರ್ನಾಟಕವಾಗಿ ನಾಮಕರಣಗೊಂಡು 50 ವರ್ಷಗಳು ತುಂಬಿದ ಈ ಸುಸಂದರ್ಭದಲ್ಲಿ, ಕರ್ನಾಟಕ ಸರ್ಕಾರವು 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಘೋಷಣೆಯೊಂದಿಗೆ ಕರ್ನಾಟಕ ಸಂಭ್ರಮ–50 ಎಂಬ ಕಾರ್ಯಕ್ರಮದಡಿ ರಾಜ್ಯಾದ್ಯಂತ ಹಾಗೂ ದೆಹಲಿಯೂ ಸೇರಿದಂತೆ ದೇಶದ ವಿವಿಧೆಡೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ದೆಹಲಿ ಕರ್ನಾಟಕ ಸಂಘದಲ್ಲಿಯೂ, ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರತಿ ವರ್ಷ ನವೆಂಬರ್ ಒಂದರಿಂದ ಪೂರ್ತಿ ತಿಂಗಳು ಕರ್ನಾಟಕ ರಾಜ್ಯೋತ್ಸವವನ್ನು ಬಹಳ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ. ರಾಜ್ಯೋತ್ಸವ ಆಚರಣೆ ಅಂಗವಾಗಿ ಪ್ರತಿ ವಾರಾಂತ್ಯ ಏರ್ಪಡಿಸುವ ಕಾರ್ಯಕ್ರಮಗಳು ಇಲ್ಲಿನ ಕನ್ನಡಿಗರಿಗೆ ಒಂದು ಕನ್ನಡ ಹಬ್ಬದ ವಾತಾವರಣ ನೀಡುತ್ತವೆ.

ಸಂಘದಲ್ಲಿ ಈ ಬಾರಿ 68ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಪ್ರಯುಕ್ತ ದಿನಾಂಕ 26.11.2023 ರಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡಿಗರಿಗೆ ಅತ್ಯುತ್ತಮ ಸೇವೆ ನೀಡಿದ ಹಿರಿಯ ಕನ್ನಡಿಗರನ್ನು ಗುರುತಿಸಿ ಅವರಿಗೆ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿ ನೀಡಿ ಗೌರವಿಸುವ, ಸಂಘದ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳು, ಆಟೋಟ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮತ್ತು ಪ್ರತಿಭಾವಂತ ಕನ್ನಡಿಗರ ಮಕ್ಕಳಿಗೆ ಅರ್ಹತೆ ಆಧಾರದ ಮೇಲೆ ಪ್ರತಿಭಾ ಪುರಸ್ಕಾರ ನೀಡುವ ಮತ್ತು ಆರ್ಥಿಕ ನೆರವಿನ ಅವಶ್ಯಕತೆ ಇರುವ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆಯನ್ನು ಹಮ್ಮಿಕೊಳ್ಳಲಾಗಿತ್ತು.



ಭಾನುವಾರ ಮಧ್ಯಾಹ್ನದಿಂದ ಆರಂಭಗೊಂಡ ಕಾರ್ಯಕ್ರಮದಲ್ಲಿ ಬೆಂಗಳೂರಿನಿಂದ ಕರೆಸಲ್ಪಟ್ಟ ನುರಿತ ನೃತ್ಯ ಸಂಯೋಜಕರು, ತರಬೇತಿದಾರರು ಮತ್ತು ಮಲ್ಲಕಂಬ ಗುರುಗಳಿಂದ ತರಬೇತಿ ಪಡೆದುಕೊಂಡ ಸ್ಥಳೀಯ ಕಲಾವಿದರು, ಮಹಿಳೆಯರು ಮತ್ತು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೊಳಗೊಂಡ ಜಾನಪದ ಜಾತ್ರೆ, ಗೀತೆ, ನೃತ್ಯ ಸಂಭ್ರಮ ಹಾಗು ಮಲ್ಲಕಂಬ ಪ್ರದರ್ಶನಗಳು ಪ್ರಸ್ತುತಿಗೊಂಡು ಸಭಾಂಗಣದಲ್ಲಿ ಕಿಕ್ಕಿರಿದು ನೆರದಿದ್ದ ದೆಹಲಿ ಕನ್ನಡಿಗರನ್ನು ಮನರಂಜಿಸಿದವು.

ಸಂಜೆ ನಡೆದ ಪ್ರಶಸ್ತಿ ಪ್ರದಾನ ಮತ್ತು ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಎಚ್. ರಾಜೇಶ್ ಪ್ರಸಾದ್ ಐಎಎಸ್, ಪ್ರಿನ್ಸಿಪಲ್ ಸೆಕ್ರೆಟರಿ, ಪವರ್ ಡೆವಲಪ್‌ಮೆಂಟ್ ಅಥಾರಿಟಿ, ಜಮ್ಮು ಕಾಶ್ಮೀರ, ಡಾ. ಡಿ. ಮಂಜುನಾಥ, ಐಎಫ್‌ಎಸ್, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್, ಅರಣ್ಯ ಮತ್ತು ಹವಾಮಾನ ಬದಲಾವಣೆ, ಪರಿಸರ ಸಚಿವಾಲಯ, ಕೇಂದ್ರ ಸರ್ಕಾರ ಮತ್ತು ಹಿರಿಯ ಐಪಿಎಸ್ ಅಧಿಕಾರಿ ಶ್ರೀ ಎನ್. ರಾಜಶೇಖರ್,







ಡಿಐಜಿ, ಬ್ಯುರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ನವದೆಹಲಿ ಅವರುಗಳು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು.

ಈ ವರ್ಷದ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿಗೆ ಆಯ್ಕೆಯಾದ ದೆಹಲಿ ಪೊಲೀಸ್ ಅಧಿಕಾರಿ ಶ್ರೀ ಬಿ.ಎಲ್. ಸುರೇಶ್, ಡಿಸಿಪಿ, ಕ್ರೈಂ ಅಂಡ್ ವುಮೆನ್ ಸೆಲ್ ಮತ್ತು ಗೈನಕಾಲಜಿಸ್ಟ್ ಡಾ. ನೀಲಿಮಾ ಉದಯ ಭಟ್ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಮಾಡಿದರು. ಸ್ಥಳೀಯ ಮಹಿಳೆಯರಿಂದ ನಾಡಗೀತೆ ಹಾಡಿನ ಪ್ರಸ್ತುತಿಯೊಂದಿಗೆ, ಅತಿಥಿಗಳು ದೀಪ ಪ್ರಜ್ವಲನೆ ಮಾಡಿ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಆಗಮಿಸಿದ್ದ ಮುಖ್ಯ ಅತಿಥಿಗಳನ್ನು ಮತ್ತು ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಆತ್ಮೀಯವಾಗಿ ಸ್ವಾಗತಿಸಿದರು.

ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ ಶ್ರೀ ಎಚ್. ರಾಜೇಶ್ ಪ್ರಸಾದ್ ಅವರು ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತಾ, ಇಲ್ಲಿನ ಕರ್ನಾಟಕ ಸಂಘವು ರಾಜ್ಯೋತ್ಸವ ಸಂದರ್ಭ ಅತ್ಯುತ್ತಮ ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ, ಕರ್ನಾಟಕದ ಸಂಸ್ಕೃತಿ, ಕಲೆ ಮತ್ತು ಭಾಷೆಯನ್ನು ಅಳವಡಿಸಿಕೊಂಡು ಮುಂದಿನ ಪೀಳಿಗೆಯವರಿಗೆ ಅದರ ಮಹತ್ವವನ್ನು ತಿಳಿಸಿ ಕೊಡುತ್ತಿರುವುದು ಮೆಚ್ಚುಗೆಯ ವಿಷಯ, ಬೇರೆ ರಾಜ್ಯಕ್ಕೆ ಅಥವಾ ಹೊರದೇಶಕ್ಕೆ ಹೋದಾಗ ಅಲ್ಲಿನ ಭಾಷೆಯನ್ನು ತಿಳಿದುಕೊಳ್ಳುವುದು, ಕಲಿತುಕೊಳ್ಳುವುದು ಸ್ವಾಭಾವಿಕ, ಬೆಂಗಳೂರಿನಲ್ಲಿ ಆಟೋ ಮತ್ತು ಟ್ಯಾಕ್ಸಿ ಚಾಲಕರು ಕನ್ನಡಿಗರ ಜೊತೆಯಲ್ಲಿಯೂ ಕಹಾ ಜಾನಾ ಹೈ ಆಪ್ಕೋ ಎಂದು ಹಿಂದಿಯಲ್ಲಿ ಮಾತನಾಡುವ ಪರಿಸ್ಥಿತಿ ಈಗ ಇದೆ, ತಮಿಳರು ದೆಹಲಿಯಲ್ಲಿಯೂ ತಮ್ಮವರೊಂದಿಗೆ ತಮಿಳು ಭಾಷೆಯಲ್ಲೇ ಮಾತನಾಡುತ್ತಾರೆ, ಕೇರಳದ ಮಲಯಾಳಿಗಳು, ಎಲ್ಲೇ ಹೋದರೂ ತಮ್ಮವರೊಂದಿಗೆ ಮಲಯಾಳಂ ಭಾಷೆಯನ್ನೇ ಉಪಯೋಗಿಸುತ್ತಾರೆ, ಹಾಗೇ ನಮ್ಮ ನಾಡಿನ ಬಗ್ಗೆ, ನಮ್ಮ ಕನ್ನಡ ಭಾಷೆಯ ಮೇಲೆ ಪ್ರತಿಯೊಬ್ಬ ಕನ್ನಡಿಗರೂ ಅಭಿಮಾನ ಮತ್ತು ಹೆಮ್ಮೆ ಪಡಬೇಕು, ಕನ್ನಡದಲ್ಲಿಯೇ ಮಾತನಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಪ್ರತಿಯೊಬ್ಬರೂ ದೆಹಲಿಯಲ್ಲಿ ಕನ್ನಡದ, ಕರ್ನಾಟಕದ ರಾಯಭಾರಿಯಾಗಬೇಕೆಂದು ಕರೆ ನೀಡಿದರು.

ಇನ್ನೊರ್ವ ಮುಖ್ಯ ಅತಿಥಿ ಡಾ. ಡಿ. ಮಂಜುನಾಥ ಅವರು ಮಾತನಾಡಿ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ತಮ್ಮ ಚಿತ್ರದುರ್ಗದ ಬಾಲ್ಯದ ದಿನಗಳನ್ನು ನೆನಪು ಮಾಡಿಕೊಂಡು, ಯುಪಿಎಸ್ಸಿ ಮುಖ್ಯ ಪರೀಕ್ಷೆಯಲ್ಲಿ ಎರಡು ಬಾರಿ ವಿಫಲರಾದ ನಂತರ ಕನ್ನಡವನ್ನು ಐಚ್ಚಿಕ ವಿಷಯ ತೆಗೆದುಕೊಂಡ ಬಳಿಕ ತಾವು ಯಶಸ್ವಿಯಾಗಿ ಐಎಫ್‌ಎಸ್ ಪದವಿ ಪಡೆದ ತಮ್ಮದೇ ಉದಾಹರಣೆಯನ್ನು ಕೊಟ್ಟರು, ಇತ್ತೀಚೆಗೆ ತಾವು ದೆಹಲಿಗೆ ಬಂದ ಮೇಲೆ ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ಇದು ಎರಡನೇ ಕಾರ್ಯಕ್ರಮವಾಗಿದ್ದು, ಇಂದು ಇಲ್ಲಿ ಇಷ್ಟೊಂದು ಕನ್ನಡ ಜನರನ್ನು ನೋಡಿದ ನಂತರ ಕನ್ನಡ ನಾಡಿಗೆ ಮತ್ತೆ ಬಂದಂತಾಯಿತು ಎಂದು ಹೇಳಿದರು.

ಮತ್ತೊರ್ವ ಮುಖ್ಯ ಅತಿಥಿಗಳಾದ ಶ್ರೀ ಎನ್ ರಾಜಶೇಖರ್ ಅವರು ಮಾತನಾಡಿ, ಮಕ್ಕಳ ಮತ್ತು ಮಹಿಳಾ ಕೇಂದ್ರೀಕೃತವಾದ ಇಂದಿನ ನೃತ್ಯ ಸಂಭ್ರಮ ಕಾರ್ಯಕ್ರಮವನ್ನು ನೋಡಿ ತಮಗೆ ಬಹಳ ಸಂತೋಷವಾಗಿದೆ, ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅತ್ಯುತ್ತಮ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ, ಇನ್ನೂ ಹೆಚ್ಚು ಹೆಚ್ಚು ಸ್ಥಳೀಯ ಮಕ್ಕಳ ಮತ್ತು ಕಲಾವಿದರ ಕಾರ್ಯಕ್ರಮಗಳು ನಡೆಯಲಿ, ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು ಎಂದರು.

2023ರ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಶ್ರೀ ಬಿ.ಎಲ್. ಸುರೇಶ್ ಮತ್ತು ಡಾ. ನೀಲಿಮಾ ಉದಯ್ ಭಟ್ ಅವರಿಗೆ ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ನೀಡಿ ಗೌರವಿಸಲಾಯಿತು. ಅವರ ಪರಿಚಯವನ್ನು ಕ್ರಮವಾಗಿ ಸಂಘದ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಮತ್ತು ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಮಾಡಿಕೊಟ್ಟರು.

ಪ್ರಶಸ್ತಿ ಸ್ವೀಕರಿಸಿದ ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡಿ, ಸಂಘವು ಶ್ರೀ ಸಿಎಂ ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ನಡೆಸುತ್ತಿದೆ, ಶ್ರೀ ಸಿ.ಎಂ. ನಾಗರಾಜ ಅವರು ಕನ್ನಡದ ರಾಯಭಾರಿಯಾಗಿ ಸಂಘಕ್ಕೆ ಉತ್ತಮ ನೇತೃತ್ವ ನೀಡಿ ಮುನ್ನಡೆಸುತ್ತಿದ್ದಾರೆ. ಅವರಿಗೆ ಮತ್ತು ಸಂಘದ ಪದಾಧಿಕಾರಿಗಳಿಗೆ ಅಭಿನಂದನೆಗಳು, ತಮ್ಮ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕೆ ಕೃತಜ್ಞತೆಗಳು ಎಂದರು. ಪ್ರಶಸ್ತಿ ಪುರಸ್ಕೃತೆ ಡಾ. ನೀಲಿಮಾ ಉದಯ್ ಭಟ್ ಅವರು ತಮ್ಮನ್ನು ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು.

ಈ ಪ್ರಶಸ್ತಿಗೆ ಆಯ್ಕೆಯಾದ ಇನ್ನಿಬ್ಬರಾದ ಹಿರಿಯ ಜಾನಪದ ವಿದ್ವಾಂಸರೂ, ಸಂಘದ ಮಾಜಿ



ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ತಮ್ಮ ಪೂರ್ವ ನಿಯೋಜಿತ ಕರ್ನಾಟಕದಲ್ಲಿನ ಕಾರ್ಯಕ್ರಮ ನಿಮಿತ್ತ ಮತ್ತು ಹಿರಿಯ ದೆಹಲಿ ಕನ್ನಡಿಗ ಹಾಗು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಶ್ರೀ ವಿ.ವಿ. ಬಿರಾದಾರ ಅವರು ತಮ್ಮ ಕಾಲಿನ ಶಸ್ತ್ರ ಚಿಕಿತ್ಸೆಯ ಕಾರಣದಿಂದ ಬರಲಾಗಲಿಲ್ಲ. ಶ್ರೀ ವಿ.ವಿ. ಬಿರಾದಾರ ಅವರು ಕಾರ್ಯಕ್ರಮಕ್ಕೆ ತಮ್ಮ ಅನುಪಸ್ಥಿತಿಯಲ್ಲಿ ಕಳುಹಿಸಿಕೊಟ್ಟ ಸಂದೇಶವನ್ನು ಶ್ರೀಮತಿ ಸುಮಿತಾ ಮುರಗೋಡ ಅವರು ಸಭೆಯಲ್ಲಿ ಓದಿ ತಿಳಿಸಿದರು. ಅವರುಗಳಿಗೆ ಮುಂದಿನ ದಿನಗಳಲ್ಲಿ ಮತ್ತೊಂದು ಕಾರ್ಯಕ್ರಮದಲ್ಲಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಗುವುದು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಅಮೃತ ಮಹೋತ್ಸವದಲ್ಲಿ ಏರ್ಪಡಿಸಿದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುತ್ತಾ, ಕನ್ನಡಿಗರ ಮಕ್ಕಳಿಗೆ ಶ್ರೀಮತಿ ರೂಪಶ್ರೀ ನರಸಿಂಹಮೂರ್ತಿಯವರು ಸಂಘದ ಕಲಿಕಾ ಕೇಂದ್ರದಲ್ಲಿ ಕನ್ನಡ ಕಲಿಸಿಕೊಡುತ್ತಿದ್ದಾರೆ, ಸಂಘದ ಸದಸ್ಯರಿಗೆ ನಿರಂತರವಾಗಿ ನೃತ್ಯ ತರಬೇತಿ, ಸಂಗೀತ ತರಗತಿಗಳನ್ನು ನಡೆಸಲಾಗುತ್ತಿದೆ, ಶ್ರೀನಿವಾಸ ಪುರಿಯಲ್ಲಿರುವ ಕುಷ್ಟರೋಗ ಆಶ್ರಮದ 40ಕ್ಕೂ ಹೆಚ್ಚು ಕನ್ನಡಿಗರ ಮಕ್ಕಳಿಗೆ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುನಿತಾ ಮುರಗೋಡ ಅವರು ಕನ್ನಡ ಕಲಿಸುತ್ತಿದ್ದಾರೆ, ದೆಹಲಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬರುವ ಕನ್ನಡಿಗರ ಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸುವ ಹಿನ್ನೆಲೆಯಲ್ಲಿ ಸಂಘಕ್ಕೆ ಇನ್ನೊಂದು ಜಾಗವನ್ನ ಪಡೆದುಕೊಳ್ಳಲು ನಿರಂತರ ಪ್ರಯತ್ನ ನಡೆಯುತ್ತಿದೆ, ಈಗಾಗಲೇ, ನೋಯಿಡಾ ಮತ್ತು ಗ್ರೇಟರ್, ನೋಯಿಡಾ ಅಥಾರಿಟಿಗಳ ನಮ್ಮ ಕನ್ನಡಿಗ ಸಿಇಓಗಳನ್ನು, ಹಾಗು ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡರ ನೆರವಿನಿಂದ ಕೇಂದ್ರ ನಗರಾಭಿವೃದ್ಧಿ ಸಚಿವರಾದ ಶ್ರೀ ಹರ್ದೀಪ್ ಸಿಂಗ್ ಪುರಿ ಅವರನ್ನು ಸಂಪರ್ಕಿಸಿದ್ದೇವೆ, ಆದಷ್ಟು ಬೇಗನೇ ಈ ಕೆಲಸ ಕಾರ್ಯಗತವಾಗುವುದೆಂದು ತಿಳಿಸಿದರು.

ಇಂದು ನಮ್ಮ ಸಂಘದಿಂದ ನೀಡುತ್ತಿರುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಅತ್ಯಂತ ಅರ್ಹರಾದ ಹಿರಿಯ ಕನ್ನಡಿಗರನ್ನು ಆಯ್ಕೆ ಮಾಡಿದ್ದೇವೆ, ಅವರೆಲ್ಲರಿಗೂ ಅಭಿನಂದನೆಗಳು, ಮುಂದಿನ ಭಾನುವಾರ ಸ್ಥಳೀಯ ಕನ್ನಡಿಗರು ತಿಂಡಿ ತಿನಿಸುಗಳನ್ನು ತಮ್ಮ ಮನೆಗಳಲ್ಲಿ ಮಾಡಿಕೊಂಡು ಬಂದು ಸಂಘದಲ್ಲಿ ಆಹಾರ ಮಳಿಗೆಗಳ ಮೂಲಕ ಭಾಗವಹಿಸುವ ಕೈರುಚಿ ಆಹಾರ ಮೇಳ ಆಯೋಜನೆಯಾಗಲಿದೆ, ಹಾಗೇನೇ ಬರುವ ದಿನಗಳಲ್ಲಿ ವಿಶ್ವದ ಎಲ್ಲ ಕನ್ನಡಪರ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ, ನವದೆಹಲಿಯ ಪ್ರಗತಿ ಮೈದಾನದ ಭಾರತ ಮಂಡಪಂನಲ್ಲಿ ದೊಡ್ಡ ಮಟ್ಟದಲ್ಲಿ ವಿಶ್ವ ಕನ್ನಡ ಸಮ್ಮೇಳನ ಮಾಡುವ ಮಹದಾಸೆ ತಮಗೆ ಇದೆ, ಈ ಎಲ್ಲಾ ಕಾರ್ಯಕ್ರಮಗಳು ಹೊರ ನಾಡಿನ ಮತ್ತು ದೆಹಲಿಯಲ್ಲಿರುವ ಸಂಘ–ಸಂಸ್ಥೆಗಳು ಮತ್ತು ದೆಹಲಿ ಕನ್ನಡಿಗರ ಸಹಕಾರದಿಂದ ಯಶಸ್ವಿಯಾಗಲಿವೆ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಕಳೆದ ಐದು ಆರು ದಿನಗಳಿಂದ ಬೆಂಗಳೂರಿಂದ ಬಂದ ನುರಿತ ತರಬೇತಿದಾರರು, ನೃತ್ಯ ಸಂಯೋಜಕರು ನಮ್ಮ ಸ್ಥಳೀಯ, ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಪುರುಷರಿಗೆ ವಿವಿಧ ಜಾನಪದ ಕಲಾ ಪ್ರಕಾರಗಳ ತರಬೇತಿ, ನೃತ್ಯ ಮತ್ತು ಮಲ್ಲಕಂಬದ ತರಬೇತಿ ನೀಡಿದ ಫಲವಾಗಿ, ಸ್ಥಳೀಯ ಕಲಾವಿದರು ಅತ್ಯದ್ಭುತ ಪ್ರದರ್ಶನವನ್ನು ಇಂದು ಸಂಘದ ವೇದಿಕೆಯಲ್ಲಿ ನೀಡುತ್ತಿರುವುದು ಹೆಮ್ಮೆಯ ಮತ್ತು ಸಂತೋಷದ ಸಂಗತಿಯಾಗಿದೆ,







ಇಂದಿನ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದ ಎಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಂತೋಷ ಜೆ ಅವರು ವಂದನಾರ್ಪಣೆ ಕಾರ್ಯವನ್ನು ನಡೆಸಿಕೊಟ್ಟರು.

ಸಭಾ ಕಾರ್ಯಕ್ರಮದ ನಂತರ ಮುಂದುವರಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಸ್ತುತಿಗೊಂಡ ವಿವಿಧ ಕಲಾ ಪ್ರಕಾರಗಳು ಜಾನಪದ ಹಾಡುಗಳು, ವೀರಗಾಸೆ, ಕಂಸಾಳೆ, ಮಾರಿ ಕುಣಿತ, ಪಟ್ಟದ ಕುಣಿತ, ಮಲ್ಲಕಂಬ ಪ್ರದರ್ಶನ, ಮಕ್ಕಳಿಂದ ಯಕ್ಷಗಾನ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಕ್ಕಳು, ಸಂಘದ ನೃತ್ಯ ತರಬೇತಿ ಪಡೆದ ಮಕ್ಕಳು, ಗುರುಗಾಂವ್ ಕನ್ನಡ ಸಂಘದ ಮಕ್ಕಳು ಮತ್ತು ಮಹಿಳೆಯರಿಂದ ಹಾಡು ಮತ್ತು ಜಾನಪದ ನೃತ್ಯಗಳು ದೆಹಲಿ ಕನ್ನಡಿಗರ ಮನಸೂರೆಗೊಂಡವು. ಸಂಘದಲ್ಲಿ ಪ್ರಥಮ ಬಾರಿಗೆ ಪ್ರದರ್ಶನಗೊಂಡ ಮಲ್ಲಕಂಬ ಪ್ರಸ್ತುತಿ ನಡೆದಿದ್ದ ಸಭಿಕರ ಅಪಾರ ಮೆಚ್ಚುಗೆ ಪಡೆಯಿತು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಮತ್ತು ಉಪಾಧ್ಯಕ್ಷ ಶ್ರೀಮತಿ ಪೂಜಾ ರಾವ್ ಜಂಟಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

ಅರ್ಹತೆ ಆಧಾರದ ಮೇಲೆ ಒಂದರಿಂದ 12ನೇ ತರಗತಿಯ ಹಾಗು ಪದವಿ, ಸ್ನಾತಕೋತ್ತರ ಪದವಿ ಮತ್ತು ಫೈನ್ ಆರ್ಟ್ಸ್ ವಿಭಾಗಗಳ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಆರ್ಥಿಕ ಅವಶ್ಯಕತೆ ಇರುವ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ ಮಾಡಲಾಯಿತು.

ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳು, ಕ್ರೀಡಾ ಮತ್ತು ಆಟೋಟ ಸ್ಪರ್ಧೆಗಳ ವಿಜೇತರಿಗೆ ಕಾರ್ಯಕ್ರಮದಲ್ಲಿ ಬಹುಮಾನ ಮತ್ತು ಟ್ರೋಫಿಗಳನ್ನು ಮುಖ್ಯ ಅತಿಥಿಗಳಿಂದ ವಿತರಣೆ ಮಾಡಲಾಯಿತು. ನೃತ್ಯ ತರಬೇತಿ ನೀಡಿದ ಶ್ರೀ ಲಕ್ಷ್ಮಣ್ ನೆಲಸೊಗಡು, ಕು. ಭವಾನ, ಕು. ಅಕ್ಷತ ಮತ್ತು ಮಲ್ಲಕಂಬದ ತರಬೇತಿ ನೀಡಿದ ಶ್ರೀ ಕಿರಣ್ ಸಿದ್ದಾರ್ಥ ಹೂಗಾರ್ ಮತ್ತು ಶ್ರೀ ದಶರಥ ಚವ್ಹಾನ ಹಾಗು ಸಂಘದ ನೃತ್ಯ ತರಗತಿಯ ಮಕ್ಕಳಿಗೆ ತರಬೇತಿ ನೀಡಿದ ಕುಮಾರಿ ಪ್ರೇರಣಾ ರಾವ್ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ರುಚಿಕರ ರಾಗಿ ಮುದ್ದೆ ಮತ್ತು ಜೋಳದ ರೊಟ್ಟಿಯ ರಾತ್ರಿಯ ವಿಶೇಷ ಭೋಜನವನ್ನು ಸವಿದ ದೆಹಲಿ ಕನ್ನಡಿಗರು ಸಂಭ್ರಮಿಸಿದರು.■

***ಅಭಿಮತ ವರದಿ***

# ಜಾನಪದ ಕಲೆ - ನೆಲದ ಸೊಗಡು ಸಂಸ್ಕೃತಿಯ ಪ್ರತೀಕ

ನದಿ ಮೂಲ ಋಷಿ ಮೂಲ ಹುಡುಕುವುದು ಎಷ್ಟು ಕಷ್ಟವೋ ಅಷ್ಟೇ ಕಷ್ಟ ಅಥವಾ ಅಸಾಧ್ಯ ನಮ್ಮ ಜಾನಪದ ಕಲೆಗಳ ಮೂಲವನ್ನು ಅರಸುವುದು. ಈ ಜಾನಪದ ಕಲೆಗಳು ಮನುಷ್ಯನಷ್ಟೇ ಪ್ರಾಚೀನವಾದದ್ದು. ಪ್ರಾಯಶಃ ಜನ ಜೀವನದ ರೀತಿಯೇ ಜಾನಪದ ಕಲೆಯಾಗಿ ಬೆಳೆದು ಬಂದಿದೆ. ಯಾವುದೇ ಶಾಸ್ತ್ರ ಅಥವ ಲಿಪಿಗಳ ಸಹಾಯವಿಲ್ಲದೆ ಬಾಯಿಯಿಂದ ಬಾಯಿಗೆ ಹರಿದು ಬಂದದ್ದೇ ಜಾನಪದ ಸಾಹಿತ್ಯ–ಕಲೆಗಳಾಗಿ ಬೆಳೆದಿದೆ ಬದುಕಿನ ಏಕತಾನತೆ, ಬೇಸರ, ದುಡಿಮೆಯ ಆಯಾಸ ಇತ್ಯಾದಿಗಳನ್ನು ನಿವಾರಿಸಲೆಂದೂ, ಮನರಂಜನೆಗೆಂದೂ ಕಲೆಗಳ ಆವಿಷ್ಕಾರ ಆದದ್ದು. ಪೀಳಿಗೆ ಇಂದ ಪೀಳಿಗೆಗೆ ಹರಿದು ಬಂದ ಈ ಕಲೆಯನ್ನು ಮನುಷ್ಯ ಜತನವಾಗಿ ರಕ್ಷಿಸಿ ಬೆಳೆಸಿ ಉಳಿಸಿಕೊಂಡು ಬಂದಿದ್ದಾನೆ.

ಹಲವಾರು ಜಾನಪದ ಕಲೆಗಳ ತವರು ನಮ್ಮ ಕರ್ನಾಟಕ. ನೆಲ ಜಲ, ಸಂಸ್ಕೃತಿಯ ಸೊಗಡನ್ನು ಪ್ರತಿಬಿಂಬಿಸುವ, ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಜಾನಪದ ಕಲೆಗಳು ಪ್ರಚಲಿತವಾಗಿವೆ ಕಂಸಾಳೆ, ಸುಗ್ಗಿ ಕುಣಿತ, ಪಟದ ಕುಣಿತ, ವೀರಗಾಸೆ, ಯಕ್ಷಗಾನ, ಭೂತಾರಾಧನೆ, ಗೊರವರ ಕುಣಿತ, ಮಲ್ಲಕಂಭ ಅಲ್ಲದೇ ರಾಗಿ ಬೀಸುವ ಹಾಡು, ಜೋಗುಳದ ಹಾಡುಗಳು, ಗಾದೆಗಳು, ಒಗಟುಗಳು ಹೀಗೆ ಒಂದೇ ಎರಡೇ! ನಮ್ಮ ಹಳ್ಳಿಗಳಲ್ಲಿ ನಿತ್ಯದ ಬದುಕು ಇಂತಹ ಹಾಡುಗಳು, ಆಚರಣೆಗಳಿಂದಲೇ ಆರಂಭವಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಹೊಸ ಪೀಳಿಗೆಯು ಇಂತಹ ಪರಂಪರಾಗತ ಕಲೆಗಳನ್ನು ಬಿಟ್ಟು ಪ್ರಗತಿಯ ನೆಪದಲ್ಲಿ ನಾಗಾಲೋಟದಿಂದ ಮುನ್ನುಗ್ಗುತ್ತಿದೆ.

ಈ ಸಂದರ್ಭದಲ್ಲಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಜಾನಪದ ಕಲಾ ಸಂಪತ್ತನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಈ ಎಲ್ಲ ಹಿನ್ನೆಲೆಯಿಂದ ಯೋಚಿಸಿದಾಗ ರಾಜ್ಯೋತ್ಸವ ಸಮಾರಂಭದ ಅಂಗವಾಗಿ ಕಳೆದ ನವೆಂಬರ್ 26 ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಜಾನಪದ ವೈಭವ ಸಮಯೋಚಿತ ಮತ್ತು ಶ್ಲಾಘನೀಯ.

ಹಿರಿಯ ಜಾನಪದ ಕಲಾವಿದ ನೆಲಸೊಗಡು ಲಕ್ಷ್ಮಣ ಅವರಿಂದ ಆಸಕ್ತ ದೆಹಲಿ ಕನ್ನಡಿಗರಿಗೆ ತರಬೇತಿ ಶಿಬಿರ ಏರ್ಪಡಿಸಿ ಅಂತ್ಯದಲ್ಲಿ ವರ್ಣರಂಜಿತ ರಂಗ ಕಾರ್ಯಕ್ರಮ ಪ್ರಸ್ತುತ ಪಡಿಸಿದ್ದು ನಿಜಕ್ಕೂ ಹೆಮ್ಮೆಯ ವಿಷಯ. ಸ್ಥಳೀಯ ಕನ್ನಡಿಗರು ಮತ್ತು ಅವರ ಮಕ್ಕಳು ಆಸಕ್ತಿಯಿಂದ ಭಾಗವಹಿಸಿದ್ದರು. ಯುವಕರು, ಯುವತಿಯರು, ಮಹಿಳೆಯರು ಪುರುಷರು ಹೀಗೆ ವಯಸ್ಸಿನ ತಾರತಮ್ಯವಿಲ್ಲದೇ ಕನ್ನಡಿಗರೆಲ್ಲರೂ ಉತ್ಸಾಹ ಮತ್ತು ಸಂಭ್ರಮದಿಂದ ಪಾಲ್ಗೊಂಡಿದ್ದರು.

ಜಾನಪದ ಹಾಡುಗಳು, ಮಾರಿ ಕುಣಿತ, ವೀರಗಾಸೆ, ಕಂಸಾಳೆ, ಯಕ್ಷಗಾನ ಮಲ್ಲಕಂಬ ಇತ್ಯಾದಿ ಪ್ರಕಾರಗಳನ್ನು ಪ್ರಸ್ತುತಪಡಿಸಿ ಕಾರ್ಯಕ್ರಮವು ಅತ್ಯದ್ಭುತ ಯಶಸ್ಸು ಕಂಡಿತು. ಕಿಕ್ಕಿರಿದ ಸಭಾಂಗಣ ಕಲಾವಿದರ ಉತ್ಸಾಹವನ್ನು ದ್ವಿಗುಣಗೊಳಿಸಿತ್ತು. ಕಾರ್ಯಕ್ರಮದ ನಂತರ ಉಣ ಬಡಿಸಿದ ಊಟವೂ ಸಹ ಪೂರಕವಾಗಿತ್ತು. ರಾಗಿಮುದ್ದೆ, ಜೋಳದ ರೊಟ್ಟಿ ವಿವಿಧ ರೀತಿಯ ಪಲ್ಯಗಳು, ಚಟ್ನಿ , ಸಾರು, ಹುಳಿ, ಪಾಯಸ ಇತ್ಯಾದಿ. ಒಟ್ಟಿನಲ್ಲಿ ಹೇಳಬೇಕೆಂದರೆ ಅದೊಂದು ಅಚ್ಚುಕಟ್ಟಾದ ಜಾನಪದ ಹಬ್ಬ. ಇಂತಹ ಅಭೂತ ಪೂರ್ವ ಜಾನಪದ ವೈಭವದಲ್ಲಿ ಭಾಗಿಯಾದ ನಾವು ನಿಜಕ್ಕೂ ಧನ್ಯರು.

ಕಾರ್ಯಕವು ರೂಪಿಸಿದ, ಆಯೋಜಿಸಿದ, ಶ್ರಮಿಸಿದ ಎಲ್ಲರಿಗೂ ಧನ್ಯವಾದಗಳು. ಜೈ ಕನ್ನಡಾಂಬೆ.■

***ಶ್ರೀಮತಿ ವೈಜಯಂತಿ ಗಿರೀಶ್***
ವಕೀಲರು, ದೆಹಲಿ ಕನ್ನಡತಿ



**ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸ್ಥಳೀಯ ಮಕ್ಕಳು ಮತ್ತು ಮಹಿಳಾ ಕಲಾವಿದರಿಂದ ಪ್ರಸ್ತುತಗೊಂಡ ಯಕ್ಷಗಾನ, ಗೀತೆ ಗಾಯನ, ಮಾರಿಕುಣಿತ ಹಾಗು ನೃತ್ಯ ಸಂಭ್ರಮ**

# 2023 ನೇ ವರ್ಷದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪುರಸ್ಕೃತರು



## ಡಾ. ಪುರುಷೋತ್ತಮ ಬಿಳಿಮಲೆ



ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಿಳಿಮಲೆಯಲ್ಲಿ 1955ರಲ್ಲಿ ಜನಿಸಿದ ಇವರು, ಪಂಜ ಪರಿಸರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನೂ, ಪುತ್ತೂರಿನಲ್ಲಿ ಪದವಿ ಶಿಕ್ಷಣವನ್ನೂ ಪೂರೈಸಿದರು. 1979 ರಲ್ಲಿ ಮದ್ರಾಸು ವಿಶ್ವವಿದ್ಯಾಲಯದಿಂದ ಪ್ರಥಮ ರ್‍ಯಾಂಕಿನೊಂದಿಗೆ ಕನ್ನಡದಲ್ಲಿ ಎಂ.ಎ. ಪದವಿ ಪಡೆದು, 1985 ರಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. 1979 ರಲ್ಲಿ ಸುಳ್ಯದ ನೆಹರೂ ಸ್ಮಾರಕ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಡಾ. ಬಿಳಿಮಲೆ ಅವರು ಮುಂದೆ ಮಂಗಳೂರು ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ. 1998 ರಲ್ಲಿ ದೆಹಲಿ ಸೇರಿದ ಇವರು ಗುರುಗಾಂವ್‌ನ 'ಭಾರತೀಯ ಅಧ್ಯಯನಗಳ ಅಮೇರಿಕಾ ಸಂಸ್ಥೆ'ಯಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. 2015 ರಿಂದ ದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮೊದಲ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ 2020ರಲ್ಲಿ ನಿವೃತ್ತರಾಗಿದ್ದಾರೆ.

ಈ ಸುದೀರ್ಘ ಪ್ರಯಾಣದ ನಡುವೆಯೂ ಡಾ. ಬಿಳಿಮಲೆ ಅವರು ತಾವು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಮತ್ತು ತುಳುವಿನ ಬಗ್ಗೆ ಕೆಲಸ ಮಾಡುತ್ತಲೇ ಬಂದಿದ್ದಾರೆ. ಅವಕಾಶ ಸಿಕ್ಕಾಗ ಯಕ್ಷಗಾನ ಕುಣಿದಿದ್ದಾರೆ. ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಇವರ ಮೆಕೆಂಜಿ ಕೈಫಿಯತ್ತುಗಳು, ಲಿಂಗರಾಜನ ಹುಕುಂ ನಾಮೆ, ಬಂಡಾಯ–ದಲಿತ ಸಾಹಿತ್ಯ, ಕರಾವಳಿ ಜಾನಪದ, ಶಿಷ್ಟ–ಪರಿಶಿಷ್ಟ, ಕೂಡುಕಟ್ಟು, ಜನ ಸಂಸ್ಕೃತಿ, ಬಹುರೂಪ, ಮೆಲುನುಡಿ, ಕನ್ನಡ ಕಥನಗಳು, ವಲಸೆ, ಸಂಘರ್ಷ ಮತ್ತು ಸಮನ್ವಯ ಹಾಗೂ ಅಮರ ಸುಳ್ಯದ ರೈತ ಹೋರಾಟ ಕೃತಿಗಳು ನಾಡಿನ ಎಲ್ಲೆಡೆಯೂ ಪ್ರಸಿದ್ಧವಾಗಿವೆ. ಈಚೆಗೆ ಪ್ರಕಟವಾದ ಇವರ ಆತ್ಮಕಥನ 'ಕಾಗೆ ಮುಟ್ಟಿದ ನೀರು' ಓದುಗರ ಆದರಕ್ಕೆ ವಿಶೇಷವಾಗಿ ಪಾತ್ರವಾಗಿದೆ. ಇವರು ನಾಡು ನುಡಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ, ಕರ್ನಾಟಕ ಸರಕಾರವು 2011 ರಲ್ಲಿ ರಾಜ್ಯ ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವಿಸಿದೆ. ಕರ್ನಾಟಕ ಸಾಹಿತ್ಯ ಮತ್ತು ಜಾನಪದ ಅಕಾಡೆಮಿಗಳ ಪ್ರಶಸ್ತಿಗಳೂ ಶ್ರೀಯುತರಿಗೆ ಸಂದಾಯವಾಗಿವೆ.

ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯಕ್ಕೆ ಡಾ. ಪುರುಷೋತ್ತಮ ಬಿಳಿಮಲೆ ಅವರು ನೀಡಿದ ಕೊಡುಗೆ ಚಾರಿತ್ರಿಕವಾದುದು. ಇವರ ಅಧ್ಯಕ್ಷತೆಯ ಅವಧಿಯಲ್ಲಿ (2002–2008) ದೆಹಲಿ ಕರ್ನಾಟಕ ಸಂಘಕ್ಕೆ ವಿಶೇಷ ಮನ್ನಣೆ ಪ್ರಾಪ್ತಿಸಿತ್ತಲ್ಲದೆ, ರಾಜಧಾನಿಯಲ್ಲಿ ಕರ್ನಾಟಕದ ಧ್ವನಿಯೂ ಸಬಲಗೊಂಡಿತು.

ಇವೆಲ್ಲವುಗಳ ಜೊತೆಗೆ ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ಸಾಹಿತ್ಯಕ್ಕೆ ಮತ್ತು ದೆಹಲಿಯ ಪ್ರಮುಖ ಸಂಘ ಸಂಸ್ಥೆಗಳಾದ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಇವರಿಗೆ ದೆಹಲಿ ಕರ್ನಾಟಕ ಸಂಘವು 2023ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. **ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಗೌರವಪೂರ್ವಕ ಅಭಿನಂದನೆಗಳು.■**



## ಶ್ರೀ ಬಿ.ಎಲ್. ಸುರೇಶ್



ಬೋರೇಗೌಡನಪಾಳ್ಯ ಲಿಂಗಯ್ಯ ಸುರೇಶ್ ಅವರು 7ನೇ ಸೆಪ್ಟೆಂಬರ್ 1971ರಲ್ಲಿ ಚಾಮರಾಜನಗರ ಜಿಲ್ಲೆಯ ನವಿಲೂರಿನಲ್ಲಿ ಜನಿಸಿದರು. ಮೆಕ್ಯಾನಿಕಲ್ ವಿಭಾಗದಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ಇವರು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ (PGDHRM), ಹಾಗು ದೆಹಲಿ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ. AGMUT ಕೇಡರ್‌ನ DANIPs ಪೋಲಿಸ್ ಅಧಿಕಾರಿಯಾಗಿ ಸೇವೆಗೆ ಸೇರುವ ಮುನ್ನ ಭಾರತ ಸರ್ಕಾರದ ಹಲವು ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. ಇದೀಗ ದೆಹಲಿ ಪೋಲಿಸ್‌ನ ಕ್ರೈಂ ಅಂಡ್ ವ್ಯುಮನ್ ಸೆಲ್‌ನಲ್ಲಿ ಡೆಪ್ಯುಟಿ ಕಮಿಷನರ್ ಆಫ್ ಪೋಲಿಸ್ ಆಗಿ ಸೇವೆ ಸಲ್ಲಿಸುತ್ತಿರುವ ಇವರು ಈ ಹಿಂದೆ ದಿಯು ಮತ್ತು ದಮನ್‌ನ ಪೋಲಿಸ್ ಮುಖ್ಯಸ್ಥರಾಗಿ ಹಾಗೂ ದೆಹಲಿಯ ಉತ್ತರ ಜಿಲ್ಲೆಯ Anti Corruption Cell ನಲ್ಲಿ ಡಿಸಿಪಿಯಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಧರ್ಮ ಪತ್ನಿ ಶ್ರೀಮತಿ ಅನಿತಾ ಮೊಹಂತಿ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಜನರಲ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಇಬ್ಬರು ಮಕ್ಕಳು ಕು. ಲಕ್ಷ್ಮಿ ಗೌಡ ಅಂತರರಾಷ್ಟ್ರೀಯ ಮಟ್ಟದ ಟೆನಿಸ್ ಕ್ರೀಡಾಪಟುವಾಗಿದ್ದು ಜೆಎಂಸಿಯಲ್ಲಿ ಬಿಎ ಅರ್ಥಶಾಸ್ತ್ರ ವ್ಯಾಸಂಗ ಮಾಡುತ್ತಿದ್ದರೆ, ಕು. ಅನ್ವೇಷ ಗೌಡ ವಿಶ್ವ ಜೂನಿಯರ್ ಶ್ರೇಯಾಂಕದ ಬ್ಯಾಡ್ಮಿಂಟನ್ ಕ್ರೀಡಾ ಪಟುವಾಗಿದ್ದು, ಸಂಸ್ಕೃತಿ ಶಾಲೆಯಲ್ಲಿ 10ನೇ ತರಗತಿಯಲ್ಲಿ ಓದುತ್ತಿದ್ದಾರೆ.

ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಅಧ್ಯಕ್ಷರಾಗಿ ಬಡಮಕ್ಕಳಿಗೆ ವಿದ್ಯಾರ್ಥಿ ವೇತನ, ಅರ್ಹತೆ ಆಧಾರದ ಮೇಲೆ ಪ್ರತಿಭಾ ಪುರಸ್ಕಾರ, ಕರ್ನಾಟಕದಿಂದ ಉನ್ನತ ಶಿಕ್ಷಣಕ್ಕೆ ಯುಪಿಎಸ್‌ಸಿ ಪರೀಕ್ಷೆ ಬರೆಯಲು ದೆಹಲಿಗೆ ಬರುವ ವಿದ್ಯಾರ್ಥಿಗಳಿಗೆ ಸಹಕಾರವಾಗಿ ನಿಂತಿರುವ ಇವರ ಗಣನೀಯ ಸೇವೆಯನ್ನು ಗುರುತಿಸಿ 2023 ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. **ಇವರಿಗೆ ದೆಹಲಿ ಕನ್ನಡಿಗರ ಹಾರ್ದಿಕ ಅಭಿನಂದನೆಗಳು.■**

## ಡಾ. ನೀಲಿಮಾ ಉದಯ ಭಟ್



ಡಾ. ನೀಲಿಮಾ ಉದಯ ಭಟ್ (M.B.B.S, D.G.O) ಅವರು ಮೂಲತಃ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಪವಿತ್ರ ಸ್ಥಳವಾದ ಗೋಕರ್ಣದಿಂದ ಬಂದವರು.

ಔರಂಗಾಬಾದ್‌ನ ವೈದ್ಯಕೀಯ ಕಾಲೇಜಿನಿಂದ ಎಂಬಿಬಿಎಸ್ ಪದವಿ ಪಡೆದ ಇವರು ತದನಂತರ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದರು. ಇವರು ದೆಹಲಿ ಮೆಡಿಕಲ್ ಕೌನ್ಸಿಲ್‌ನ ನೋಂದಾಯಿತ ವೈದ್ಯಕೀಯ ವೈದ್ಯರಾಗಿದ್ದು, ನವದೆಹಲಿಯ ಸತ್ಯನಿಕೇತನದಲ್ಲಿ ಕಳೆದ ಮೂವತ್ತೆಂಟು ವರ್ಷಗಳಿಂದ ಪೀಡಿಯಾಟ್ರಿಕ್ಸ್ ಮತ್ತು ಜನರಲ್ ಮೆಡಿಸಿನ್ ಕ್ಲಿನಿಕ್ ನಡೆಸುತ್ತಿದ್ದಾರೆ. ಜಾತಿ, ಮತ, ಧರ್ಮ ಎಂಬ ಭೇದವಿಲ್ಲದೆ ನಿಸ್ವಾರ್ಥ ಮತ್ತು ಅವಿರತ ಸೇವೆ ಸಲ್ಲಿಸುತ್ತಿದ್ದಾರೆ. ಇವರನ್ನು ಅರಿತವರಿಗೆ ಮತ್ತು ಇವರ ಸೇವೆಯನ್ನು ಪಡೆದ ದೆಹಲಿ ಕನ್ನಡಿಗರಿಗೆ ಇವರು ಅಮೂಲ್ಯವಾದ ಆಸ್ತಿಯಾಗಿದ್ದಾರೆ.

ಮಿತಭಾಷಿ ಹಾಗೂ ಮೃದು ಸ್ವಭಾವದ ವ್ಯಕ್ತಿತ್ವವನ್ನು ಹೊಂದಿರುವ ಡಾ. ನೀಲಿಮಾ ಉದಯ ಭಟ್ ಅವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು. ಇವರ ಪತಿ ವಿಶಿಷ್ಟ ಕನ್ನಡಿಗ ಪುರಸ್ಕೃತ ವಾಸ್ತುಶಿಲ್ಪಿ ಶ್ರೀ ಉದಯ ಭಟ್ ಅವರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹಾಗು ಪ್ರಸ್ತುತ ಸಂಘದಲ್ಲಿ ನಡೆಯುತ್ತಿರುವ ಉನ್ನತೀಕರಣ ಕಾರ್ಯಗಳಿಗೆ ತಾಂತ್ರಿಕ ಸಲಹೆ,ನೆರವು ನೀಡುತ್ತಿದ್ದಾರೆ. ಇವರು ತಮ್ಮ ವೈದ್ಯಕೀಯ ಕ್ಷೇತ್ರದಲ್ಲಿ ಅದರಲ್ಲೂ ದೆಹಲಿ ಕನ್ನಡಿಗರಿಗೆ ನೀಡಿದ ಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘದಿಂದ 2023ನೇ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. **ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪ್ರೀತಿ ಪೂರ್ವಕ ಅಭಿನಂದನೆಗಳು.■**

## ಶ್ರೀ ವಿ.ವಿ. ಬಿರಾದಾರ



ಶ್ರೀ ವೈಜಿನಾಥ ವೀರಪ್ಪಣ್ಣ ಬಿರಾದಾರ ಅವರು ಕಳೆದ 49 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದು, ಮೂಲತಃ ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲೂಕಿನ ಮುಚಳಂಬ ಗ್ರಾಮದಿಂದ ಬಂದವರು. ತಂದೆ ವೀರಪ್ಪಣ್ಣ ಮತ್ತು ತಾಯಿ ಗುಮಡಮ್ಮನವರ ಮಗನಾಗಿ ಮುಚಳಂಬ ಗ್ರಾಮದಲ್ಲಿ ದಿನಾಂಕ 07.04.1950 ರಲ್ಲಿ ಜನಿಸಿದ ಇವರು ತಮ್ಮ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಣವನ್ನು ಮುಚಳಂಬ ಗ್ರಾಮದಲ್ಲಿಯೇ ಮುಗಿಸಿದರು. ಅತ್ಯಂತ ಬಡತನದ ಕುಟುಂಬದಲ್ಲಿ ಜನಿಸಿದ ಇವರಿಗೆ ಬಾಲ್ಯದಲ್ಲಿ ಅನುಭವಿಸಿದ ಬಡತನವೇ ಅವರು ಮುಂದೆ ಬಡವರ, ದೀನರ, ಅನಾಥರ ಕಷ್ಟದಲ್ಲಿ ಇರುವವರನ್ನು ಸ್ಪಂದಿಸಲಿಕ್ಕೆ ಕಾರಣ ಎನ್ನಬಹುದು. ಚಿಕ್ಕಂದಿನಲ್ಲೇ ತಂದೆ ತಾಯಿಯವರನ್ನು ಕಳೆದುಕೊಂಡು ಅಕ್ಕ ಕಮಲಾದೇವಿ ಮತ್ತು ನಾಲ್ಕು ಸಹೋದರರ ಆಶ್ರಯದಲ್ಲಿಯೇ ಇವರು ಬೆಳೆದರು. ಭಾಲ್ಕಿಗೆ ಬಂದು ಭಾಲ್ಕಿ ಮಠದ ಶ್ರೀಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಪ್ರವೇಶ ಪಡೆದು ಪ್ರವೇಶ ಶುಲ್ಕದ ಬದಲು ಮಠದಲ್ಲಿ ಕಸ ಹೊಡೆಯುವುದು, ನೀರು ಹಾಕುವುದು ಮುಂತಾದ ಸೇವೆ ಮಾಡುತ್ತಾ ಓದು ಮುಗಿಸಿದ ಇವರು. ಪೂಜ್ಯ ಚನ್ನಬಸವ ಪಟ್ಟದೇವರ ಕರುಣೆಗೆ ಪಾತ್ರರಾಗಿ ಚನ್ನಬಸವೇಶ್ವರ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದಿರುತ್ತಾರೆ. 1974ರಲ್ಲಿ ದೆಹಲಿಗೆ ಬಂದು ಮಾಜಿ ಉಪ ರಾಷ್ಟ್ರಪತಿಗಳ ಆಪ್ತ ಕಾರ್ಯದರ್ಶಿಯಾಗಿ ಸೇವೆ ಆರಂಭಿಸಿದರು. ನಂತರ ಮಾಜಿ ಉಪ ರಾಷ್ಟ್ರಪತಿ ಶ್ರೀ ಎಂ. ಹಿದಾಯಿತುಲ್ಲಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಶ್ರೀಮತಿ ಬಸವರಾಜೇಶ್ವರಿ, ರಸ್ತೆ ಮತ್ತು ಸಾರಿಗೆ ಮಂತ್ರಿ ಶ್ರೀ ರಾಜಶೇಖರ ಮೂರ್ತಿ, ಗ್ರಾಮೀಣ ಅಭಿವೃದ್ಧಿ ಮಂತ್ರಿ ಶ್ರೀ ಬಾಬಾಗೌಡ ಪಾಟೀಲ, ರಾಜ್ಯಸಭಾ ಡೆಪ್ಯೂಟಿ ಸ್ಪೀಕರ್ ಹಾಗೂ ಮಾಜಿ ಕೇಂದ್ರ ಸಚಿವ ಶ್ರೀ ಕೆ. ರೆಹಮಾನ್ ಖಾನ್, ಶ್ರೀ ಸುರೇಶ್ ಪಚೋರಿ (ಅಧ್ಯಕ್ಷರು, ಸಬ್ ಆರ್ಡಿನೇಟ್ ಲೆಜಿಸ್ಲೇಷನ್ ಸಮಿತಿ) ಹಾಗು ಮಾನವ ಸಂಪನ್ಮೂಲ ಮಂತ್ರಿ ಶ್ರೀ ಎಸ್.ಆರ್. ಬೊಮ್ಮಾಯಿ ಹೀಗೆ ಅನೇಕ ಕೇಂದ್ರ ಮಂತ್ರಿಗಳ ಅಧೀನದಲ್ಲಿ ಕೆಲಸ ಮಾಡಿರುತ್ತಾರೆ. ಪ್ರಸ್ತುತ ಇವರು ಮಾಜಿ ಕೇಂದ್ರ ಮಂತ್ರಿ ಮತ್ತು ಪ್ರಸ್ತುತ ಬಾಗಲಕೋಟೆ ಸಂಸದರಾದ ಶ್ರೀ ಪಿ.ಸಿ. ಗದ್ದೀಗೌಡರ್, ಮಾಜಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಿ ಮತ್ತು ದಾವಣಗೆರೆ ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ, ಮಾಜಿ ಕೇಂದ್ರ ಮಂತ್ರಿ ಮತ್ತು ವಿಜಯಪುರ ಸಂಸದರಾದ ಶ್ರೀ ರಮೇಶ ಜಿಗಜಿಣಗಿ ಮತ್ತು ಸೋಲಾಪುರ ಎಂಪಿ ಶ್ರೀ ದೇಶಿಕೇಶ್ವರ ಸ್ವಾಮೀಜಿಯವರ ಆಪ್ತ ಸಹಾಯಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ತನ್ನದೆನ್ನುವುದನ್ನು ಮರೆತು ಅನೇಕ ಕಡು ಬಡವರ ಹಿತೈಷಿಗಳಾಗಿ, ಕರ್ನಾಟಕದಿಂದ 300ಕ್ಕೂ ಹೆಚ್ಚು ಕುಟುಂಬಗಳನ್ನು ದೆಹಲಿಗೆ ಕರೆತಂದು ಅವರಿಗೆ ಉದ್ಯೋಗ ಪಡೆಯಲು ನೆರವು ನೀಡಿದುದಲ್ಲದೇ, ತಮ್ಮ ಮನೆಯಲ್ಲೇ ಇಟ್ಟುಕೊಂಡು ಅವರ ವಸತಿ ಊಟೋಪಾಚಾರವನ್ನೆಲ್ಲ ನೋಡಿಕೊಂಡಿದ್ದಾರೆ. ಇವರ ಸರಳತೆ, ಬಿಚ್ಚು ಹೃದಯ, ಪ್ರೀತಿ ವಿಶ್ವಾಸ, ಬಡವರ ಬಗ್ಗೆ ಇರುವ ಕಾಳಜಿ ಹಾಗೂ ನಿಷ್ಕಲ್ಮಷ ವ್ಯಕ್ತಿತ್ವ ಎಲ್ಲರ ಮನಸೂರೆಗೊಳ್ಳುತ್ತದೆ.

ಶ್ರೀ ವಿ.ವಿ. ಬಿರಾದಾರ ಅವರು ದೆಹಲಿಯಲ್ಲಿ ಅನೇಕ ಕನ್ನಡಪರ ಹಾಗೂ ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿರುವುದು ಗಮನಾರ್ಹವಾಗಿದೆ. ದೆಹಲಿ ಕನ್ನಡ ಶಾಲೆಯಲ್ಲಿ ಸಾರಿಗೆ ಸಂಪರ್ಕದ ಚೇರ್‌ಮ್ಯಾನ್ ಆಗಿ, ಪೇರೆಂಟ್ಸ್ ಟೀಚರ್ಸ್ ಸಮಿತಿ ಉಪಾಧ್ಯಕ್ಷರಾಗಿ, ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ, ಬಸವ ಬಳಗದ ಅಧ್ಯಕ್ಷನಾಗಿ, ಬಸವ ಇಂಟರ್‌ನ್ಯಾಷನಲ್ ಸೆಂಟರಿನ ಖಜಾಂಚಿಯಾಗಿ, ಕಾರ್ಯದರ್ಶಿಯಾಗಿ ಮತ್ತು ಉಪಾಧ್ಯಕ್ಷನಾಗಿ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯನಾಗಿ, ಪಿಕ್‌ನಿಕ್ ಸಮಿತಿ ಅಧ್ಯಕ್ಷನಾಗಿ, ಲೈಬ್ರೆರಿ ಮತ್ತು ಸಂಪನ್ಮೂಲ ಸಮಿತಿ ಸದಸ್ಯನಾಗಿ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಸ್ಥಾಪಿತವಾದ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿದ್ದಾರೆ.

ಕರ್ನಾಟಕದಿಂದ ಯಾರೇ ಬಂದರೂ ಸಂಸತ್ ಭವನ, ರಾಷ್ಟ್ರಪತಿ ಭವನ ವೀಕ್ಷಣೆಗೆ ಅನುವು ಮಾಡಿಕೊಟ್ಟು ತಾವು ರಜಾ ಹಾಕಿ ಅವರೊಂದಿಗೆ ಸಮಯ ನೀಡುವ ಪರಿಪಾಠ ಇವರದ್ದು. ಶ್ರೀ ವಿ.ವಿ. ಬಿರಾದಾರ ಅವರು ಛಲವಂತರು, ಕಠಿಣ ಪರಿಶ್ರಮಿಗಳು. ಸ್ವಂತ ಪರಿಶ್ರಮದಿಂದ ಹಳ್ಳಿಯಿಂದ ದೆಹಲಿಗೆ ಬಂದು ಸಂಸತ್ ಭವನದಲ್ಲಿ ಕೆಲಸ ಮಾಡಿದ ಧೀಮಂತರು. ಹಿಂದಿನ ರಾಷ್ಟ್ರಪತಿ ಶ್ರೀ ಗ್ಯಾನಿ ಜೈಲ್‌ಸಿಂಗ್ ಅವರಿಂದ ಪೂಜ್ಯ ಡಾ. ಚನ್ನಬಸವ ಪಟ್ಟದೇವರಿಗೆ ಸನ್ಮಾನ ಮಾಡಿಸಿದ ಕೀರ್ತಿ ಶ್ರೀ ವಿ.ವಿ. ಬಿರಾದಾರ ಅವರಿಗೆ ಸಲ್ಲುತ್ತದೆ.

ಶ್ರೀ ವಿ.ವಿ. ಬಿರಾದಾರ ಅವರು ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. 2007 ರಲ್ಲಿ ಡಾ. ಚನ್ನಬಸವ ಪಟ್ಟದೇವರ 118ನೇ ಜಯಂತೋತ್ಸವದಲ್ಲಿ ಡಾ. ಚನ್ನಬಸವ ಪಟ್ಟದೇವರು ಕಾಯಕ ಪ್ರಶಸ್ತಿ ಇವರಿಗೆ ಸಲ್ಲಿದೆ. ಅಲ್ಲದೇ ರೋಟರಿ ಕ್ಲಬ್ ಕೋರಮಂಗಲ ಮತ್ತು ನಾಗರಭಾವಿ ಅವರಿಂದ ಸನ್ಮಾನ, ದೆಹಲಿ ಕರ್ನಾಟಕ ಸಂಘದಿಂದ ಅಮೃತ ಮಹೋತ್ಸವದಲ್ಲಿ ಸನ್ಮಾನ, ಕನ್ನಡ ಭಾರತೀ ನವದೆಹಲಿಯಿಂದ ಸನ್ಮಾನ, ದೆಹಲಿ ಕನ್ನಡಿಗ ಪತ್ರಿಕೆಯಿಂದ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಸನ್ಮಾನ, 2022 ರ ರಾಜ್ಯೋತ್ಸವ ಸಂದರ್ಭ ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ವಾಣಿಜ್ಯ ತೆರಿಗೆಗಳ ಕನ್ನಡ ಸಂಘದಿಂದ ಸನ್ಮಾನವನ್ನು ಇವರು ಪಡೆದಿದ್ದಾರೆ.

ಶ್ರೀಯುತ ವಿ.ವಿ. ಬಿರಾದಾರ ಅವರ ಧರ್ಮಪತ್ನಿಯರು ಶ್ರೀಮತಿ ಶಾರದಾ / ಶ್ರೀಮತಿ ಉಷಾ ಇವರಿಗೆ ನಾಲ್ಕು ಮಕ್ಕಳು. ಪುತ್ರಿಯರು ಶ್ರೀಮತಿ ರಾಜೇಶ್ವರಿ ಬಿರಾದಾರ ಮತ್ತು ಶ್ರೀಮತಿ ಈಶ್ವರಿ ಬಿರಾದಾರ. ಪುತ್ರರು ಶ್ರೀ ಪ್ರಶಾಂತ್ ಬಿರಾದಾರ ಮತ್ತು ಶ್ರೀ ಪ್ರಸನ್ನ ಬಿರಾದಾರ ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಎಲ್ಲಾ ವಿದ್ಯಾವಂತರಾಗಿದ್ದಾರೆ. ದೆಹಲಿ ಕನ್ನಡ ಶಾಲೆಯಲ್ಲಿ ಓದಿದ ಇವರ ಮೊಮ್ಮಕ್ಕಳು ಇಂಜಿನಿಯರ್, ಡಾಕ್ಟರ್, ವಕೀಲರಾಗಿರುವುದು ಹೆಮ್ಮೆಯ ಸಂಗತಿ. ಇವರು ದೆಹಲಿಯಲ್ಲಿ ನೂರಾರು ಕುಟುಂಬಗಳಿಗೆ ಆಶ್ರಯ ನೀಡಿದ್ದಾರೆ, ಒಂದು ಪುಟ್ಟ ಬೀದರ ಜಿಲ್ಲೆಯನ್ನೇ ರಾಜಧಾನಿಯಲ್ಲಿ ನಿರ್ಮಿಸಿದಂತಹ ಕಾರ್ಯ ಮಾಡಿದ್ದಾರೆ. ತಾನೊಬ್ಬನೇ ಬೆಳೆದು ಶ್ರೀಮಂತನಾಗುವ ಬದಲು ತನ್ನಂತೆಯೇ ಇತರರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ ಇನ್ನೊಬ್ಬರ ಬದುಕು ಹಸನಾಗಬೇಕೆಂಬ ಕಳಕಳಿಯಿಂದ ನೂರಾರು ಕುಟುಂಬಗಳಿಗೆ ದೆಹಲಿಗೆ ಕರೆದುಕೊಂಡು ಬಂದು ಅವರಿಗೆ ಬದುಕಿನ ದಾರಿ ತೋರಿಸಿದ ಶ್ರೇಯಸ್ಸು ಶ್ರೀ ವಿ.ವಿ. ಬಿರಾದಾರ ಅವರಿಗೆ ಸಲ್ಲುತ್ತದೆ. ಬಡವರ ಕಷ್ಟಗಳಿಗೆ ತಕ್ಷಣವೇ ಸ್ಪಂದಿಸಿ ಅವರ ನೆರವಿಗೆ ಕಾರ್ಯತತ್ಪರರಾಗುವ ದೊಡ್ಡಗುಣ ಇವರದ್ದು.

ನವದೆಹಲಿಯ ಲಾಜಪತ್ ನಗರದ ಬಳಿ ಇರುವ ಶ್ರೀನಿವಾಸಪುರಿಯ ಸತ್ಯಜೀವನ ಕುಷ್ಟರೋಗ ಆಶ್ರಮದ ಕನ್ನಡಿಗರ ಸೇವೆಯಲ್ಲಿ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ, ಹಿರಿಯ ಕನ್ನಡಿಗರೂ ಆದ ಶ್ರೀ ವಿ.ವಿ. ಬಿರಾದಾರ ಅವರು ಸಂಘದ ಎಲ್ಲಾ ಕೆಲಸ ಕಾರ್ಯಗಳಿಗೆ ತಮ್ಮ ಬೆಂಬಲ ಸಹಕಾರ ಮತ್ತು ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ.

ಶ್ರೀಯುತರು ದೆಹಲಿ ಕರ್ನಾಟಕ ಸಂಘಕ್ಕೆ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಈ ಬಾರಿಯ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಶ್ರೀ ವಿ.ವಿ. ಬಿರಾದಾರ ಅವರಿಗೆ ಸಂಘವು ನೀಡಿ ಗೌರವಿಸುತ್ತಿದೆ. **ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮತವು ಹಾರ್ದಿಕ ಅಭಿನಂದನೆಯನ್ನು ಸಲ್ಲಿಸುತ್ತಿದೆ.**■

## ಸಂದೇಶ

ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 26/11/2023 ರಂದು ಶ್ರೀ ಸಿ.ಎಂ. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಕರೆಯೋಲೆ ನೋಡಿ ಸಂತೋಷವಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ಸಂಘಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿರುವ ಹಿರಿಯ ಮಹನೀಯರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನನ್ನಂತಹ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಗುರುತಿಸಿ ಅಭಿನಂದಿಸುತ್ತಿರುವುದು ನಮ್ಮ ಸಂಘದ ಹಿರಿಮೆಯಾಗಿದೆ. ದಿನಾಂಕ 8.11.23 ರಂದು ನಾನು ಬಿದ್ದು ಅಪಘಾತದಲ್ಲಿ ಕಾಲು ಮೂಳೆ ಮುರಿತದಿಂದ ಸಾವು ನೋವಿನ ನಡುವೆ ಒದ್ದಾಡಿದ ಸಂದರ್ಭದಲ್ಲಿ ಸಾರ್ವಜನಿಕರು, ಅಳಿಯ, ಮಕ್ಕಳು, ಮೊಮ್ಮಕ್ಕಳು, ಮಾನ್ಯ ಸಂಸದರಾದ ಶ್ರೀ ಪಿ.ಸಿ. ಗದ್ದಿಗೌಡರು, ಅವರ ಆಪ್ತ ಕಾರ್ಯದರ್ಶಿಯವರು ಸಹ ಬಂದು ನನಗೆ ಧೈರ್ಯ ತುಂಬಿದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ತಮ್ಮ ಅನೇಕ ಕೆಲಸದ ಒತ್ತಡದಲ್ಲಿ ಸಹಾ ಏಮ್ಸ್‌ಗೆ ಬಂದು ನನ್ನ ಈ ತುರ್ತು ಸಂದರ್ಭದಲ್ಲಿ ಎಲ್ಲ ಚಿಕಿತ್ಸೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಏಮ್ಸ್‌ನ ಟ್ರೊಮಾಸೆಂಟರ್‌ನಲ್ಲಿ ಆಪರೇಷನ್ ಸಫಲವಾಗಿ ಪ್ರೈವೇಟ್ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಾ ಈಗ ಗುಣಮುಖವಾಗುತ್ತಿದ್ದೇನೆ.

ಜೀವದ ಅಪಾಯದಿಂದ ಉಳಿಸಿದ ಎಲ್ಲ ಮಹನೀಯರಿಗೆ ದೇವರು ಸದಾ ಶಕ್ತಿಯನ್ನು ನೀಡಲಿ. ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಕೂಡಿ 'ವಿಶಿಷ್ಟ ಕನ್ನಡಿಗ'ರ ಪಟ್ಟಿಯಲ್ಲಿ ನನ್ನ ಹೆಸರು ಸೇರಿಸಿ ತೆಗೆದುಕೊಂಡ ನಿರ್ಧಾರಕ್ಕೆ ನಾನು ಆಭಾರಿಯಾಗಿದ್ದೇನೆ.

ಈ ಶುಭ ಸಂದರ್ಭದಲ್ಲಿ ಬರಲು ಆಗದಿರುವುದಕ್ಕೆ ಕ್ಷಮೆ ಕೇಳಿಕೊಳ್ಳುತ್ತೇನೆ. ಕರ್ನಾಟಕ ಸಂಘವು ಮೊದಲಿನಿಂದಲೂ ಅನೇಕ ಕನ್ನಡಪರ ಕೆಲಸಗಳನ್ನು ಮಾಡುತ್ತ ಬಂದಿದೆ. ಅದರಲ್ಲಿ ಶ್ರೀ ಸಿ.ಎಂ. ನಾಗರಾಜ ಅವರು ತಮ್ಮ ತಾರುಣ್ಯ ಅವಸ್ಥೆಯನ್ನು ಕನ್ನಡಕ್ಕಾಗಿ ಕನ್ನಡದ ನೆಲ, ಜಲ, ಭಾಷೆ ಮತ್ತು ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತವನ್ನು ದೆಹಲಿಯ ರಾಜಧಾನಿಯಲ್ಲದೆ ವಿಶ್ವದ ಮೂಲೆ ಮೂಲೆಗಳಲ್ಲಿಯೂ ಪಸರಿಸಿದ ಪ್ರಥಮ ವ್ಯಕ್ತಿ ಎಂದು ಹೇಳಬಹುದು. ಸುಮಾರು 23 ವರುಷಗಳು ನಿರಂತರವಾಗಿ ಸಂಘಕ್ಕೆ ದುಡಿದ ಅಧ್ಯಕ್ಷರಲ್ಲಿ ಮೊದಲಿಗರಾಗಿದ್ದಾರೆ. ಸಂಘದ ಹಿತಕ್ಕಾಗಿ ಕರ್ನಾಟಕ ಸರ್ಕಾರದಿಂದ ವರುಷಕ್ಕೆ 25 ಲಕ್ಷ ರೂಪಾಯಿಗಳ ಅನುದಾನ ಬರುವಂತೆ ಮಂಜೂರಾತಿ ಪಡೆಯಲು ಸಫಲರಾಗಿದ್ದಾರೆ. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವೆಯಲ್ಲಿ ದುಡಿದ ಕನ್ನಡಿಗರನ್ನು ಗುರುತಿಸಿ ಗೌರವ ಸನ್ಮಾನಗಳನ್ನು ಮಾಡುವುದು ಇವರ ಹಿರಿಯ ಗುಣವಾಗಿದೆ. ಬಡವ, ಶ್ರೀಮಂತ ಎಂಬ ಭೇದವಿಲ್ಲದೆ ಅವರವರ ಕಲಾ ಕೌಶಲ್ಯ ಕಂಡು ಇತ್ತೀಚೆಗೆ ಶ್ರೀಮತಿ ಸುಧಾ ಮೂರ್ತಿ ಹಾಗು ದಿವ್ಯಾಂಗ ಅನಾಥ ಮಕ್ಕಳಿಗೆ ಆದರದಿಂದ ಬರಮಾಡಿಕೊಂಡು ಅವರಿಗೆ ಸಂಘದಿಂದ ಗೌರವಾರ್ಪಣೆ ಸಲ್ಲಿಸಿದವರು. ದೆಹಲಿಯ ಜೆಎನ್‌ಯು ನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಕ್ಕೆ ಹೆಸರು ಇಡಿಸುವಲ್ಲಿ ತಮ್ಮ ಸತತ ಪ್ರಯತ್ನ ಮಾಡಿದ್ದಾರೆ. ಕರ್ನಾಟಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಭಾರತದ ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗು ಸಂಘದ ಅಮೃತ ಮಹೋತ್ಸವದ ಕಾರ್ಯಕಾಲದಲ್ಲಿ ಸಹ ನಮ್ಮ ನೆಚ್ಚಿನ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರನ್ನು ಕರೆಯಿಸಿ ವಿಶ್ವ ದಾಖಲೆ ಮಾಡಿದ ಕೀರ್ತಿ ಶ್ರೀ ಸಿ.ಎಂ. ನಾಗರಾಜ ಅವರಿಗೆ ಸಲ್ಲುತ್ತದೆ. **ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.** ■

***ವಿ.ವಿ. ಬಿರಾದಾರ***

# ಹೊರನಾಡ ಕನ್ನಡಿಗರಿಗೆ ಐತಿಹಾಸಿಕ ಕ್ಷಣ : ನವದೆಹಲಿಯಲ್ಲಿ ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ

## ಕನ್ನಡ ಮೊದಲು ಮನೆಯ ಮಾತಾಗಬೇಕು - ಸರ್ವಾಧ್ಯಕ್ಷೆ ಕುಮಾರಿ ಸುದೀತಿ ಅಂಬಳೆ

ಕನ್ನಡ ಬೆಳೆಯಬೇಕಾದರೆ ಮನೆಮನೆಯಲ್ಲಿ, ಜನಮನದಲ್ಲಿ ವ್ಯಾಪಕವಾದ ಮತ್ತು ಸ್ಥಾಯಿಯಾದ ಬದಲಾವಣೆ ಆಗಬೇಕು ಎಂದು ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆ ದೆಹಲಿಯ ಕುಮಾರಿ ಸುದೀತಿ ಅಂಬಳೆ ತಿಳಿಸಿದರು.

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಸಾರ್ಥಕ ದಶಮಾನೋತ್ಸವ ಆಚರಣೆ ಹಾಗೂ ದೆಹಲಿ ಘಟಕ ಆರಂಭಗೊಂಡು ಯಶಸ್ವಿಯಾಗಿ ಐದು ವರುಷಗಳನ್ನು ಪೂರೈಸಿರುವ ಅಂಗವಾಗಿ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಹಾಗೂ ದೆಹಲಿ ಘಟಕದ ಆಶ್ರಯದಲ್ಲಿ ದೆಹಲಿಯ ಲೋಧಿ ರಸ್ತೆ ಬಳಿ ಇರುವ ಶ್ರೀಸತ್ಯಸಾಯಿ ಸಭಾಂಗಣದಲ್ಲಿ 15.11.2023 ರಂದು ಆಯೋಜಿಸಿದ್ದ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿ ಈ ಜವಾಬ್ದಾರಿಯು ಸಮಾಜದ ಪ್ರತಿಯೊಬ್ಬರದ್ದಾಗಬೇಕು ಎಂದರು. ಇಂದು ನಾವು ಪಣತೊಟ್ಟು ಜನಾಂದೋಲನ ಮಾಡಿದ್ದೇ ಆದರೆ ಆ ಒಕ್ಕೊರಲಿನ ಧ್ವನಿಯು ಪರಿಣಾಮಕಾರಿಯಾಗಲಿದೆ. ಕಲಿಕೆ ಎನ್ನುವುದು ಕಲಿಸುವವರ ಮತ್ತು ಕಲಿಯುವವರ ಆಸಕ್ತಿಯನ್ನು ಅವಲಂಬಿಸಿದ್ದು ಈ ಆಸಕ್ತಿಯನ್ನು ಮಕ್ಕಳಲ್ಲಿ ಮೂಡಿಸುವುದು ಹೇಗೆ ಎನ್ನುವುದೇ ಹೊರನಾಡ ಕನ್ನಡಿಗರ ಮುಂದಿರುವ ಸವಾಲಾಗಿದೆ. ಇದರಲ್ಲಿ ಪೋಷಕರ ಪಾತ್ರವೇ ಮುಖ್ಯವೆಂದರು.

ಕನ್ನಡ ಮೊದಲು ಮನೆಯ ಮಾತಾಗಬೇಕು. ಹೊರನಾಡ ಕನ್ನಡದ ಮಕ್ಕಳಿಗೆ ಕನ್ನಡದ ಪುಸ್ತಕವನ್ನು ಓದಿ ಎಂದು ಒಮ್ಮೆಗೆ ಹೇಳಿದರೆ ಅದು ಹತ್ತಲಾಗದ ಬೆಟ್ಟದಂತೆ ಕಾಣುತ್ತದೆ. ಈ ಸಮಸ್ಯೆಗೆ ಪರಿಹಾರ ಖಂಡಿತ ಇದೆ. ಕನ್ನಡ ಓದಲು ತೊಂದರೆ ಇರಬಹುದು, ಆದರೆ ಅನುಭವಿಸಲು ಏನು ತೊಂದರೆ ಇಲ್ಲವಲ್ಲ; ಕಥೆ, ಪದ್ಯ, ಭಾವಗೀತೆ, ಜನಪದ ಗೀತೆ, ಹಾಸ್ಯಸಂಜೆ, ನಾಟಕಗಳು ಕನ್ನಡದ ಜ್ಞಾನ ಭಂಡಾರ ಮತ್ತು ಸೊಬಗನ್ನು ಹಂಚುತ್ತವೆ. ಇವೆಲ್ಲವನ್ನೂ ಅನುಭವಿಸುವ ಅವಕಾಶ ಒದಗಿಸಬೇಕು. ಪುಸ್ತಕ ಓದಲಾಗದಿದ್ದರೆ ಏನಂತೆ? ಕನ್ನಡ ಪ್ರಕಾಶಕರು ಮಕ್ಕಳ ಸಂಬಂಧಿತ ಆಡಿಯೋ ಪುಸ್ತಕಗಳನ್ನು ಹೊರ ತರಬೇಕೆಂದರು. ಕನ್ನಡ ಎಂದರೆ ಸಂತೋಷ ಮತ್ತು ಆನಂದದ ಅನುಭವ ಎನಿಸುತ್ತದೆ. ಈ ಹಂತದಲ್ಲಿ ಸ್ವಯಂ ಪ್ರೇರಣೆಯಿಂದ ಕನ್ನಡ ಕಲಿಯಲು, ಕಲಿಸಲು ಬಳಸಲು, ಬೆಳೆಸಲು ಮಕ್ಕಳೇ ಮುಂದಾಗುತ್ತಾರೆ. ಸರಕಾರ, ಸಮಾಜ, ಕನ್ನಡಪರ ಸಂಘಟನೆಗಳು, ಉದ್ಯಮಿಗಳು ಒಂದುಗೂಡಿ ನವಯುಗದ ಮಾಧ್ಯಮಗಳಲ್ಲಿ ಕೆಲಸ ಮಾಡುವ ಅಗತ್ಯವಿದೆ. ಮುಂದೊಂದು ದಿನ ತಾಯಿ ಭುವನೇಶ್ವರಿಗೆ ಜ್ಞಾನಪೀಠ ಪ್ರಶಸ್ತಿಯ ಕಿರೀಟ ಹಾಕಿಸುವ ಕುಡಿ ಹೊರನಾಡ ಕನ್ನಡಿಗರಲ್ಲಿ ಹುಟ್ಟಲೆಂದರು. ತಾಯಿ ಭುವನೇಶ್ವರಿಯ ಸೇವೆ ಮಾಡಲು ನಾವು ಕರ್ನಾಟಕದಲ್ಲಿ ಇರಬೇಕಿಲ್ಲ. ನಮ್ಮಲ್ಲಿ ಕರ್ನಾಟಕ ಇರಬೇಕು. ನಾವೇ ಕನ್ನಡದ, ಕರ್ನಾಟಕದ ರಾಯಭಾರಿಗಳಾಗಬೇಕು. ಕನ್ನಡ ಸಂಸ್ಕೃತಿ, ಭಾಷೆ ಸಾಹಿತ್ಯ ಕರ್ನಾಟಕದ ಗಡಿಗಷ್ಟೇ ಸೀಮಿತಗೊಳಿಸಬಾರದು, ಹೊರನಾಡಿಗೂ ಹರಡುವ ಸುವರ್ಣ ಅವಕಾಶ ನಮಗಿದೆ ಎಂದರು. ಭಾರತದ ಎಲ್ಲೆಡೆ ಕನ್ನಡದ ಮಕ್ಕಳಲ್ಲಿ ಕಲೆ, ಸಂಸ್ಕೃತಿಯನ್ನು ಬಿತ್ತುವ ಪ್ರಯತ್ನ ಮಾಡುತ್ತಿರುವ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಪವಿತ್ರ ಯಜ್ಞ ಕಾರ್ಯಕ್ಕೆ ಕರ್ನಾಟಕ ರಾಜ್ಯ ಸರಕಾರವು ಹೆಚ್ಚಿನ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸಬೇಕು ಹಾಗೂ ಕನ್ನಡಪರ ಕಾನೂನುಗಳನ್ನು ಸಕ್ರಿಯಗೊಳಿಸಬೇಕೆಂದು ವಿನಂತಿಸಿದರು.





ಕನ್ನಡ ಮಕ್ಕಳು ನಾಡಗೀತೆ ಹಾಡುವುದರೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಉದ್ಘಾಟಿಸಿದ ವೈದ್ಯ ಸಾಹಿತಿ ಡಾ. ನಾ. ಸೋಮೇಶ್ವರ ಅವರು ಮಾತನಾಡಿ ಕನ್ನಡ ಭಾಷೆಗೆ 5000 ವರ್ಷಗಳ ಇತಿಹಾಸವಿದೆ ಎಂಬುದಕ್ಕೆ ವೈಜ್ಞಾನಿಕ ಆಧಾರವಿದೆ. ನ್ಯಾನೋ ತಾಂತ್ರಿಕತೆ ಆವಿಷ್ಕಾರವಾಗಿದ್ದು ಕನ್ನಡಿಗರಿಂದ ಕೇವಲ ಅಂಕಿಗಳನ್ನು ಬಳಸಿ ಮಹಾಕಾವ್ಯ ರಚಿಸಿದ ಕೀರ್ತಿ ಕನ್ನಡಿಗರದ್ದು. ಮಕ್ಕಳ ಮೇಲೆ ಪೋಷಕರು ತಮ್ಮ ಆಶೋತ್ತರಗಳನ್ನು ಹೇರಬಾರದೆಂದರು. ಇಂದಿನ ಮಕ್ಕಳಿಗೆ ಕನ್ನಡ ಭಾಷೆಯ ಇತಿಹಾಸ, ಸಾಂಸ್ಕೃತಿಕ ಹಿರಿಮೆ, ಸಾಹಿತ್ಯ ಸಮೃದ್ಧಿಯ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು. ಮಕ್ಕಳು ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದು, ಮೊಬೈಲ್ ಬಳಕೆಯು ಚಟ ಮತ್ತು ರೋಗವಾಗುತ್ತಿದ್ದು ಇದನ್ನು ಗುಣಪಡಿಸಲು ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಪ್ರತ್ಯೇಕ ವಿಭಾಗವನ್ನೇ ತೆರೆಯಲಾಗಿದೆ. ಪೋಷಕರು ಇದರ ಬಗ್ಗೆ ಎಚ್ಚರ ವಹಿಸಬೇಕು. ಇಂದಿನ ತಾಂತ್ರಿಕ ವ್ಯವಸ್ಥೆಯಲ್ಲಿ ವ್ಯಾಸಂಗಕ್ಕೆ ಮೊಬೈಲ್ ಕೂಡ ಅವಶ್ಯಕತೆ ಇರುವುದರಿಂದ ಒಂದು ನಿರ್ದಿಷ್ಟ ಅವಧಿಯಲ್ಲಿ ಮಕ್ಕಳಿಗೆ ಮೊಬೈಲ್ ನೀಡಿ, ಜಾಗೃತಿಯನ್ನು ಮೂಡಿಸುವ ಕೆಲಸವಾಗಬೇಕು ಎಂದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಹಾಗೂ ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯಅವರು ಮಾತನಾಡಿ ಮಕ್ಕಳೇ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ವೇದಿಕೆ ಇದಾಗಬೇಕೆಂದರು. ವಿಧಾನ ಪರಿಷತ್ತಿನ ಮಾಜಿ ಶಾಸಕ ಶ್ರೀ ಎಂ.ಎ. ಗೋಪಾಲಸ್ವಾಮಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಅವರು ಗೌರವ ಉಪಸ್ಥಿತರಿದ್ದರು. ಪರಿಷತ್ತಿನ ದೆಹಲಿ ಘಟಕದ ಗೌರವಾಧ್ಯಕ್ಷ ಶ್ರೀ ಪಿ. ಜಯರಾಜ್, ಸಹ ಅಧ್ಯಕ್ಷರುಗಳಾದ ಕು. ನೂತನ ಕೈಕಾಡೆ, ಕು. ರಕ್ಷಿತ ಕಾಶೀನಾಥ ರಾಮತೀರ್ಥ, ಕು. ಸ್ವಾತಿ ನಾಯ್ಕ್, ಕು. ರಕ್ಷಿತಾ ಮತ್ತು ಕು. ವೆಂಕಟೇಶ್ ಕುಲಕರ್ಣಿ ವೇದಿಕೆ ಮೇಲೆ ಉಪಸ್ಥಿತರಿದ್ದರು.ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷ ಶ್ರೀ ಅರವಿಂದ ಬಿಜ್ಜೈ ಅವರು ಸಮ್ಮೇಳನಕ್ಕೆ ಆಗಮಿಸಿದ್ದ ಅತಿಥಿಗಳನ್ನು ಹಾಗು ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಪರಿಷತ್ತಿನ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎನ್. ಅಶೋಕ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಸಿ.ಎಸ್. ಅರುಣ್ ಆಶಯ ನುಡಿಗಳನ್ನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಭವಾನಿ ಲೋಕೇಶ್ ಅವರು ಬಹಳ ಸುಂದರವಾಗಿ ನಿರ್ವಹಿಸಿದರು. ಈ ಸಮ್ಮೇಳನಕ್ಕೆ ದೆಹಲಿ ಕರ್ನಾಟಕ ಸಂಘವು ಸಂಪೂರ್ಣ ಸಹಕಾರ ಮತ್ತು ಬೆಂಬಲ ನೀಡಿತ್ತು.ದೆಹಲಿ ಕನ್ನಡ ಶಾಲೆಯು ಸಹಕಾರ ಕೊಟ್ಟಿತ್ತು.

ಕರ್ನಾಟಕ ಸರ್ಕಾರದ ಅಬಕಾರಿ ಸಚಿವರಾದ ಶ್ರೀ ಆರ್.ಬಿ. ತಿಮ್ಮಾಪುರ ಅವರು ಮಾತನಾಡಿ ಸಂಬಂಧದ ಬೆಸುಗೆ ಈ ಸಮ್ಮೇಳನದಿಂದ ಗಟ್ಟಿಯಾಗಿದೆ. ಗ್ರಾಮೀಣ ಭಾಗದ ಕಲೆಗಳ ಪುನರುತ್ಥಾನ ಆಗಬೇಕು. ಅವುಗಳನ್ನು ಉಳಿಸುವ ಕೆಲಸ ಸರ್ಕಾರದಿಂದಲೂ ಆಗಬೇಕು. ಮುಖ್ಯಮಂತ್ರಿಯೊಂದಿಗೆ ಈ ಬಗ್ಗೆ ಮಾತನಾಡಿ ಪರಿಷತ್ತಿಗೆ ಶಾಶ್ವತ ಅನುದಾನಕ್ಕಾಗಿ ಒತ್ತಾಯಿಸಲಾಗುವುದು ಎಂದರು.

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಸಿ.ಎನ್. ಬಾಲಕೃಷ್ಣ ಅವರು ಮಾತನಾಡುತ್ತಾ ಸಾಹಿತ್ಯದ ಬೇರುಗಳನ್ನು ಗಟ್ಟಿಗೊಳಿಸಲು ಮಕ್ಕಳ ಸಾಹಿತ್ಯ ಪರಿಷತ್ತು ಪೂರಕವಾಗಿ ಕೆಲಸ ಮಾಡುತ್ತಿದೆ. ಸರಕಾರದ ಸಹಭಾಗಿತ್ವದಲ್ಲಿ ಇಂತಹ ಸಮ್ಮೇಳನಗಳು ನಡೆಯುವಂತಾಗಬೇಕು. ಸರ್ಕಾರದಿಂದ ಅನುದಾನ ನೀಡಿ ಅನುಕೂಲ ಮಾಡಿ ಕೊಡವ ಬಗ್ಗೆ ಮುಖ್ಯಮಂತ್ರಿಗಳಿಗೆ

ಮನವಿ ಮಾಡಲಾಗುವುದು, ಪ್ರಾಪಂಚಿಕ ತಾಪಮಾನ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪುಸ್ತಕದ ಅಭಿರುಚಿ ಜೊತೆಗೆ ಪರಿಸರ ಅಭಿರುಚಿ ಬೆಳೆಸಿಕೊಳ್ಳಬೇಕು, ವ್ಯಾಕರಣಬದ್ಧವಾದ ಕನ್ನಡಕ್ಕೆ ಒತ್ತು ಕೊಡಬೇಕು, ಕೈ ಬರವಣಿಗೆ ಮೂಲಕ ಬರೆಯುವುದನ್ನು ರೂಢಿಸಿಕೊಳ್ಳಬೇಕು, ಮಕ್ಕಳ ಸಾಹಿತ್ಯ ಪರಿಷತ್ತಿನ ಮೂಲಕ ಕನ್ನಡ ಉಳಿಯುವಿಕೆಯನ್ನು ಕಾಣಬಹುದು ಎಂದರು.

ವಿಧಾನ ಪರಿಷತ್ ಮಾಜಿ ಶಾಸಕ ಶ್ರೀ ಎಂ.ಎ. ಗೋಪಾಲಸ್ವಾಮಿ ಅವರು ಕನ್ನಡದ ಮುಂದಿನ ಕವಿಯತ್ರಿ, ಸಾಹಿತಿಗಳನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಮಕ್ಕಳ ಸಾಹಿತ್ಯ ಪರಿಷತ್ ಘಟಕಕ್ಕೆ ಶಾಶ್ವತ ಅನುದಾನದ ಅಗತ್ಯ ಇದೆ. ಈ ನಿಟ್ಟಿನಲ್ಲಿ ಸಿಎಂ ಬಳಿ 25 ಲಕ್ಷ ರೂಪಾಯಿ ಅನುದಾನಕ್ಕೆ ಮನವಿ ಮಾಡಲಾಗುವುದು ಎಂದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿಎಂ ನಾಗರಾಜ ಮತ್ತು ಮಾಜಿ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ತಮ್ಮ ಅನಿಸಿಕೆಗಳನ್ನ ಹಂಚಿಕೊಂಡರು. ಆಗಮಿಸಿದ್ದ ಅತಿಥಿಗಳಿಗೆ ಗೌರವ ಸಮರ್ಪಣೆ ಮಾಡಲಾಯಿತು. ಪರಿಷತ್ತಿನ ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ ಅವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.ಪರಿಷತ್ತಿನ ರಾಜ್ಯಾಧ್ಯಕ್ಷ ಶ್ರೀ ಸಿ.ಎನ್. ಅಶೋಕ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮಾರೋಪ ಸಮಾರಂಭದ ನಿರೂಪಣೆಯನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ನಡೆಸಿಕೊಟ್ಟರು. ಪರಿಷತ್ತಿನ ಸಂಘಟನಾ ಕಾರ್ಯದರ್ಶಿ ಶ್ರೀ ಯಲ್ಲಾಲಿಂಗ ಕೊಪ್ಪದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಚುಂಚಶ್ರೀಗಳು ಮಾತನಾಡಿ ಜಗತ್ತಿನಲ್ಲಿ ಬದಲಾಗಿಸಲಾಗದ್ದು ಮಾತ್ರ ಮತ್ತು ಮಾತೃಭಾಷೆ, ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವ ಪ್ರಜ್ಞಾಪೂರ್ವಕ ಜವಾಬ್ದಾರಿ ಪೋಷಕರ ಮೇಲಿದ್ದು, ಚಿಕ್ಕಂದಿನಿಂದಲೇ ಅಭಿವ್ಯಕ್ತ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಬೇಕು, ಬಾಲ್ಯದಿಂದಲೇ ಮಕ್ಕಳಿಗೆ ಸಂಸ್ಕಾರಯುತವಾದ ಶಿಕ್ಷಣ ನೀಡುವುದರ ಜೊತೆಗೆ ಪ್ರಭುತ್ವ ವ್ಯಕ್ತಿತ್ವ ರೂಪಿಸುವ ಜವಾಬ್ದಾರಿಯೂ ಪೋಷಕರದ್ದು, ಅವರ ಮನಸ್ಸನ್ನು ಸಂಕುಚಿತಗೊಳಿಸದೇ, ಆತ್ಮವಿಶ್ವಾಸ ಹೆಚ್ಚಿಸಿ, ವಿಶ್ವಮಾನವರನ್ನಾಗಿಸಬೇಕು, ಮಕ್ಕಳಿಗೆ ಸಾಧ್ಯವಾದಷ್ಟು ಸಾಹಿತ್ಯ, ನೃತ್ಯ, ಸಂಗೀತ ಕಲಿಸಿದರೆ ಅವರ ಬದುಕು ಮಂಗಳಕರವಾಗುತ್ತದೆ. ಜಗದ್ಗುರು ಶ್ರೀ ಡಾ. ಬಾಲಗಂಗಾಧರನಾಥ ಮಹಾ ಸ್ವಾಮೀಜಿಯವರ ಆಶ್ರಯದಲ್ಲಿ ಆರಂಭಗೊಂಡ ಈ ಮಕ್ಕಳ ಸಾಹಿತ್ಯ ಪರಿಷತ್ತು, ಶ್ರೀ ಸಿ.ಎನ್. ಅಶೋಕ್ ಅವರ ನೇತೃತ್ವದಲ್ಲಿ ತನ್ನ ಪರಿಕಲ್ಪನೆಯನ್ನು ಮುಂದುವರಿಸುತ್ತಾ ಕನ್ನಡದ ಹಿರಿಮೆಯನ್ನು ರಾಜಧಾನಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷೆ ಕು. ಸುದೀತಿ ಅಂಬಳೆ ಹಾಗೂ ಸಹ ಅಧ್ಯಕ್ಷೆ ಕು. ರಕ್ಷಿತಾ ಸಮ್ಮೇಳನ ಕುರಿತು ಮಾತನಾಡಿದರು. ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷ ಶ್ರೀ ಅರವಿಂದ ಬಿಜ್ಜೈ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಸಾಹಿತಿ ಹಾಗು ರಾಜ್ಯಸಭಾ ಸದಸ್ಯರಾದ ಡಾ. ಎಲ್. ಹನುಮಂತಯ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಜಂಟಿ ನಿರ್ದೇಶಕರೂ ಹಾಗೂ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಶ್ರವಣಬೆಳಗೊಳ ಶಾಸಕ ಶ್ರೀ ಸಿ.ಎನ್. ಬಾಲಕೃಷ್ಣ, ಕರ್ನಾಟಕ ವಿಧಾನ ಪರಿಷತ್ ಮಾಜಿ ಸದಸ್ಯ ಶ್ರೀ ಎಂ.ಎ. ಗೋಪಾಲಸ್ವಾಮಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಪರಿಷತ್ತಿನ ಗೌರವಾಧ್ಯಕ್ಷ ಶ್ರೀ ಪಿ. ಜಯರಾಜ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಮಾರೋಪ ಭಾಷಣವನ್ನು ಮಕ್ಕಳ ಸಾಹಿತಿಗಳಾದ ಪ್ರೊ. ಕೃಷ್ಣಮೂರ್ತಿ ಬಿಳಿಗೆರೆ ಮಾಡಿದರು. ಪರಿಷತ್ತಿನ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಸಿ.ಎಸ್. ಅರುಣ್ ವಂದನಾರ್ಪಣೆ ನಡೆಸಿಕೊಟ್ಟರು.

ಅತಿಥಿಗಳಿಗೆ ಮತ್ತು ಗಣ್ಯರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಸಾಧನೆ ಮಾಡಿದ ಪ್ರತಿಭಾನ್ವಿತ ಚಿಣ್ಣರಿಗೆ ವಿಶೇಷ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಪರಿಷತ್ತಿನ ಕೇಂದ್ರ ಸಮಿತಿಯ ಪದಾಧಿಕಾರಿಗಳನ್ನು ಮತ್ತು ದೆಹಲಿ ಘಟಕದ ಪದಾಧಿಕಾರಿಗಳನ್ನು ಅಭಿನಂದನಾ ಪತ್ರ ಹಾಗು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು.

ಈ ಸಮ್ಮೇಳನಕ್ಕೆ ಕನ್ನಡ ನಾಡಿನಿಂದ, ಹೊರರಾಜ್ಯಗಳಾದ ಹರಿಯಾಣ, ರಾಜಸ್ಥಾನ, ಮಹಾರಾಷ್ಟ್ರ ಕೇರಳ ರಾಜ್ಯಗಳು ಸೇರಿದಂತೆ ಕರ್ನಾಟಕ ರಾಜ್ಯದಿಂದ ಉತ್ತಮ ಸಂಖ್ಯೆಯಲ್ಲಿ ನೂರಾರು ಪ್ರತಿಭಾನ್ವಿತ ಮಕ್ಕಳು, ಕನ್ನಡಿಗರು, ಬಾಲ ಕಲಾವಿದರು, ಪ್ರಸಿದ್ಧ ಸಾಹಿತಿಗಳು, ಗಣ್ಯಾತಿಗಣ್ಯರು, ಪರಮ ಪೂಜ್ಯರು, ಪರಿಷತ್ತಿನ ವಿವಿಧ ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು, ಹಿಂದಿನ ಮಕ್ಕಳ ಸಾಹಿತ್ಯ ಸಮ್ಮೇಳನಗಳ ಸರ್ವಾಧ್ಯಕ್ಷರು ಪಾಲ್ಗೊಂಡಿದ್ದರು.

ಕು. ಪ್ರೀತಮ್ ಕಲಬುರ್ಗಿಯವರ ಗುಲಾಬಿ ಹೂವು, ಕು. ನಂದಿತಾ ಉಭಾಳೆ ಅವರ ಕ್ರೇಜಿ ಸ್ಟೋರೀಸ್ ಸ್ವರಚಿತ ಕಥಾ ಸಂಕಲನ ಮತ್ತು ಮಕ್ಕಳ ಸಾಹಿತಿ ಡಾ.ರಾಜೇಂದ್ರ ಎಸ್. ಗಡಾದ ಅವರ ಚಿಣ್ಣರ ಚಿಲಿಪಿಲಿ ಮಕ್ಕಳ ಸಚಿತ್ರ ಕವಿತಾ ಸಂಕಲನ, ಹತ್ತು ಹತ್ತು ಇಪ್ಪತ್ತು ಸಚಿತ್ರ ಶಿಶುಪ್ರಾಸಗಳ ಸಂಕಲನಗಳು ಬಿಡುಗಡೆಗೊಂಡವು.

ಸಮ್ಮೇಳನ ಕಾರ್ಯಕ್ರಮಕ್ಕೆ ಮುನ್ನ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಬೆಳಗ್ಗೆ 8:00 ಗಂಟೆಗೆ ನವದೆಹಲಿ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಶ್ರೀನಿವಾಸ್ ವರ್ಖೆಡಿ ಅವರಿಂದ ರಾಷ್ಟ್ರಧ್ವಜಾರೋಹಣ ನಡೆಸಲಾಯಿತು. ಪರಿಷತ್ತಿನ ಕೇಂದ್ರ ಸಮಿತಿ ಮತ್ತು ದೆಹಲಿ ಘಟಕದ ಪದಾಧಿಕಾರಿಗಳು ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಪದಾಧಿಕಾರಿಗಳು, ಸದಸ್ಯರು ಈ ಸಂದರ್ಭ ಉಪಸ್ಥಿತರಿದ್ದರು. ಆಗಮಿಸಿದವರೆಲ್ಲರಿಗೂ ಬೆಳಗಿನ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಿಂದ ಹೊರಟ ಭವ್ಯವಾದ, ವರ್ಣರಂಜಿತವಾದ ಮೆರವಣಿಗೆಗೆ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಸಿ.ಎನ್ ಬಾಲಕೃಷ್ಣ ಅವರು ಚಾಲನೆ ನೀಡಿದರು. ಲೋಧಿ ರಸ್ತೆಯಲ್ಲಿರುವ ಶ್ರೀ ಸತ್ಯಸಾಯಿ ಸಭಾಂಗಣದವರೆಗೂ ಇದ್ದ ಸುಮಾರು ಒಂದು ಕಿಲೋಮೀಟರ್ ಉದ್ದದ ಸಾಲು ಪಥದಲ್ಲಿ ಕನ್ನಡ ಬಾವುಟವನ್ನು ಹಿಡಿದ ಮಕ್ಕಳು ಕನ್ನಡ ನಾಡಿನ ಗಣ್ಯರ ವೇಷ ಧರಿಸಿ ಹಾಗೂ ಕನ್ನಡ ಗೀತೆಗಳನ್ನು ಹಾಡುವ ಮೂಲಕ ಮೆರುಗು ನೀಡಿದರು. ಶಾಲೆಯ ಆವರಣದಿಂದ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಆರಂಭಗೊಂಡು ಸಮ್ಮೇಳನಾಧ್ಯಕ್ಷೆ ದೆಹಲಿಯ ಸುದಿತಿ ಅಂಬಳೆ, ಸಹ ಅಧ್ಯಕ್ಷರಾದ ನೂತನ ಕೈಕಾಡೆ, ಕೇರಳದ ಸ್ವಾತಿ ನಾಯಕ್, ಮಹಾರಾಷ್ಟ್ರ ದ ರಕ್ಷಿತಾ ಕಾಶೀನಾಥ ರಾಮತೀರ್ಥ, ಕರ್ನಾಟಕದ ರಕ್ಷಿತಾ, ವೆಂಕಟೇಶ ಕುಲಕರ್ಣಿ ಅವರು ಜೋಡಿ ಕುದುರೆ ಸಾರೋಟಿನಲ್ಲಿ ಸಾಗಿದರೆ, ಸೇರಿದಂತಹ ಗಣ್ಯರೆಲ್ಲರೂ ಮಕ್ಕಳೊಂದಿಗೆ ಹೆಜ್ಜೆ ಹಾಕಿದರು. ಕನ್ನಡದ ಬಾವುಟ ಹಿಡಿದ ವಿದ್ಯಾರ್ಥಿಗಳು ಡೊಳ್ಳು ಕುಣಿತ, ಹುಲಿ ವೇಷ ಕುಣಿತ, ಕೋಲಾಟ, ಸೋಮನಕುಣಿತ, ರಂಗ ಕುಣಿತ ಜನಪದನೃತ್ಯ ಹಾಗೂ ವಿವಿಧಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ 1 ಕಿ.ಮೀ. ಕ್ರಮಿಸಿ ಶ್ರೀ ಸತ್ಯಸಾಯಿ ಸಭಾಂಗಣದ ತಲುಪಿದರು. ಸಮ್ಮೇಳನ ವೇದಿಕೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಉದ್ಘಾಟನಾ ಕಾರ್ಯಕ್ರಮದ ನಂತರ ನಡೆದ ಕವಿಗೋಷ್ಠಿಯಲ್ಲಿ ಪಾಲ್ಗೊಂಡ ಮಕ್ಕಳು : ಸೃಜನ್ ರಂಗನಾಥ್, ಶಿಖಾ ಫಾಳೆ, ಕೀರ್ತನ್ ಪಿ., ಧನ್ವಿನ್ ಹೆಚ್., ಪವಿತ್ರ, ವಿಧಿ ಕೊಠಾರಿ, ನಿಂಬಾಳ, ಸೃಷ್ಟಿ ಪೂಜಾರಿ, ಹರ್ಷಿತ್ ಆರ್., ಹುಮೇರ, ಅಂಜುಂ, ಲಕ್ಷಿತಾ ಸಿ. ಆರ್., ಸನ್ವಿತ್ ಸುವರ್ಣ, ಸ್ನೇಹಾ ಎಸ್., ಸುಜಿತ್ ಪಾಟೀಲ್, ಕಾರ್ತಿಕ್ ಕೆ., ಕೀರ್ತನಾ ಕಟ್ಟಿಮನಿ, ವೀರ್ ನರಶೆಟ್ಟಿ, ಹರ್ಷಿತಾ ಉಭಾಳೆ, ಪ್ರೇಮ್ ಲದ್ದೆ, ಸಾರಿಕಾ, ಅನ್ಮೋಲ್ ತಲ್ವಾರ್, ಎ.ಬಿ. ಆನಂದಿ ಗೌಡ, ಶ್ರೀಯಾ ಚಂದ್ರ, ಸಿ.ಆರ್. ಚೇತನ್, ಪ್ರೇರಣಾ ವೈದ್ಯ, ಮಧುಸೂದನ್ ಪೂಜಾರಿ, ಸೌಮ್ಯಾ ಎಸ್., ಸುಮಂತ್, ಎ.ಬಿ. ವಿಕಾಸ ಗೌಡ, ಸಿಂಚನಾ ವೈ ನಾಯ್ಕ್, ತನ್ವಿ ಎನ್.ಕೆ., ಪಿಯೂಷ್ ಕುಲಕರ್ಣಿ, ವಾಣಿ ಬೆನ್ನೂರು, ಶ್ರೇಯಾಶ್ರೀ, ಆದಿತ್ಯ ತಲ್ವಾರ್, ಪ್ರೀತಮ್ ಜಿ., ಸುಮಂತ್ ಪ್ರಶಾಂತ್ ಸಿಂಗ್, ಸುಮೇದ ಸಂತೋಷ ಜಹಗಿದಾರ, ರಕ್ಷಿತಾ ಶರಣಪ್ಪ ಪುಲಾರಿ, ಗಂಗೋತ್ರಿ ನಾಗಯ್ಯ ಮಠಪತಿ, ಕೌಶಲ್ ಆರ್. ಆಚಾರ್ಯ, ಕುಶಾಲ್ ಆರ್ ಸೇರಿದಂತೆ ಒಟ್ಟಾರೆ 42 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಾಹಿತಿ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ರಮೇಶ್ ಅರೋಲಿ ಅವರು ಕವಿಗೋಷ್ಠಿಯ ಸಮನ್ವಯಕಾರರಾಗಿದ್ದರು. ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಸಮ್ಮೇಳನದ ಸಹ ಅಧ್ಯಕ್ಷರಾದ ಕು. ಸ್ವಾತಿ ನಾಯ್ಕ್ ವಹಿಸಿದ್ದರು.

ಸಾಹಿತ್ಯ ಸಮ್ಮೇಳನ ಅಂದಮೇಲೆ ವಿಚಾರಗೋಷ್ಠಿಗಳಿಗೆ ಒಂದು ವಿಶಿಷ್ಟ ಪ್ರಾಧಾನ್ಯತೆ ಇದ್ದೇ ಇದೆ. ಮಕ್ಕಳಿಗೂ ಅವರದೇ ಮಿತಿಯಲ್ಲಿ ತಮ್ಮ ಪ್ರತಿಭೆಯನ್ನು ಕಂಪಿಸುವ ಅವಕಾಶ ನೀಡುತ್ತಾ ಹಮ್ಮಿಕೊಂಡಿದ್ದ ಎರಡು ವಿಚಾರಗೋಷ್ಠಿಗಳಲ್ಲಿ ಮೊದಲನೆಯದ್ದರ ವಿಷಯ ಇಂದಿನ ಮಕ್ಕಳ ಸಾಹಿತ್ಯ ಒಲವು ಮೇಲೆ ಆದರಿಸಿದ್ದಾಗಿತ್ತು. ಈ ವಿಚಾರಗೋಷ್ಠಿಯಲ್ಲಿ ಒಟ್ಟಾರೆ ನಾಲ್ವರು ಪುಟಾಣಿಗಳು ತಮ್ಮ ವಿಚಾರಗಳನ್ನು ಮಂಡಿಸಿದರು.

ವಿಚಾರಗೋಷ್ಠಿ-1ರ ಅಧ್ಯಕ್ಷತೆಯನ್ನು ಸಮ್ಮೇಳನದ ಸಹ ಅಧ್ಯಕ್ಷೆಯಾದ ದೆಹಲಿಯ ಕುವರಿ ನೂತನ ಕೈಕಾಡೆಯವರು ವಹಿಸಿದ್ದರು. ಶಿವಮೊಗ್ಗ ಜಿಲ್ಲೆಯ ಕು. ಸುಮಂತ್ ಅವರು ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಬೆಳವಣಿಗೆಗೆ ಸವಾಲುಗಳು ಮತ್ತು ಸಾಧ್ಯತೆಗಳು ಎಂಬ ವಿಷಯದಲ್ಲಿ ನಿರರ್ಗಳವಾಗಿ ತರ್ಕ ಮಂಡಿಸಿದರು.

ಬಳಿಕ ಮಾತನಾಡಿದ ಚಿತ್ರದುರ್ಗ ಜಿಲ್ಲೆಯ ಕು. ಸಾನ್ವಿ ಬಿ.ಎಂ. ಹೆಚ್ಚುತ್ತಿರುವ ಆಧುನಿಕತೆಯಲ್ಲಿ ಮಕ್ಕಳಿಗೆ ಇರಬೇಕಾದ ಸಂಸ್ಕೃತಿ-ಸಂಸ್ಕಾರಗಳ ಮೌಲ್ಯಗಳು ಬಗ್ಗೆ ತಮ್ಮ ವಾದವನ್ನು ಪ್ರಸ್ತಾಪಿಸಿದರು. ಇವರಿಬ್ಬರ ಟಿಪ್ಪಣಿಗಳ ಮೇಲೆ ಖ್ಯಾತ ಕವಯತ್ರಿ ಶ್ರೀಮತಿ ಮಮತಾ ಅರಸೀಕೆರೆಯವರು ಸಮನ್ವಯ ನಡೆಸಿ ವಿಶ್ಲೇಷಣೆಗೈದರು. ಗದಗ ಜಿಲ್ಲೆಯ ಕು. ಪ್ರೀತಿ ಆರ್.ಜಿ. ಅವರು ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಸರಕಾರ ಮತ್ತು ಪೋಷಕರ ಪಾತ್ರದ ಬಗ್ಗೆಯೂ ಹಾಗೂ ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುತ್ತಿರುವ ಮೊಬೈಲ್ ವಿಷಯದಲ್ಲಿ ಕು. ಅನನ್ಯ ಬಿ.ಎಸ್. ಬೆಂಗಳೂರು ಅವರೂ ತಮ್ಮ ತಮ್ಮ ವಿಚಾರ ಮಂಡನೆಯನ್ನು ಪ್ರಕಟಪಡಿಸಿದರು. ಇಬ್ಬರೂ ಮಂಡಿಸಿದ್ದ ವಿಚಾರಗಳನ್ನು ಶಿಕ್ಷಕರೂ ಮತ್ತು ಪರಿಷತ್ತಿನ ಶಿವಮೊಗ್ಗ ಜಿಲ್ಲಾಧ್ಯಕ್ಷರಾದ ಶ್ರೀ ರವಿರಾಜ್ ಸಾಗರ್ ಅವರು ಸಮನ್ವಯಗೊಳಿಸುತ್ತಾ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದರು. ಕು. ಶ್ರೇಯಾ ಹೆಚ್. ತೇಲಿ ಎಲ್ಲರನ್ನೂ ವಿಚಾರಗೋಷ್ಠಿಗೆ ಸ್ವಾಗತಿಸಿದರು ಕು. ಸೃಜನ್ ಆರ್ ಅಚ್ಚುಕಟ್ಟಾಗಿ ನಿರೂಪಣೆ ನಿರ್ವಹಿಸಿದರು. ಕು. ಕೀರ್ತನ್ ಪಿ. ವಂದನೆಗಳನ್ನು ಅರ್ಪಿಸಿದರು.

ಮಧ್ಯಾಹ್ನದ ಭೋಜನ ವಿರಾಮದ ನಂತರ ಎರಡನೇ ವಿಚಾರಗೋಷ್ಠಿ ನಡೆಯಿತು. ಪರಿಸರ, ವಿಜ್ಞಾನ, ಸಂಶೋಧನೆ ಮತ್ತು ಜಾನಪದ ನಾಡುನುಡಿ ಕುರಿತಾಗಿ ಏರ್ಪಡಿಸಲಾದ ವಿಚಾರಗೋಷ್ಠಿ –2 ರಲ್ಲಿ ಧಾರವಾಡ ಜಿಲ್ಲೆಯ ಕು. ಪಲ್ಲವಿ ದೇವನಗೌಡ್ರ ಅವರು 'ಮುಂದಿನ ಪೀಳಿಗೆಗಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ' ಎನ್ನುವ ವಿಷಯದ ಮೇಲೆ ವಿಚಾರ ಮಂಡನೆ

**ಪುಟ : 27ಕ್ಕೆ ಮುಂದುವರಿಯುವುದು**

# ಗುರುಗಾಂವ್ ಕನ್ನಡ ಸಂಘದ ವತಿಯಿಂದ ಭವ್ಯವಾದ "ರಾಜ್ಯೋತ್ಸವ" ಆಚರಣೆ





ಹರಿಯಾಣ ರಾಜ್ಯದ ಗುರುಗಾಂವ್‌ನಲ್ಲಿ ವಾಸವಾಗಿರುವ ಕನ್ನಡಿಗರು "ಗುರುಗಾಂವ್ ಕನ್ನಡ ಸಂಘವನ್ನು" ಕಟ್ಟಿ ಬೆಳಸಿ ಕಳೆದ ಎರಡು ದಶಕಗಳಿಂದ ಕರ್ನಾಟಕ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದ್ದಾರೆ.

ಅದೇ ತರಹ ಈ ವರ್ಷವೂ ಸಹ ದಿನಾಂಕ 19.11.2023ರ ಭಾನುವಾರದಂದು ಗುರುಗಾಂವ್ ನಗರದ Excelsior American ಶಾಲೆಯ ಸಭಾಂಗಣದಲ್ಲಿ ಸುಮಾರು 300ಕ್ಕೂ ಹೆಚ್ಚು ಕನ್ನಡಿಗರ ಮಧ್ಯೆ ದೆಹಲಿ ಕರ್ನಾಟಕ ಸಂಘದ ಸಂಪೂರ್ಣ ಸಹಕಾರದಿಂದ ರಾಜ್ಯೋತ್ಸವವನ್ನು ಆಚರಿಸಲಾಯಿತು. ತುಂಬಿದ ಸಭಾಂಗಣದ ವೇದಿಕೆಗೆ ಮುಖ್ಯ ಅತಿಥಿಗಳನ್ನು ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ. ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಅವರು ಆದರದಿಂದ ಬರಮಾಡಿಕೊಂಡರು.

ಮುಖ್ಯ ಆತಿಥಿಗಳಾಗಿ ಶ್ರೀಮತಿ ವಂಘದನಾ ಗುರ್ನಾನಿ ಐಎಎಸ್, ಅಪರ ಮುಖ್ಯ ಕಾರ್ಯದರ್ಶಿಗಳು (ಸಮನ್ವಯ) ಕರ್ನಾಟಕ ಭವನ, ನವದೆಹಲಿ, ಹಿರಿಯ ಐಪಿಎಸ್ ಅಧಿಕಾರಿಗಳಾದ ಶ್ರೀ ಎನ್. ರಾಜಶೇಖರ, ಡಿಐಜಿ, ಬ್ಯುರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ (BPRAD) ನವದೆಹಲಿ ಮತ್ತು ಕೇಂದ್ರ ಮಂತ್ರಿಗಳ ಅಪ್ತ ಕಾರ್ಯದರ್ಶಿಗಳಾದ ಶ್ರೀ ಅಮರೇಶ್ ಪಾಟೀಲ್, ಐಆರ್‌ಎಸ್ ಅವರು ಭಾಗವಹಿಸಿ ಕಾರ್ಯಕ್ರಮದ ಹಿರಿಮೆಯನ್ನು ಹೆಚ್ಚಿಸಿದರು.

ಗುರುಗಾಂವ್ ಕನ್ನಡ ಸಂಘದ ಸದಸ್ಯ ಮತ್ತು ಮಾಜಿ ಕಾರ್ಯದರ್ಶಿ ಶ್ರೀ ಸಂತೋಷ ಜೆ ಅವರು ಮುಖ್ಯ ಅತಿಥಿಗಳನ್ನು ಮತ್ತು ಸಭಾಂಗಣದಲ್ಲಿ ಉಪಸ್ಥಿತರಿದ್ದವರೆಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿ, ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಗುರುಗಾಂವ್ ಕನ್ನಡ ಸಂಘವು ಆಚರಿಸಿಕೊಂಡು ಬರುತ್ತಿರುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಬಗ್ಗೆ ವಿವರಗಳನ್ನು ನೀಡಿ, ಕನ್ನಡ ಧ್ವಜದ ಹಳದಿ ಮತ್ತು ಕೆಂಪು ಬಣ್ಣಗಳ ವೈಶಿಷ್ಟ್ಯತೆಯನ್ನು ತಿಳಿಸಿದರು.

ಆಗಮಿಸಿದ್ದ ಮುಖ್ಯ ಅತಿಥಿಗಳು ಮತ್ತು ವೇದಿಕೆಯಲ್ಲಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ. ಹಾಗು ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಅವರು ತಾಯಿ ಭುವನೇಶ್ವರಿ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿಸುವ ಮೂಲಕ ವಿಧ್ಯುಕ್ತ ಚಾಲನೆ ನೀಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಐಎಎಸ್ ಪರೀಕ್ಷೆ ಬರೆಯಲು ದೆಹಲಿಗೆ ಬರುವ ಕನ್ನಡಿಗರಿಗೆ ದೆಹಲಿ, ಗುರುಗಾಂವ್ ಅಥವಾ ನೋಯ್ಡಾದಲ್ಲಿ ಒಂದು ವಸತಿ ನಿಲಯ ಕಟ್ಟುವ ತಮ್ಮ ಸಂಘದ ಭವಿಷ್ಯದ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿದರು ಹಾಗು ಗುರುಗಾಂವ್ ಕನ್ನಡ ಸಂಘದ ಜೊತೆ ದೆಹಲಿ ಕರ್ನಾಟಕ ಸಂಘದ ಸಹಕಾರ ಸದಾ ಇರುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಶ್ರೀಮತಿ ವಂದನಾ ಗುರ್ನಾನಿ ಅವರು ಮಾತನಾಡಿ ತಾವು ದೆಹಲಿಯಲ್ಲಿ ಹುಟ್ಟಿ ಯಾವ ತರಹ ಕನ್ನಡ ಕಲಿತದ್ದನ್ನು ತಿಳಿಸುತ್ತಾ, ನವದೆಹಲಿಯ ಕರ್ನಾಟಕ ಭವನದ ಅಧಿಕಾರಿಯಾಗಿ ಕೆಲಸ ಮಾಡುವಾಗ ಆದ ಕೆಲವು ಅನುಭವಗಳನ್ನು ಹಂಚಿಕೊಂಡರು. ದೆಹಲಿ ಸುತ್ತಮುತ್ತ ಇರುವ ಕನ್ನಡಪರ ಸಂಘ ಸಂಸ್ಥೆಗಳಿಗೆ ತಮ್ಮ ಕೈಲಾದ ಸಹಾಯ ಮಾಡುವ ಭರವಸೆ ನೀಡಿದರು ಹಾಗು ಹಂಸಲೇಖ ಅವರ ಗೀತೆಯ ಸಾಲುಗಳನ್ನು ನೆನಪಿಸಿಕೊಂಡು ನಮ್ಮ ಕನ್ನಡ ಕಸ್ತೂರಿ ಕನ್ನಡ ಎಂದು ಸಂತೋಷದಿಂದ ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿ ಶ್ರೀ ಎನ್. ರಾಜಶೇಖರ್ ಅವರು ಮಾತನಾಡಿ ಹೊರನಾಡಿನಲ್ಲಿ ಅದರಲ್ಲೂ ಹರಿಯಾಣದ ಗುರುಗ್ರಾಮದಲ್ಲಿ ಕನ್ನಡ ಸಂಘವನ್ನು ಕಟ್ಟಿ ಈ ತರಹ ಕನ್ನಡ ಬೆಳೆಸುವ ಕಾರ್ಯವನ್ನು ಶ್ಲಾಘಿಸಿದರು. ಇನ್ನೋರ್ವ ಮುಖ್ಯ ಅತಿಥಿ ಶ್ರೀ ಅಮರೇಶ್ ಪಾಟೀಲ್ ಅವರು ಮಾತನಾಡಿ ಕರ್ನಾಟಕದ ಉದಯದ ಬಗ್ಗೆ ಕನ್ನಡ ಭಾಷೆ ಬೆಳೆದ ರೀತಿ ಮತ್ತು ಮೈಸೂರು ರಾಜ್ಯದ ಹೆಸರು ಹೇಗೆ ಕರ್ನಾಟಕ ವಾಯಿತು ಎನ್ನುವುದರ ಹಿನ್ನಲೆ ಮತ್ತು ಮಾಹಿತಿ ಹಂಚಿಕೊಂಡರು.

ಶ್ರೀ ಆರ್. ರೇಣುಕುಮಾರ್ ಅವರು ಮಾತನಾಡುತ್ತಾ ರಾಜ್ಯೋತ್ಸವದ ಈ ಕಾರ್ಯಕ್ರಮದಲ್ಲಿ ಮೈಸೂರು ಸಂಸ್ಥಾನದ ಮಹಾರಾಜರನ್ನು ನೆನಪಿಸಿಕೊಳ್ಳುವುದು ಅಗತ್ಯ, ಏಕೆಂದರೆ ಆಂಗ್ಲರ ಜೊತೆ ಹೊಂದಾಣಿಕೆ ಮಾಡಿಕೊಂಡು ರಾಜ್ಯದ ಅಭಿವೃದ್ಧಿಯನ್ನು ಅತ್ಯಂತ ವೇಗದಲ್ಲಿ ಮಾಡಿದವರು ಆ ಮಹಾಪುರುಷರು. ಅನಂತರ ಬಂದ ಕರ್ನಾಟಕ ರಾಜ್ಯ ಸರಕಾರಗಳು ಸಹಾ ಕನ್ನಡದ ಅಭಿವೃದ್ಧಿಗೆ ಬೇಕಾದಷ್ಟು ಕೆಲಸ ಮಾಡಿವೆ ಎಂದು ತಿಳಿಸಿದರು.

ಶ್ರೀ ಕೃಷ್ಣಪ್ಪ ಎಂ ಮಾತನಾಡುತ್ತಾ ಕರ್ನಾಟಕದ ಉದಯ ಯಾವ ತರಹ ಆಯಿತು ಮತ್ತು ಅದರ ಹಿಂದೆ ಇರುವ ಮಹಾನ್ ವ್ಯಕ್ತಿಗಳು ಮತ್ತು ಅವರ ಕೊಡುಗೆಯ ಬಗ್ಗೆ ತಿಳಿಸುತ್ತಾ ಗುರುಗಾಂವ್ ಕನ್ನಡ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಸ್ಥಳೀಯ ಮಕ್ಕಳು ಅದ್ಭುತವಾಗಿ ನೃತ್ಯ ಪ್ರದರ್ಶನ ಮಾಡಿದರು, ಪುರುಷರು ಮತ್ತು ಮಹಿಳಾ ಗಾಯಕರು ಇಂಪಾಗಿ ಕನ್ನಡದ ಹಾಡುಗಳನ್ನು ಹಾಡಿದರು. ಗುರುಗಾಂವ್ ಕನ್ನಡ ಸಂಘದ ಉಪಾಧ್ಯಕ್ಷೆ ಶ್ರೀಮತಿ ಮಾಲ ರಮೇಶ್ ಸ್ಥಳೀಯ ಕಲಾವಿದರ ಕಾರ್ಯಕ್ರಮ ನಿರೂಪಿಸಿದರು.

ಗುರುಗ್ರಾಮದಲ್ಲಿ ನೆಲೆಸಿರುವ ಕನ್ನಡಿಗ ಶ್ರೀ ಗಣೇಶ ಉಪಾಧ್ಯಾಯ ಅವರು ಇಲ್ಲಿನ ಕನ್ನಡಿಗರಿಗೆ ಮತ್ತು ಗುರುಗಾಂವ್ ಕನ್ನಡ ಸಂಘಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಅವರಿಗೆ ಈ ವರ್ಷದ 'ಗುರುಗಾಂವ್ ಸೇವಾ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಅವರ ಪರಿಚಯವನ್ನು ಶ್ರೀ ಲಕ್ಷ್ಮಣ ಕಟ್ಟಿಮನಿ ಅವರು ಮಾಡಿಕೊಟ್ಟರು. ಶ್ರೀ ಗಣೇಶ ಉಪಾಧ್ಯಾಯ ಅವರು ತಾವು ಗುರುಗಾಂವ್ ನಗರದಲ್ಲಿ ಬಂದು ನೆಲೆಸಿದ ನಂತರ ತಮ್ಮ ವೃತ್ತಿ ಜೀವನದ ಹಾಗೂ ವೈಯಕ್ತಿಕ ಜೀವನದ ಅನುಭವಗಳನ್ನು ಹಂಚಿಕೊಂಡು, ತಮಗೆ ಪ್ರಶಸ್ತಿ ನೀಡಿದ್ದಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು.

ಆಗಮಿಸಿದ್ದ ಎಲ್ಲಾ ಮುಖ್ಯ ಅತಿಥಿಗಳಿಗೆ ಗುರುಗಾಂವ್ ಕನ್ನಡ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು. ಗುರುಗಾಂವ್ ಕನ್ನಡ ಸಂಘದಿಂದ 2023ರ ಸಾಲಿನಲ್ಲಿ 10 ಮತ್ತು 12 ನೇಯ ತರಗತಿಯಲ್ಲಿ 90% ಕ್ಕೂ ಅಧಿಕ ಅಂಕಗಳನ್ನು ಪಡೆದ ಗುರುಗ್ರಾಮ ಕನ್ನಡಿಗರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕರ್ನಾಟಕದಿಂದ ಬಂದಿದ್ದ ಹೊನ್ನಾವರದ ಶ್ರೀ ರಮೇಶ್ ಮೇಸ್ತ ಅವರ ಓಷಿಯನ್ ಹಾರ್ಟ್ ಬ್ರೇಕರ್ಸ್ ತಂಡದ ಕಲಾವಿದರು ಅಮೋಘವಾದ ನೃತ್ಯಗಳನ್ನು ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಶ್ರೀ ಗಣೇಶ ಅವರು ಗಂಡು ಮತ್ತು ಹೆಣ್ಣಿನ ಧ್ವನಿಯಲ್ಲಿ ಹಾಡಿದ ಹಾಡುಗಳು ಪ್ರೇಕ್ಷಕರ ಮನಸೂರೆಗೊಂಡವು. ಡಬ್ಬಲ್ ಡೆಕ್ಕರ್ ನೃತ್ಯಗಾರ ಶ್ರೀ ಅಶೋಕ ಅವರು ಮಾಡಿದ ನೃತ್ಯಗಳು ಅದ್ವಿತೀಯವಾಗಿದ್ದವು. ಶ್ರೀ ಜಗದೀಶ್ ಗೌಡ ಅವರು ಈ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆಯನ್ನು ಸುಂದರವಾಗಿ ನಿರ್ವಹಿಸಿದರು.

ಗುರುಗಾಂವ್ ಕನ್ನಡ ಸಂಘದ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ್ ನಿಲೂರ ಅವರು ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಅವರು ಮುಖ್ಯ ಅತಿಥಿಗಳಿಗೆ, ವೇದಿಕೆ ಮೇಲಿದ್ದ ಗಣ್ಯರಿಗೆ ಮತ್ತು ಸಭಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನು ತಿಳಿಸಿದರು.

ಗುರುಗಾಂವ್ ಕನ್ನಡ ಸಂಘದ ಖಜಾಂಚಿ ಶ್ರೀ ಮರಿಬಸಪ್ಪ ಎಂ, ಉಪಾಧ್ಯಕ್ಷರುಗಳಾದ ಶ್ರೀ ರಾಜಕುಮಾರ ನಿಲೂರ ಮತ್ತು ಶ್ರೀಮತಿ ಮಾಲ ರಮೇಶ್ ಜಂಟಿ ಕಾರ್ಯದರ್ಶಿ ಶ್ರೀ ಲಕ್ಷ್ಮಣ ಕಟ್ಟಿಮನಿ ಹಾಗು ಸದಸ್ಯರು ಶ್ರೀಯುತರಾದ ಗೋಪಾಲ ತಲ್ವಾರ್, ಶರಣಬಸಪ್ಪ , ರಾಜಶೇಖರ ಪಾಟೀಲ್, ಚಂದ್ರಶೇಖರ ಕೆ, ಗಿರೀಶ್ ಕುಲಕರ್ಣಿ, ಸಿದ್ದು ಸಾಹುಕಾರ್ ಅಪ್ಪಸಾಬ್ ಗೋಟೆ, ಶ್ರೀಮತಿ ಸುನಂದಾ ದರ್ಗಾ ಮತ್ತು ಶ್ರೀಮತಿ ಭಾರತಿ ತಿಮ್ಮಪ್ಪ ಅವರೆಲ್ಲರೂ ಬಹಳವಾಗಿ ಶ್ರಮಿಸಿ ಈ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದರು.

ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು, ದೆಹಲಿ ಎನ್‌ಸಿಆರ್ ನಿಂದ ಉತ್ತಮ ಸಂಖ್ಯೆಯಲ್ಲಿ ಆಗಮಿಸಿದ್ದ ಕನ್ನಡಿಗರು ಕಾರ್ಯಕ್ರಮದ ಯಶಸ್ಸಿನಲ್ಲಿ ಭಾಗಿಯಾದರು. ಮಲಬಾರ್ ಗೋಲ್ಡ್ ಕಂಪನಿಯವರು ಪ್ರಾಯೋಜಿಸಿದ ಲಕ್ಕಿಡಿಪ್ ಡ್ರಾ ನಲ್ಲಿ ವಿಜೇತರಿಗೆ ಬಹುಮಾನ ವಿತರಣೆಯೊಂದಿಗೆ ರಾಜ್ಯೋತ್ಸವ ಕಾರ್ಯಕ್ರಮ ಸಂಪನ್ನವಾಯಿತು.

ಸಮಸ್ತ ದೆಹಲಿ ಎನ್‌ಸಿಆರ್ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.■

***ಚಂದ್ರಶೇಖರ ಜೋಳದರಾಶಿ***
ಪ್ರಧಾನ ಕಾರ್ಯದರ್ಶಿ
ಗುರುಗಾಂವ್ ಕನ್ನಡ ಸಂಘ

# ನವದೆಹಲಿಯ ಕರ್ನಾಟಕ ಭವನದ ವತಿಯಿಂದ 68ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ



ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ 68ನೇ ಕರ್ನಾಟಕ ರಾಜ್ಯೋತ್ಸವವನ್ನು ಬಹಳಷ್ಟು ಸಂತೋಷ, ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ನವದೆಹಲಿಯ ಕರ್ನಾಟಕ ಭವನ ಶರಾವತಿಯಲ್ಲಿ ದಿನಾಂಕ 1ನೇ ನವೆಂಬರ್, 2023 ರ ಬುಧವಾರರಂದು ಬೆಳಗ್ಗೆ 9.00 ಗಂಟೆಗೆ ಶ್ರೀ ಪ್ರಕಾಶ್ ಬಿ. ಹುಕ್ಕೇರಿ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳು, ನವದೆಹಲಿ ಇವರು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಕರ್ನಾಟಕ ಭವನದ ಶ್ರೀಮತಿ ವಂದನಾ ಗುರ್ನಾನಿ, ಭಾ.ಆ.ಸೇ., ಅಪರ ಮುಖ್ಯ ಕಾರ್ಯದರ್ಶಿಗಳು (ಸಮನ್ವಯ), ಶ್ರೀಮತಿ ಎಂ. ಇಮ್‌ಕೊಂಗ್ಲ ಜಮೀರ್, ಭಾ.ಆ.ಸೇ, ನಿವಾಸಿ ಆಯುಕ್ತರು, ಶ್ರೀಮತಿ ಆಕೃತಿ ಬನ್ಸಾಲ್, ಭಾ.ಆ.ಸೇ., ಅಪರ ನಿವಾಸಿ ಆಯುಕ್ತರು, ಹಾಗೂ ನಿವಾಸಿ ಆಯುಕ್ತರವರ ಕಛೇರಿಯ ಮತ್ತು ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಕುಟುಂಬದವರುಗಳು 'ದೇವಿ ಭುವನೇಶ್ವರಿಗೆ ಪುಷ್ಪಾರ್ಚನೆ' ಹಾಗೂ 'ನಾಡಗೀತೆ'ಯನ್ನು ಹಾಡುವ ಮೂಲಕ ನೆರವೇರಿಸಲಾಯಿತು. ಕೆ.ಎಸ್.ಆರ್.ಪಿ. ತುಕಡಿ ನಡೆಸಿದ ಕವಾಯಿತು ಪ್ರಶಂಸನೀಯವಾಗಿತ್ತು. ಕರ್ನಾಟಕ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ನವದೆಹಲಿಯ ಕರ್ನಾಟಕ ಭವನವದಲ್ಲಿ ವೈದ್ಯಾಧಿಕಾರಿ ಆಗಿರುವ ಡಾ. ಟಿ. ಕಾರ್ತಿಕ್, ಎಂ.ಬಿ.ಬಿ.ಎಸ್., ಅವರ ನೇತೃತ್ವದಲ್ಲಿ 'ರಕ್ತದಾನ' ಹಾಗೂ 'ಉಚಿತ ನೇತ್ರ ತಪಾಸಣಾ ಶಿಬಿರ'ವನ್ನೂ ಸಹ ಆಯೋಜಿಸಲಾಗಿತ್ತು. ಕರ್ನಾಟಕ ಭವನದ ಸಿಬ್ಬಂದಿ ಮತ್ತು ಇತರರು ಈ ಬಾರಿ ಅತ್ಯಂತ ಉತ್ಸಾಹದಿಂದ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ಜ್ಯೋತಿ ಬೆಳಗಿಸಿ ನಾಡಗೀತೆ ಹಾಡುವ ಮೂಲಕ' ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಗಳು, ವಿಶೇಷ ಅತಿಥಿಗಳು, ಅತಿಥಿ ಗಣ್ಯರುಗಳು, ಅಧಿಕಾರಿಗಳು, ನೌಕರರು ಹಾಗೂ ದೆಹಲಿ ಕನ್ನಡಿಗರನ್ನು ಶ್ರೀ ನಾರಾಯಣ ಬಿ. ಅವರು ಕಾರ್ಯಕ್ರಮಕ್ಕೆ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಶ್ರೀ ಇ.ಎಂ. ಕೊಟ್ರೇಶ ಅವರು ಕನ್ನಡ ನಾಡು ನುಡಿ, ಕರ್ನಾಟಕ ರಾಜ್ಯೋತ್ಸವದ ಆಚರಣೆ ಕುರಿತಾದ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ಪ್ರಕಾಶ್ ಬಿ. ಹುಕ್ಕೇರಿ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳು , ನವದೆಹಲಿ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಕನ್ನಡ, ನಾಡು, ನುಡಿ, ನೆಲ, ಜಲ, ಭಾಷೆ ಹಾಗೂ ರಾಜ್ಯದ ಪ್ರಸ್ತಾವನೆಗಳನ್ನು ಇತ್ಯರ್ಥಪಡಿಸುವಲ್ಲಿ ಕರ್ನಾಟಕ ಭವನದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರುಗಳು ಸಹಕರಿಸುವಂತೆ ಹಾಗೂ ಭವನದ ಸಿಬ್ಬಂದಿಗಳ ಕುಂದುಕೊರತೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುತ್ತೇನೆಂದು ಭರವಸೆ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮದ ಪ್ರಾರಂಭದಲ್ಲಿ, ವಿಧೂಷಿ ಮಧುಶ್ರೀಯವರು 'ಗಣೇಶ ಸ್ತುತಿ'ಯ ಪ್ರಾರ್ಥನೆಯನ್ನು ನೃತ್ಯರೂಪಕದ ಮೂಲಕ ನಡೆಸಿಕೊಟ್ಟರು. ನಂತರ, ಮಕ್ಕಳ ವೇಶಭೂಷಣ, ಮಕ್ಕಳ ನೃತ್ಯ, ಕರ್ನಾಟಕ ಭವನದ ಸಿಬ್ಬಂದಿಗಳಿಂದ ಗಾಯನ, ಯಕ್ಷಗಾನ ನೃತ್ಯ ಹಾಗೂ ಕಾಂತಾರ ನೃತ್ಯ ರೂಪಕಗಳು ನೆರೆದಿದ್ದ ಎಲ್ಲಾ ಸಭಿಕರ ಪ್ರಶಂಸೆಗೆ ಪಾತ್ರವಾದವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಈ ಕಾರ್ಯಕ್ರಮಕ್ಕೆ ನಿಯೋಜಿಸಲಾಗಿದ್ದ ಸಾಂಸ್ಕೃತಿಕ ತಂಡದವರಾದ ಶ್ರೀ ಲಕ್ಷ್ಮಣ್ ನೆಲಸೊಗಡು ಮತ್ತು ವಿಧೂಷಿ ಮಧುಶ್ರೀ ಅವರುಗಳು ಭವನದ ಸಿಬ್ಬಂದಿ ಮತ್ತು ಮಕ್ಕಳಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ನೃತ್ಯ ರೂಪಕಗಳ ತರಬೇತಿ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಕರ್ನಾಟಕ ರಾಜ್ಯೋತ್ಸವಕ್ಕೆ ಪೂರ್ವಾನ್ವಯವಾಗಿ ನಡೆಸಿದ ಆಟೋಟ ಸ್ಪರ್ಧೆಗಳಲ್ಲಿ ಈ ಬಾರಿ ಭವನದ ಸಿಬ್ಬಂದಿಗಳು, ಕುಟುಂಬದವರು, ಮಕ್ಕಳು ಅತ್ಯುತ್ಸಾಹದಿಂದ ಭಾಗವಹಿಸಿದ್ದರು. ಸರಿ ಸುಮಾರು 300 ಕ್ಕೂ ಹೆಚ್ಚು ಪ್ರಶಸ್ತಿ ವಿಜೇತರಿಗೆ ಶ್ರೀ ಡಿಕ್ಸನ್ ಡಿ'ಸೋಜಾ ಅವರ ನಿರ್ವಹಣೆಯಲ್ಲಿ ಬಹುಮಾನ ವಿತರಣೆ ಮಾಡಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಧರ್ಮರಾಜ್ ಮತ್ತು ದೇವರಾಜ್ ಅವರು ಸುಂದರವಾಗಿ ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀ ಬಿ.ವಿ. ರಾಘವೇಂದ್ರ, ವ್ಯವಸ್ಥಾಪಕರು, ಕರ್ನಾಟಕ ಭವನ, ನವದೆಹಲಿ ಇವರು ಕರ್ನಾಟಕ ರಾಜ್ಯೋತ್ಸವ ಆಚರಣೆ ಸಂಬಂಧ ಪೂರ್ವಾನ್ವಯವಾಗಿ ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಇವರು ರಚಿಸಿದ ಕ್ರೀಡಾ ಸಮಿತಿ, ಅಲಂಕಾರ ಸಮಿತಿ, ಸಾಂಸ್ಕೃತಿಕ ಸಮಿತಿ, ಪ್ರಚಾರ ಸಮಿತಿ, ಊಟೋಪಚಾರ ಸಮಿತಿಗಳ ಸಂಯೋಜಕರುಗಳು ಹಾಗೂ ತಂಡದ ಎಲ್ಲಾ ಸದಸ್ಯರುಗಳು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾಗಿದ್ದುದನ್ನು ಈ ಸಂದರ್ಭದಲ್ಲಿ ಶ್ಲಾಘಿಸುತ್ತಾ, ಈ ಬಾರಿಯ ಆಟೋಟ ಸ್ಪರ್ಧೆಗಳನ್ನು ನಡೆಸಲು ಮೈದಾನದ ವ್ಯವಸ್ಥೆ ಮಾಡಿಕೊಟ್ಟ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ, ಮಿತ್ರರಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಲು ಸಭಾಂಗಣ ವ್ಯವಸ್ಥೆ ಮಾಡಿಕೊಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಹಾಗು ಪದಾಧಿಕಾರಿಗಳಿಗೆ, ನೆರೆದಿದ್ದ ಎಲ್ಲಾ ಕನ್ನಡ ಮನಸುಗಳಿಗೆ, ಮಾಧ್ಯಮ ಮಿತ್ರರೂ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ 'ವಂದನಾರ್ಪಣೆ' ಸಲ್ಲಿಸುವುದರ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಈ ಬಾರಿ ಮೈಸೂರಿನ ಬಾಣಸಿಗರಿಂದ ಕರ್ನಾಟಕ ಶೈಲಿಯ ವಿವಿಧ ಭಕ್ಷಗಳನ್ನೊಳಗೊಂಡ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಈ ವಿಶೇಷ ರಾತ್ರಿ ಊಟವನ್ನು ಸವಿದ ಎಲ್ಲರೂ ಸಂಭ್ರಮಿಸಿದರು.■



*ಎಸ್. ರಮೇಶ*

# ಜನಕಪುರಿ ಮಹಿಳಾ ಮಂಡಳಿಯಿಂದ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ ಆಚರಣೆ

ದಿ. 27.11.2023 ರಂದು ನಡೆದ ನವೆಂಬರ್ ತಿಂಗಳಿನ ಮಾಸಿಕ ಸಭೆಯಲ್ಲಿ ಜನಕಪುರಿ ಮಹಿಳಾ ಮಂಡಳಿ ಕನ್ನಡತಿಯರು ನಮ್ಮ ನಾಡಹಬ್ಬವಾದ ಕರ್ನಾಟಕ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಮಾಸಿಕ ಸಭೆ ಆಯೋಜಿಸಿದ ಶ್ರೀಮತಿ ಅನುಪಮಾ ಆನಿಖಿಂಡಿ ಅವರ ಸ್ವಗೃಹದಲ್ಲಿ, ತಾಯಿ ಭುವನೇಶ್ವರಿಯನ್ನು ವಂದಿಸಿ, ಕನ್ನಡ ಧ್ವಜಾರೋಹಣದೊಂದಿಗೆ, ನಾಡಗೀತೆಯನ್ನು ಹಾಡಿ ಹರ್ಷ ಉಲ್ಲಾಸದಿಂದ ಆಚರಿಸಲಾಯಿತು. ರಾಜ್ಯೋತ್ಸವದ ಅಂಗವಾಗಿ ಶ್ರೀಮತಿ ಅಶ್ವಿನಿ ಹನಮಸಾಗರ್ ಅವರ ನೇತೃತ್ವದಲ್ಲಿ ವಿಶೇಷವಾದ ಧ್ಯಾನ ಮತ್ತು ಯೋಗದ ಅಭ್ಯಾಸದ ಕಾರ್ಯಕ್ರಮ ಹಮ್ಮಿಕ್ಕೊಳ್ಳಲಾಗಿತ್ತು. ಇದೇ ಸಕಾರಾತ್ಮಕವಾದ ಪರಿಸರದಲ್ಲಿ ಸೋಮವಾರದ ಕಾರ್ತಿಕ್ ಹುಣ್ಣಿಮೆಯ ದಿನ ಶಿವ ಆರಾಧನೆ ಭಜನೆಯಿಂದ ಅಂಗಳವು ಭಕ್ತಿರಸದಲ್ಲಿ ಮೊಳಗಿತ್ತು.




ಹೊರನಾಡು ಕನ್ನಡತಿಯರು ವಿವಿಧ ಕಾರ್ಯಕ್ಷೇತ್ರಗಳಲ್ಲಿ ಉಚ್ಚ ಸ್ಥಾನಗಳಲ್ಲಿ ವೃತ್ತಿಪರರಾಗಿದ್ದರೂ ಸಹ ಜನಕಪುರಿ ಮಹಿಳಾ ಮಂಡಳಿಗೆ ಕಳೆದ 35 ವರ್ಷಗಳಿಂದ ಗಣನೀಯ ಸೇವೆ ಸಲ್ಲಿಸಿದ್ದಾರೆ. 68ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸುಸಂಧರ್ಭದಲ್ಲಿ ಮಾಜಿ ಖಜಾಂಚಿಗಳಾದ ಶ್ರೀಮತಿ ಉಮಾ ರಾವ್, ಶ್ರೀಮತಿ ಡಾ. ರೂಪಶ್ರೀ, ಶ್ರೀಮತಿ ಲಾವಣ್ಯ ಬಸವರಾಜು, ಶ್ರೀಮತಿ ಡಾ. ಸಾಯಿಪ್ರಶಾಂತಿ ಶೆಟ್ಟಿ, ಶ್ರೀಮತಿ ಜಯಶ್ರೀ ಬಸವರಾಜು ಹಾಗೂ ಶ್ರೀಮತಿ ರೇಣುಕಾ ಸಾವಕಾರ ಇವರನ್ನು ಅಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಲ್ಹಾದ ಹಾಗೂ ಕಾರ್ಯದರ್ಶಿ ಶ್ರೀಮತಿ ನಯನಾ ಮಾನಕಾಪುರೆ ಅವರು ಮಹಿಳಾ ಮಂಡಳಿಯ ಪರವಾಗಿ ಶಾಲು ಹೊದಿಸಿ ಗೌರವಿಸಿ ಸನ್ಮಾನಿಸಿದರು. ಪ್ರತಿಯೊಬ್ಬ ಮಾಜಿ ಖಜಾಂಚಿಯರು ಮಹಿಳಾ ಮಂಡಳಿಗೆ ಕೊಟ್ಟ ಸೇವೆ, ನೀಡಿದ ಕೊಡುಗೆ ಬಗ್ಗೆ ಕಾರ್ಯದರ್ಶಿ ಶ್ರೀಮತಿ ನಯನಾ ಮಾನಕಾಪುರೆ ಅವರು ವಿವರಣೆ ನೀಡಿ ಎಲ್ಲರನ್ನು ಅಭಿನಂದಿಸುತ್ತಾ, ಧನ್ಯವಾದಗಳನ್ನು ಅರ್ಪಿಸಿದರು.

ರಾಜ್ಯೋತ್ಸವ ಕಾರ್ಯಕ್ರಮದ ನಿರ್ವಹಣೆಯಲ್ಲಿ ಜಂಟಿ ಕಾರ್ಯದರ್ಶಿ ಶ್ರೀಮತಿ ಸವಿತಾ ಭಟ್ ಅವರು ಸಹಾಯ ನೀಡಿದರು. ಉಲ್ಲಾಸಭರಿತ ಕರ್ನಾಟಕ ರಾಜ್ಯೋತ್ಸವವನ್ನು ಮಂಡಳಿಯ ಎಲ್ಲಾ ಮಹಿಳೆಯರು ಉತ್ಸಾಹ, ಸಂಭ್ರಮದಿಂದ ಆಚರಿಸಿದರು. ಜೈ ಕನ್ನಡಾಂಬೆ, ಜೈ ಹಿಂದ್.■

***ನಯನಾ ಮಾನಕಾಪುರೆ***
ಪ್ರಧಾನ ಕಾರ್ಯದರ್ಶಿ
ಜನಕಪುರಿ ಮಹಿಳಾ ಮಂಡಳಿ


# ನೈತಿಕ ಪ್ರಜ್ಞೆಯನ್ನು ಬೆಳೆಸಬಲ್ಲ ಕೃತಿ

**ಕೃತಿ ಅವಲೋಕನ**

ನನ್ನ ಹಿರಿಯ ಮಿತ್ರ, ಸಾಹಿತಿ ಶ್ರೀ ಜಯಪ್ರಕಾಶ್ ಪುತ್ತೂರು ಅವರ ಹೊಸ ಪುಸ್ತಕ 'ಬದುಕಲು ಬಿಡಿ ಪ್ಲೀಸ್...' ಒಂದು ವಿಭಿನ್ನ ಕೃತಿ. ಸಾಮಾಜಿಕ ಬದುಕಿನಲ್ಲಿ ಪ್ರತಿಯೊಬ್ಬರೂ ಉತ್ತಮ ನಡವಳಿಕೆಯನ್ನು ಹೊಂದಲು ಈ ಪುಸ್ತಕ ಆಶಿಸುತ್ತದೆ. ಸಹ ಜೀವಿಗಳಲ್ಲಿ ಸ್ನೇಹ, ದಯೆ, ಪ್ರೀತಿ ಇತ್ಯಾದಿಗಳನ್ನು ಹೊಂದಿ ಸಾಮರಸ್ಯದಿಂದ ಬದುಕುವಂತೆ ಪ್ರೇರಣೆ ನೀಡುವ ಇಲ್ಲಿನ ಬರಹಗಳನ್ನು ಲವಲವಿಕೆಯಿಂದ ಓದಬಹುದು.

ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿ ಉನ್ನತ ಸೇವೆಯನ್ನು ಮಾಡಿದ ಅನುಭವ ಇರುವ ಲೇಖಕರು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ನಿಕಟ ಸಂಪರ್ಕದಿಂದ ಈಗಾಗಲೇ ಕಲಾಂ ಜೀವನ ಚಿಂತನೆಗಳ ಕುರಿತು ಬರೆದ ಲೇಖನಗಳಿಂದ ಪ್ರಸಿದ್ಧರಾಗಿದ್ದಾರೆ. ಇದು ಅವರ ಆರನೇ ಕೃತಿಯಾಗಿದೆ.

ನಿಮಗೆ ವಯಸ್ಸಾಯಿತಲ್ಲಾ...ಎಂಬ ಬರಹದಲ್ಲಿ ಅವರು ವೃದ್ಧಾಪ್ಯ ಮತ್ತು ಹಿರಿತನದ ಕುರಿತ ವಿಶ್ಲೇಷಣೆಯನ್ನು ಸೊಗಸಾಗಿ ಮಾಡಿದ್ದಾರೆ. ಈ ಮೂಲಕ ಹಿರಿಯರ ಕರ್ತವ್ಯ ಮತ್ತು ಸಕಾರಾತ್ಮಕ ಅಂಶಗಳನ್ನು ಉಲ್ಲೇಖಿಸುತ್ತಾರೆ. 'ಕೆಲಸದಲ್ಲಿ ಶ್ರದ್ಧೆ ಹಾಗೂ ರಾಷ್ಟ್ರಪ್ರೇಮ' ಇನ್ನೊಂದು ಗಮನಾರ್ಹ




ಬರಹ. ಸ್ವಂತ ಶಕ್ತಿಯ ಮೇಲಿನ ನಂಬಿಕೆ ಎಂಬುದು ವೈಯಕ್ತಿಕವಾಗಿ ಮಾತ್ರವಲ್ಲ, ದೇಶದ ಅಭಿವೃದ್ಧಿಗೆ ಹೇಗೆ ಪೂರಕವಾಗಿ ಕೆಲಸ ಮಾಡಬಲ್ಲದು ಎಂಬುದನ್ನು ತಿಳಿಸುತ್ತದೆ.

ಸಜ್ಜನರು ಬೀಸಣಿಗೆಯಂತೆ ಜನರ ಕೈ ಸೇರಿ ಹಿತಾನುಭವ ಮತ್ತು ಆನಂದವನ್ನು ನೀಡಬಲ್ಲರು ಎಂಬುದನ್ನು ಲೇಖಕರು ಪ್ರತಿಪಾದಿಸುತ್ತಾರೆ. ವಿವಿಧ ಸದ್ಗುಣಗಳನ್ನು ನೆನಪಿಸಲು ಅವರು ವಚನಗಳು, ಜೈನ ಮತ್ತು ಬೌದ್ಧ ಧರ್ಮಗಳ ಸಾರವನ್ನು ಲೇಖನಗಳಲ್ಲಿ ಬಳಸಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯ ನಡುವೆ ಮಾನವೀಯ ಪ್ರಜ್ಞೆ ಮರೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಶ್ರೀ ಜಯಪ್ರಕಾಶ್ ಪುತ್ತೂರು ಅವರ 'ಬದುಕಲು ಬಿಡಿ ಪ್ಲೀಸ್' ಕೃತಿ ಸಂಜೀವಿನಿಯಂತೆ ಓದುಗರಿಗೆ ಲಭ್ಯವಾಗಿದೆ. ನಾಗರಿಕ ಬದುಕಿನಲ್ಲಿ ಮತ್ತು ಪ್ರತಿ ವ್ಯಕ್ತಿಗಳಲ್ಲೂ ನೈತಿಕ ಪ್ರಜ್ಞೆಯನ್ನು ಬೆಳೆಸಬಲ್ಲ ಉಪಯುಕ್ತ ಕೃತಿ ಇದಾಗಿದೆ.

ಬೆಂಗಳೂರಿನ ಪ್ರತಿಷ್ಠಿತ ಸಪ್ನ ಬುಕ್ ಹೌಸ್ 67ನೇ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಈ ಕೃತಿಯನ್ನು ಹೊರ ತಂದಿದೆ. ಲೇಖಕರಿಂದ ಇಂತಹ ಇನ್ನಷ್ಟು ಮೌಲಿಕ ಕೃತಿಗಳು ಬರಲಿ ಎಂದು ಆಶಿಸುತ್ತಾ ಅವರಿಗೆ ಅಭಿನಂದನೆಯನ್ನು ತಿಳಿಸುತ್ತೇನೆ.■

***ಡಾ. ವೈ. ಅವನೀಂದ್ರನಾಥ್ ರಾವ್***
ಮಾಜಿ ಉಪಾಧ್ಯಕ್ಷರು,
ದೆಹಲಿ ಕರ್ನಾಟಕ ಸಂಘ, ನವದೆಹಲಿ




ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರೂ, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿರುವ, ವಿಜ್ಞಾನಿ, ಡಾ. ಎಂ.ಎಸ್. ಶಶಿಕುಮಾರ್ ಅವರು 25.11.2023 ರಂದು ನಿಟ್ಟೆ ವಿಶ್ವವಿದ್ಯಾಲಯ, ದಾರಾಳ ಕಟ್ಟೆ, ಮಂಗಳೂರಿನಲ್ಲಿ ನಡೆದ ವಿಕಿರಣ ಜೀವಶಾಸ್ತ್ರದ ಅಂತರರಾಷ್ಟ್ರೀಯ ಸಮ್ಮೇಳನ (International Conference on Radiation Biology (ICRB)–2023) ದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಮ್ಮೇಳನವನ್ನು ನಿಟ್ಟೆ ವಿಶ್ವವಿದ್ಯಾಲಯ (ಡೀಮ್ಡ್ ಟುಬಿ ಯೂನಿವರ್ಸಿಟಿ), ಇಂಡಿಯನ್ ಸೊಸೈಟಿ ಆಫ್ ರೇಡಿಯೇಷನ್ ಬಯಾಲಜಿ (ISRB) ಮತ್ತು ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಣಿಪಾಲ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿತ್ತು.

ಸಮ್ಮೇಳನದಲ್ಲಿ ಡಾ. ಎಂ ಎಸ್ ಶಶಿಕುಮಾರ್ ಅವರು Application of Radiation and Radio Biological Research in Public Health ಕುರಿತು ವಿಶೇಷ ಮಾಹಿತಿ ನೀಡಿ, ತಮ್ಮ ಅನುಭವಗಳನ್ನು ಮತ್ತು ಅನಿಸಿಕೆಗಳನ್ನು ಹಂಚಿಕೊಂಡರು. ಮೂರು ದಿನಗಳು ನಡೆದ ಈ ಸಮ್ಮೇಳನದಲ್ಲಿ, ಮೂರೂ ಆಯೋಜಕ ಸಂಸ್ಥೆಗಳ ವಿಜ್ಞಾನಿಗಳು, ವಿಶೇಷಜ್ಞರು, ತಂತ್ರಜ್ಞರು, ಹಿರಿಯ ಅಧಿಕಾರಿಗಳು ಮತ್ತು ಅನೇಕ ಆಸಕ್ತರು ಪಾಲ್ಗೊಂಡಿದ್ದರು.■

## ಅಭಿನಂದನೆ



ಸಂಘದ ಆಜೀವ ಸದಸ್ಯರಾದ ಶ್ರೀ ಎಸ್.ವಿ. ನಿಂಗಪ್ಪನವರ ಸುಪುತ್ರ ಶ್ರೀ ಅರವಿಂದ ವೀರಶೆಟ್ಟಿ ಅವರು ಯುಎಸ್‌ಎ ನಲ್ಲಿ ವರ್ಲ್‌ಪೂಲ್ ಕಂಪನಿಯ ಇತಿಹಾಸದಲ್ಲಿ ಉಪಾಧ್ಯಕ್ಷ ಹುದ್ದೆಯನ್ನು ಅಲಂಕರಿಸಿರುವ ಮೊದಲ ಭಾರತೀಯನೆಂಬ ಹೆಗ್ಗಳಿಕೆ ಗಳಿಸಿದ್ದಾರೆ. ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜು ಎನ್‌ಐಇ (NIE) ಯಿಂದ 2000ರಲ್ಲಿ ಮೈಸೂರು ವಿ.ವಿ. ಯ 6ನೇ ರಾಂಕ್ ನೊಂದಿಗೆ ಬಿ.ಇ. (ಮೆಕ್ಯಾನಿಕಲ್ ಇಂಜಿನಿಯರಿಂಗ್) ಪದವಿಯನ್ನು ಪಡೆದ ಇವರು ನಂತರ ಅಮೇರಿಕಾದಲ್ಲಿ ಕೆಲ್ಲಿ ಸ್ಕೂಲ್ ಆಫ್ ಬ್ಯುಸಿನೆಸ್, ಇಂಡಿಯಾನಾ ಯೂನಿವರ್ಸಿಟಿ ಯಿಂದ ಎಂ.ಬಿ.ಎ. (ಮಾರ್ಕೆಟಿಂಗ್ ಮತ್ತು ಹಣಕಾಸು) ಪದವಿಯನ್ನು ಪಡೆದಿರುತ್ತಾರೆ.

ಪ್ರಸ್ತುತ ಯುಎಸ್‌ಎ ನಲ್ಲಿರುವ ಮಿಚಿಗನ್ ರಾಜ್ಯದ ಜೆನ್ನ್ ಏರ್ ಲಕ್ಸ್ಯುರಿ ಅಪ್ಪಲಯನ್ಸ್, (Genn Air Luxury Appliances) ವರ್ಲ್‌ಪೂಲ್, ಬೆಂಟನ್ ಬಂದರಿನಲ್ಲಿ, 20 ನೇ ನವೆಂಬರ್ 2023 ರಿಂದ ಉಪಾಧ್ಯಕ್ಷನಾಗಿ ನೇಮಕವಾಗಿದ್ದಾರೆ.

ಪ್ರತಿಭಾವಂತ ಕನ್ನಡಿಗರಾದ ಶ್ರೀ ಅರವಿಂದ ವೀರಶೆಟ್ಟಿ, ಅವರು ಅಮೆರಿಕಾದ ಪ್ರತಿಷ್ಠಿತ ಬಹು ರಾಷ್ಟ್ರೀಯ ಕಂಪನಿಯೊಂದರಲ್ಲಿ ಉನ್ನತ ಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿರುವುದು ಎಲ್ಲ ಕನ್ನಡಿಗರಿಗೆ ಹೆಮ್ಮೆಯ ವಿಷಯ. **ಸಮಸ್ತ ದೆಹಲಿ ಕನ್ನಡಿಗರ ಪರವಾಗಿ, ಅಭಿಮತವು ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ತಿಳಿಸುತ್ತಿದೆ.■**

**ಪುಟ : 23 ರಿಂದ**

ಮಾಡಿದರು. ಇದೇ ವಿಷಯದ ಮೇಲೆ ಐಎಫ್‌ಎಸ್ ಅಧಿಕಾರಿ ಡಾ. ಡಿ. ಮಂಜುನಾಥ್ ಅವರು ಸಮನ್ವಯ ಮಾತುಗಳನ್ನಾಡಿದರು.

ನವದೆಹಲಿಯ ಕು. ಕಾವ್ಯಾಂಶ್ ಅವರು 'ಚಂದ್ರನ ಅಂಗಳದಲ್ಲಿ ನಾವು ನೀವು, ನಮ್ಮ ಭಾರತ ನಮ್ಮ ಹೆಮ್ಮೆ' ಎನ್ನುವ ವಿಷಯದ ಕುರಿತು ವಿಚಾರ ಮಂಡಿಸಿದರು. ಈ ವಿಷಯದ ಮೇಲೆಯೇ ನಿಕಟಪೂರ್ವ ಸರ್ವ ಅಧ್ಯಕ್ಷರಾದ ಕು. ವೈಷ್ಣವಿ ಎನ್. ಅವರು ಕೂಡ ತಮ್ಮ ವಿಚಾರ ಮಂಡಿಸಿದರು. ನೀತಿ ಆಯೋಗದ ಉಪಸಲಹೆಗಾರರಾದ ಡಾ. ತ್ಯಾಗರಾಜು ಬಿ.ಎಂ. ಅವರು ವಿಚಾರವನ್ನು ಸಮನ್ವಯಗೊಳಿಸಿದರು. ಮಹಾರಾಷ್ಟ್ರದ ಕುಮಾರಿ ಸ್ನೇಹಾ ಸುಭಾಷ್ ಕೆರೂರು ಅವರು 'ಮಕ್ಕಳಿಗೆ ದೇಶಿ ಜಾನಪದ ಕಲೆಗಳ ಪರಿಚಯ ಅವಶ್ಯಕತೆ' ಎನ್ನುವ ವಿಷಯದ ಮೇಲೆ ತಮ್ಮ ವಿಚಾರಧಾರೆಯನ್ನು ಪ್ರಸ್ತುತಪಡಿಸಿದರು. ನವದೆಹಲಿಯ ಕುಮಾರ್ ನಿಕ್ಷಿತ್ ಕೆ. 'ಕನ್ನಡತನ ಕಟ್ಟುವಲ್ಲಿ ಹೊರನಾಡ ಕನ್ನಡಿಗರ ಪಾತ್ರ ಹಾಗೂ ಸವಾಲುಗಳು' ಎಂಬ ವಿಷಯ ಕುರಿತಾಗಿ ವಿಚಾರ ಮಂಡನೆ ಮಾಡಿದರು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಯುವ ಸಾಹಿತಿ, ಡಾ. ಹೆಚ್. ಲಕ್ಷ್ಮೀನಾರಾಯಣ ಸ್ವಾಮಿಯವರು ಸಮನ್ವಯಗೊಳಿಸಿದರು. ಈ ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಸಮ್ಮೇಳನದ ಸಹ ಅಧ್ಯಕ್ಷರಾದ ಕು.ವೆಂಕಟೇಶ ಕುಲಕರ್ಣಿ ತಮ್ಮ ಅಧ್ಯಕ್ಷ ನುಡಿಗಳನ್ನಾಡಿದರು.

ಈ ವಿಚಾರ ಗೋಷ್ಠಿಯಲ್ಲಿ ಪರಿಷತ್ತಿನ ಧಾರವಾಡ ಜಿಲ್ಲಾಧ್ಯಕ್ಷರಾದ ಶ್ರೀ ಸಂಜೀವ ಧುಮಕನಾಳ, ಚಿಕ್ಕಮಗಳೂರು ಜಿಲ್ಲಾಧ್ಯಕ್ಷರಾದ ಶ್ರೀ ಮಲ್ಲಿಗೆ ಸುಧೀರ್ ಮತ್ತು ಕೋಲಾರ ಜಿಲ್ಲಾಧ್ಯಕ್ಷರಾದ ಶ್ರೀ ಕಾ.ಹು. ಚಾನ್ ಪಾಷ ಅವರು ಮುಖ್ಯ ಅತಿಥಿಗಳಾಗಿದ್ದರು. ಪತ್ರಕರ್ತರಾದ ಮಂಜುನಾಥ್ ಎಚ್. ಎಸ್, ಶ್ರೀ ನಂದನ್ ಪುಟ್ಟಣ್ಣ, ದಯಾನಂದ್ ಎಸ್.ಪಿ, ಶ್ರೀ ಮಂಜುನಾಥ ಐ.ಕೆ., ನಟೇಶ್ ಎ, ಶ್ರೀ ಶಶಿಧರ್ ಸಿ.ಎನ್. ಗೌರವ ಉಪಸ್ಥಿತರಿದ್ದರು. ನವದೆಹಲಿಯ ಕು. ಕವನ ನರಶೆಟ್ಟಿ ಎಲ್ಲರನ್ನೂ ಸ್ವಾಗತಿಸಿದರು. ಗುರುಗಾವ್ರದ ಕು.ಸಹನಾ ತಿಮ್ಮಪ್ಪ ವಂದನೆ ಅರ್ಪಿಸಿದರು. ಗುರುಗ್ರಾಮದ ಕು. ಸಂಚಿತಾ ನಿಲೂರ ತುಂಬಾ ಚೆನ್ನಾಗಿ ಕಾರ್ಯಕ್ರಮವನ್ನು ನಿರೂಪಿಸಿದರು.



ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ 'ಮಕ್ಕಳ ಸಾಹಿತ್ಯ ಪರಿಷತ್ತು ಮಕ್ಕಳೇ ಇಲ್ಲಿನ ಸಂಪತ್ತು' ಎಂಬ ವಿಶ್ವ ಕುರಿತು ವಿಚಾರಮರ್ಶೆ ಮಾಡಲಾಯಿತು. ಸಂವಾದದ ಅಧ್ಯಕ್ಷತೆಯನ್ನು ಸಮ್ಮೇಳನದ ಸಹ ಅಧ್ಯಕ್ಷರಾದ ಕು. ರಕ್ಷಿತಾ ಕಾಶಿನಾಥ ರಾಮತೀರ್ಥ ವಹಿಸಿದ್ದರು. ಪರಿಷತ್ತಿನ ಗದಗ ಜಿಲ್ಲಾಧ್ಯಕ್ಷರಾದ ಡಾ. ರಾಜೇಂದ್ರ ಗಡಾದ ಅವರು ನಿರ್ವಹಣೆ ಮತ್ತು ಸಮನ್ವಯ ನಡೆಸಿದರು. ಸಂವಾದದಲ್ಲಿ ಕು. ಕೀರ್ತನಾ ನಾಯಕ್, ಕು. ಅಭಿಷೇಕ್ ಉಭಾಳೆ, ಕು. ಚಂದನಾ ಹೆಚ್. ವಿ., ಕು. ವೈಷ್ಣವಿ ರಾವ್, ಕು. ಶಾಮಪ್ರಸಾದ್, ಕು. ಆಕಾಶ್, ಕು. ಅನೀಶ್ ಕೊಪ್ಪ, ಹಾಗೂ ಇಂದಿನ ಸಮ್ಮೇಳನದ ಸಹ ಅಧ್ಯಕ್ಷರಾದ ಕು. ನೂತನ ಕೈಕಾಡೆ, ಕು. ಸ್ವಾತಿ ನಾಯ್ಕ್, ಮತ್ತು ಕು. ವೆಂಕಟೇಶ್ ಕುಲಕರ್ಣಿ ಭಾಗವಹಿಸಿದ್ದರು. ಕು. ಸ್ವಾತಿ ನಾಯಕ್ ಸ್ವಾಗತಿಸಿದರು, ಕು.ಸಾಹಿಶ್ರೀ ದೇಸಾಯಿ ನಿರೂಪಣೆ ಮಾಡಿದರು, ಕು. ಅಧೋಕ್ಷಜ ವಂದನೆಗಳನ್ನು ಅರ್ಪಿಸಿದರು.

ಸಭಾ ಕಾರ್ಯಕ್ರಮಗಳ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸ್ಥಳೀಯ ಭಿವಾಡಿ, ಗುರುಗ್ರಾಮ ಮತ್ತು ದೆಹಲಿಯ ಕನ್ನಡ ಮಕ್ಕಳು, ಕರ್ನಾಟಕದಿಂದ ಬಂದ ಜಾನಪದ ಕಲಾತಂಡಗಳು ಹಾಗೂ ಜೀ–ಕನ್ನಡ ಸ.ರಿ.ಗ.ಮ.ಪ ಹಾಗೂ ಡ್ರಾಮಾ ಜೂನಿಯರ್ಸ್ ಬಾಲ ಕಲಾವಿದರು ವಿಶೇಷ ಸಂಗೀತ ಮತ್ತು ಹಾಸ್ಯ ಕಾರ್ಯಕ್ರಮಗಳಿಂದ ಹೊರನಾಡಿನಲ್ಲಿ ಕನ್ನಡಿಗರನ್ನು ಮನರಂಜಿಸಿದರು. ಬೆಳಿಗ್ಗೆ 8:00 ಗಂಟೆಯಿಂದ ರಾತ್ರಿ 11.30ಗಂಟೆವರೆಗೂ ನಡೆದ ಸಮ್ಮೇಳನದ ಪ್ರತಿಯೊಂದು ಕಾರ್ಯಕ್ರಮಗಳು ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾದವು. ಕರ್ನಾಟಕದಿಂದ ಬಂದಿದ್ದ 400ಕ್ಕೂ ಹೆಚ್ಚು ಮಕ್ಕಳು, ಪೋಷಕರು ಸೇರಿದಂತೆ ದೆಹಲಿ ಎನ್‌ಸಿಆರ್‌ನ ಸುಮಾರು 500ಕ್ಕೂ ಹೆಚ್ಚು ಮಕ್ಕಳು, ಪೋಷಕರು ಹಾಗು ಹೊರನಾಡ ಕನ್ನಡಿಗರು ಭಾಗವಹಿಸಿ ಸಾಕ್ಷಿಯಾಗಿದರು.■

**ಅರವಿಂದ ಬಿಜ್ಜೈ**

ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ದೆಹಲಿ ಘಟಕ

Delhi Karnataka Sangha Abhimata
Dec -2023, Vol. No.34, Issue No. 3, Price Rs.1/-
RNI Regn. No. 53405/91, DL-SW-01/4016/22-24
Date of Publication : Dec 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy



ದೆಹಲಿ
ಕರ್ನಾಟಕ ಸಂಘದಲ್ಲಿ
26.11.2023 ರಂದು
ಆಯೋಜನೆಗೊಂಡ ಕರ್ನಾಟಕ
ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ
ಪ್ರಸ್ತುತಿಗೊಂಡ ವೈವಿಧ್ಯಮಯ
ಜಾನಪದ ಕಲಾ ಪ್ರಕಾರಗಳ
ದೃಶ್ಯ ಸಂಭ್ರಮ











